ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 | ಸಂಚಿಕೆ 7 | ಫೆಬ್ರವರಿ 10-16 1997 | ಬೆಲೆ ರೂ. 2.00

ಅತ್ತ ಮಾಲಕರ ಲಾಭದಾಹ-ಇತ್ತ ಪೋಲೀಸರ ರಕ್ತ ದಾಹ

ಬಡ ದುಡಿಮೆಗಾರರ ಬದುಕಿನೊಂದಿಗೆ ಚೆಲ್ಲಾಟ

- ಇದ್ದಕ್ಕಿದ್ದಂತೆ ಹೊರಗೆ ಜನಗಳು ಓಡುವ ಸದ್ದು, ಗುಂಡಿನ ಸದ್ದು. ಸೀತಮ್ಮ ಬಾಗಿಲು ತೆರೆದಳು. ಕ್ಷಣಾರ್ಧದಲ್ಲಿ ನೆಲಕ್ಕೆ ಬಿದ್ದಳು. ಬೆನ್ನಿನಿಂದ ತೂರಿ ಬಂದ ಗುಂಡು ಎದೆಯಿಂದ ಹೊರಬಂದಿತ್ತು. ಹದಿನೆಂಟು ವರ್ಷದ ಸೀತಮ್ಮನಿಗೆ, ಮದುವೆಯಾಗಿ ಒಂದು ವರ್ಷವೂ ಆಗಿರದ ಸೀತಮ್ಮನಿಗೆ, ವಳ್ಳಿಯಪ್ಪ ಕಾರ್ಖಾನೆಯಲ್ಲಿ ಕೊಡುವ ಅಲ್ಪ ದಿನಗೂಲಿಯಿಂದ ತನ್ನ ಮಗುವನ್ನು ಸಾಕುವುದು ಹೇಗೆ ಎಂಬ ಯೋಚನೆಯಿಂದ ಪೋಲೀಸರ ಗುಂಡು, ಮಗಳನ್ನು ಉಳಿಸಿಕೊಳ್ಳಲು ಧಾವಿಸಿದ ತಾಯಿ ಆನಂದವಲ್ಲಿಯ ಕೈಯನ್ನು ಸೀಳಿ ಹೋದ ಗುಂಡು 'ಮುಕ್ತಿ' ನೀಡಿತು!
- ಸ್ವಲ್ಪ ದೂರದಲ್ಲೇ ಮತ್ತೊಬ್ಬ ಯುವಕ ಧರೆಗುರುಳಿದ - ಅತನ ಎದೆ ಸೀಳಿಕೊಂಡು ಹೋಗಿದ್ದ ಪೋಲೀಸ್ ಗುಂಡು ಈ 19 ವರ್ಷದ ತರುಣನನ್ನು, ತನ್ನ ಮೂವರು ತಂಗಿಯರು, ವಯಸ್ಸಾದ ಕಾಯಿಲೆಯ ತಂದೆ-ತಾಯಿ, ಒಬ್ಬ ತಮ್ಮನಿಂದ ಕಸಿದುಕೊಂಡಿತಲ್ಲದೇ, ಅವರ ಬಾಯಿಯ ಅನ್ನವನ್ನೂ ಕಸಿದುಕೊಂಡಿತು.
- ನೋಡ ನೋಡುತ್ತಿದ್ದಂತೆ 23 ವರ್ಷದ ನಾಗರಾಜು, ತನ್ನ ಅಣ್ಣನ ಜತೆ ಬಂದಿದ್ದ 17 ವರ್ಷದ ನಾಗರಾಜ್, ಗದ್ದೆಯಲ್ಲಿ ಕೂಲಿಗೆಂದು ಹೊರಟಿದ್ದ 26 ವರ್ಷದ ಚಿಕ್ಕವೆಂಕಟಮ್ಮ 30 ವರ್ಷದ ಯಶೋಧಾ, 38 ವರ್ಷದ ಶಿವರುದ್ರಯ್ಯ, 60 ವರ್ಷದ ಮುತ್ತಯ್ಯ ಶಿವನಂಜಯ್ಯ, ಡಿ.ಎನ್. ನಾಗರಾಜ್, ನಾಗಮಂಗಲಯ್ಯ, ಪುಟ್ಟರೇವಯ್ಯ..... 22 ಮಂದಿ ಮೊಣಕಾಲನ್ನೋ, ಸೊಂಟವನ್ನೋ, ಭುಜವನ್ನೋ ಸೀಳಿಹೋದ ಪೋಲೀಸ್ ಗುಂಡುಗಳಿಂದ ತತ್ತರಿಸಿ ಬಿದ್ದರು.



ಫೆಬ್ರವರಿ 4ರಂದು ಪೋಲೀಸ್ ಮಹಾ ನಿರ್ದೇಶಕರ ಕಚೇರಿಯೆದುರು ಬೆಂಗಳೂರಿನ ದುಡಿಯುವ ಜನಗಳ ಸಾತ್ವಿಕ ಸಿಟ್ಟಿನ ಅಭಿವ್ಯಕ್ತಿ

ಇದು ಫೆಬ್ರವರಿ 3, 1997ರ ಬೆಳಿಗ್ಗೆ ಸುಮಾರು 10.30ರ ವೇಳೆಗೆ ಬೆಂಗಳೂರಿನಿಂದ 20 ಕಿ.ಮೀ. ದೂರದಲ್ಲಿರುವ ಹೆಜ್ಜಾಲದಲ್ಲಿ ಕಂಡು ಬಂದ ದೃಶ್ಯ. ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಕಾರ್ಖಾನೆಯ ಕಾರ್ಮಿಕರು ತಮ್ಮ ದೀರ್ಘ ಕಾಲದ ಕಾನೂನುಬದ್ಧ ಬೇಡಿಕೆಗಳ ಈಡೇರಿಕೆಗೆ ನಿರ್ವಾಹವಿಲ್ಲದೆ ರಸ್ತೆ ತಡೆ ಕಾರ್ಯಕ್ರಮ ನಡೆಸುತ್ತಿದ್ದ ಸ್ಥಳಕ್ಕಿಂತ ಅರ್ಧ ಕಿ.ಮೀ. ದೂರದಲ್ಲಿನ ದೃಶ್ಯ.

ಪೋಲೀಸರ ರಕ್ತದಾಹ ಇನ್ನೂ ಅಡಗಿರಲಿಲ್ಲ. ಬಿದ್ದವರನ್ನು ಎತ್ತುವ ಕೆಲಸ ಅವರದಾಗಿರಲಿಲ್ಲ. ಅವರ ಜೀಪುಗಳು, ವ್ಯಾನುಗಳು, ವೈರ್‌ಲೆಸ್‌ಗಳು, ಫೋನುಗಳಿಗೆ ಬೇರೆಯೇ ಕೆಲಸವಿತ್ತು. ಆದ್ದರಿಂದ ಕಾರ್ಮಿಕ ಸಂಘಟನೆಯ ಮುಖಂಡರೇ, ಕಾರ್ಯಕರ್ತರೇ ಹಾಗೂ ಕಾರ್ಮಿಕರಿಗೆ ಸೌಹಾರ್ದ ವ್ಯಕ್ತಪಡಿಸಲು ಬಂದ ಯುವಜನರೇ ಎಲ್ಲರನ್ನೂ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿದರು.

ಕ್ಷಣಾರ್ಧದಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ಎಮರ್ಜೆನ್ಸಿ ವಾರ್ಡಿನ ಚಿತ್ರವೇ ಬದಲಾಯಿತು. ರಕ್ತದ ಹೊಳೆ, ಚೀರಾಟ, ನರಳಾಟ. ಆದರೂ ಆಸ್ಪತ್ರೆ ಸಿಬ್ಬಂದಿಯ ಹಿಂಜರಿಕೆ. ಗಾಯಗೊಂಡವರನ್ನು ಉಳಿಸಲು ರಕ್ತಕ್ಕಾಗಿ ನಡು ರಾತ್ರಿಯಲ್ಲಿ ಎಸ್‌ಎಫ್‌ಐ, ಡಿವೈಎಫ್‌ಐ, ಕಾರ್ಮಿಕ ಕಾರ್ಯಕರ್ತರ ಓಡಾಟ. ಗುಂಡು ಎಡಕಾಲಿಂದ ಒಳಹೊಕ್ಕು ಬಲ ತೊಡೆಯನ್ನು ಸೀಳಿ ಹೋಗಿದ್ದ 23 ವರ್ಷದ ನಾಗರಾಜ್ ಮೂರನೇ ಬಲಿಯಾದ. ಈತ ವಳ್ಳಿಯಪ್ಪ ಕಾರ್ಖಾನೆಯ ಮತ್ತೊಬ್ಬ ಕಾರ್ಮಿಕ. ಒಂದೂವರೆ ವರ್ಷದ ಮಗುವಿನ ತಂದೆ. ಹೆಂಡತಿ, ಮಗು ಮತ್ತು ಇನ್ನು ನಾಲ್ಕು ತಿಂಗಳಲ್ಲೇ ಬರಲಿದ್ದ ಮತ್ತೊಂದು ಮಗು ಅನಾಥರಾದರು.

ಅದೇ ಹೆಸರಿನ ಮತ್ತೊಬ್ಬ ಯುವಕ. ಆದರೆ ವಯಸ್ಸು ಕೇವಲ 17. ವಳ್ಳಿಯಪ್ಪ ಕಾರ್ಖಾನೆಯ ಕಾರ್ಮಿಕನ ತಮ್ಮ. ಎಡ ಮಣಿಗಂಟಿನಿಂದ ತೂರಿ ಹೋದ ಗುಂಡು ಎಡ ತೊಡೆಯ ಎಲುಬನ್ನು ಹೊಕ್ಕಿತ್ತು. ಹೇಗೋ ಸಾವಿನಿಂದ ಪಾರಾಗಿದ್ದಾನೆ. ಆದರೆ ಕಾಲು ಏನಾಗುತ್ತೋ ಎಂಬ ಭಯದ ಕರಿನೆರಳು.


ಗಾಯಾಳುಗಳನ್ನು ಬದುಕುಳಿಸುವ ತರಾತುರಿಯ ಯುವಜನರ, ಕಾರ್ಮಿಕರ ಓಡಾಟಗಳ ನಡುವೆಯೇ ಆರಂಭವಾಯಿತು ಮೊಸಳೆ ಕಣ್ಣೀರಿನ ಜನರ ಆಗಮನ. ಕಳೆದ ಮೂರು ವರ್ಷಗಳಿಂದ ಕಾರ್ಮಿಕರು ಸತತ ಹೋರಾಟದಲ್ಲಿದ್ದಾಗ, ಆ ದಿನ ರಸ್ತೆ ತಡೆ ಮಾಡುವಾಗಲೂ ಬೆಂಬಲದ ಒಂದು ಮಾತನ್ನೂ ಆಡದ ಗರಿಗರಿ ಬಿಳಿ ಖಾದಿಯ ಜನ ಬಂದರು. ಬರುವಾಗಲೇ ಪತ್ರಿಕಾ ಸಮ್ಮೇಳನದಲ್ಲಿ ಜನತಾದಳದ ಮುಖಂಡರ ಮೇಲೆ ಆರೋಪ ಹೊರಿಸಿ, ಅದನ್ನು ಆಸ್ಪತ್ರೆಯ ಆವರಣದಲ್ಲೆಲ್ಲಾ ಹರಡಿಸುತ್ತಾ ಬಂದರು. "ದಯವಿಟ್ಟು ಮಧ್ಯಪ್ರವೇಶಿಸಿ, ಕಾರ್ಮಿಕ ವಿರೋಧಿ ನಿಲುವಿನ ಮಾಲಕನಿಗೆ ಬುದ್ಧಿ ಹೇಳಿ" ಎಂದು ಎಷ್ಟು ಗೋಗರೆದರೂ ಕೇಳಿರದಿದ್ದ ಜನತಾದಳದ ಸರಕಾರದ ಮಂತ್ರಿಗಳ ಬಿಳಿ ಕಾರುಗಳೂ ಬಂದವು, ಹೋದವು. ಹೊರಗೆ ಪತ್ರಿಕೆಗಳಲ್ಲಿ ಜನತಾದಳ, ಕಾಂಗ್ರೆಸ್, ಬಿಜೆಪಿ ರಾಜಕಾರಣಿಗಳ ಪರಸ್ಪರ ದೂಷಣೆಗಳ ಕಲ್ಲುತೂರಾಟ, ಒಳಗೆ ಪೋಲೀಸರ ಗುಂಡುಗಳಿಗೆ ನೆಲಕ್ಕುರುಳಿದ ಜನಗಳ ನೆರವಿಗೆ ಧಾವಿಸಿದ ಕಾರ್ಮಿಕರಿಗೆ, ಯುವಜನರಿಗೆ, ವಿದ್ಯಾರ್ಥಿಗಳಿಗೆ ಸಾವಿನೊಂದಿಗೆ ಸೆಣಸಾಟ.

ಏಕೆ ಈ ಭಯಾನಕ "ಶಿಕ್ಷೆ"?

ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಕಾರ್ಖಾನೆಯ ಕಾರ್ಮಿಕರಿಗೆ ಪೋಲೀಸರಿಂದ ಏಕೆ ಈ ಭಯಾನಕವಾದ ಶಿಕ್ಷೆ? ಅವರ ಗಹನ ಅಪರಾಧವಾದರೂ ಏನು ? 'ಐಕ್ಯರಂಗ'ದ ಓದುಗರಿಗೆ ಅವರ ಹೋರಾಟದ ಬಗ್ಗೆ ಈಗಾಗಲೇ ತಿಳಿದಿದೆ (ಈ ವರ್ಷದ ಸಂಚಿಕೆ 2-ಜನವರಿ 6-12 ಹಾಗೂ ಸಂಚಿಕೆ 3 -ಜನವರಿ 13-19 ನೋಡಿ) ಕಳೆದ ಮೂರು ವರ್ಷಗಳಲ್ಲಿ ಮೂರನೇ ಬಾರಿ ತಮ್ಮ ಕಾನೂನುಬದ್ಧ ಬೇಡಿಕೆಗಳ ಈಡೇರಿಕೆಗಾಗಿ, ಲೇಬರ್ ಇಲಾಖೆಯನ್ನು,

ಪುಟ 4 ನೋಡಿ

ಜವಳಿ ಉದ್ಯಮಿ ವಳ್ಳಿಯಪ್ಪನವರ ಲಾಭದಾಹಕ್ಕೆ, ಅದಕ್ಕೆ ಶರಣಾದ ಪೋಲೀಸ್ ಅಧಿಕಾರಿಗಳ ರಕ್ತದಾಹಕ್ಕೆ ಮೊದಲ ಬಲಿ 18 ವರ್ಷದ ಸೀತಾ.



ದುಡಿಯುವ ಜನಗಳಿಗೆ ಮಾತ್ರ 'ರೋಸಿಹೋಗುವ' ಹಕ್ಕಿಲ್ಲವೇ?

ಎರಡು ವಾರಗಳ ಹಿಂದೆ ಮಂಗಳೂರಿನಲ್ಲಿ ಹೆಂಚಿನ ಕಾರ್ಮಿಕರ ಪಿಕೆಟಿಂಗ್‌ನಿಂದ ಜಿಲ್ಲಾಧಿಕಾರಿಯ ಕಾರಿಗೆ ಇಪ್ಪತ್ತು ನಿಮಿಷ ತಡೆಯಾದಾಗ ಆತ "ರೋಸಿ ಹೋಗಿ" ಕಾರ್ಮಿಕರ ಮೇಲೆ ಲಾಠಿ ಪ್ರಹಾರ ಮಾಡಲು ಆಜ್ಞಾಪಿಸಿದ. ಈ ಕಾರ್ಮಿಕರು ಹತ್ತು ವರ್ಷಗಳಿಂದ ತಮ್ಮ ಕನಿಷ್ಟ ಕೂಲಿಯ ಪರಿಷ್ಕರಣೆಗಾಗಿ ಕಾಯುತ್ತಿದ್ದಾರೆ, ಇದು ಅವರ ಹಕ್ಕು ಕೂಡಾ ಎಂದು ಆತನಿಗೆ ಗೊತ್ತಿರಲಿಲ್ಲವೇ?

ಈ ವಾರ ಬೆಂಗಳೂರಿನ ಹೆಜ್ಜಾಲದಲ್ಲಿ ಬಟ್ಟೆ ಗಿರಣಿ ಕಾರ್ಮಿಕರು ಒಂದು ಪ್ರತಿಭಟನಾ ಕಾರ್ಯಾಚರಣೆಯಿಂದಾಗಿ ಮೈಸೂರು ರಸ್ತೆಯಲ್ಲಿ ವಾಹನ ಸಂಚಾರ ಒಂದು ಗಂಟೆ ನಿಂತು ಹೋದುದನ್ನು ಕಂಡು "ರೋಸಿ ಹೋದ" ಪೋಲೀಸ್ ಸೂಪರಿಂಟೆಂಡೆಂಟ್ ಒಮ್ಮೆಗೇ ಲಾಠಿ, ಅಶ್ರುವಾಯು, ಗುಂಡೇಟಿನ ಧಾಳಿಗಿಳಿದ, ಮೂವರ ಬಲಿ ತೆಗೆದುಕೊಂಡ. ದೇಶದ ಕಾನೂನೇ ನೀಡಿರುವ ಕನಿಷ್ಟ ಸೌಲಭ್ಯಗಳಿಗಾಗಿ ಮೂರು ವರ್ಷ ಮುಖ್ಯಮಂತ್ರಿಗಳವರೆಗೂ ಎಲ್ಲರನ್ನೂ ಕಂಡು ಬೇಸತ್ತು ನಿರುಪಾಯವಾಗಿ ಕಾರ್ಮಿಕರು ಈ ಕಾರ್ಯಾಚರಣೆಗಿಳಿಯಬೇಕಾಗಿ ಬಂತು ಎಂದು ಆ ಪೋಲೀಸ್ ಸೂಪರಿಟೆಂಡೆಂಟ್‌ಗೆ ತಿಳಿದಿರಲಿಲ್ಲವೇ?

ಗೊತ್ತಿತ್ತು, ತಿಳಿದಿತ್ತು. ಆದರೂ ಏಕೆ ಈ ದಮನ? ಏಕೆ ಬಡ ದುಡಿಯುವ ಜನರ ಬದುಕಿನೊಂದಿಗೆ ಚೆಲ್ಲಾಟ? "ರೋಸಿ ಹೋಗುವ" ಹಕ್ಕು ಅಧಿಕಾರ ಶಾಹಿಗಳಿಗಷ್ಟೇ, ಸಮಾಜದ ಶ್ರೀಮಂತ, ಬಲ್ಲಿದ ವರ್ಗಗಳಿಗಷ್ಟೇ ಮೀಸಲಾಗಿದೆಯೇ? ಬದುಕುಳಿಯಲು ಕನಿಷ್ಟ ಕೂಲಿ, ತುಂಡು ಭೂಮಿಯನ್ನು ಕೇಳುವ ಕೃಷಿ ಕೂಲಿಕಾರರ ಮೇಲೇಕೆ ಪೋಲೀಸ್ ಅತ್ಯಾಚಾರ? ನಮ್ಮ ಸ್ವಾತಂತ್ರ್ಯದ ಚಿನ್ನದಹಬ್ಬ ಆಚರಿಸುವ ವರ್ಷದಲ್ಲೂ ಇಂತಹ ದಮನ ಪ್ರಕ್ರಿಯೆ ಹೆಚ್ಚುತ್ತಿದೆಯೇಕೆ? ಇದು ಎಲ್ಲಾ ಸ್ವಾತಂತ್ರ್ಯ ಪ್ರೇಮಿಗಳು, ಪ್ರಜಾಪ್ರಭುತ್ವವಾದಿಗಳು ಕೇಳುವಪ್ರಶ್ನೆ.

ಈ ವಳ್ಳಿಯಪ್ಪ ಟೆಕ್ಸ್‌ಟೈಲ್ಸ್‌ನ ಮಾಲಕ ಇದೇ ಪೋಲೀಸ್ ಸೂಪರಿಂಟೆಂಡೆಂಟ್ ಕರೆದರೂ ಆತನ ಸಮ್ಮುಖದಲ್ಲಿ ಕಾರ್ಮಿಕರ ಪ್ರತಿನಿಧಿಗಳೊಂದಿಗೆ ಮಾತನಾಡಲು ನಿರಾಕರಿಸಿ ಹಿರಿಯ ಪೋಲೀಸ್ ಅಧಿಕಾರಿಯೆದುರೇ ಕಾನೂನಿನ ಉಲ್ಲಂಘನೆ ಮಾಡುತ್ತಾನೆ. ಆದರೆ ಆ ಕಾನೂನುಪಾಲಕ ಹಿರಿಯ ಅಧಿಕಾರಿ 'ಮನೆಯಲ್ಲಿ ಸುಮ್ಮನಿರುವ ಬದಲು ಮಾಲಕ ಕೊಡುವ ೧೦ ರೂ. ಕೂಲಿಗೆ ಕೆಲಸ ಮಾಡಬಾರದೇ' ಎಂದು ಕಾರ್ಮಿಕ ಮುಖಂಡರನ್ನೇ ಕೇಳುತ್ತಾನೆ! ಬಡ ಅಸಂಘಟಿತ ಕಾರ್ಮಿಕರ ಶೋಷಣೆ ತಪ್ಪಿಸಲು, ಅವರಿಗೆ ಕಾನೂನು ನೀಡಿರುವ ರಕ್ಷಣೆಯನ್ನು ಕೊಡಬೇಕೆಂದು ಕೇಳಿದರೆ ಇನ್ನೂ ಉನ್ನತ ಸ್ಥಾನದಲ್ಲಿರುವ ಮತ್ತೊಬ್ಬ ಪೋಲೀಸ್ ಅಧಿಕಾರಿ ಕಾರ್ಮಿಕರ ಸಂಘಟನೆಯ, ಮುಷ್ಕರದ ಸಂವಿಧಾನಬದ್ಧ ಹಕ್ಕನ್ನೇ ಪ್ರಶ್ನಿಸುತ್ತಾನೆ. ತಾನು ಒಬ್ಬ ಹಿರಿಯ ಕಾರ್ಮಿಕ ಮುಖಂಡರ ಮೇಲೆ ಹಾಕಿದ ಕೊಲೆ ಪ್ರಯತ್ನದ ಆರೋಪ ಸಂಪೂರ್ಣ ಸುಳ್ಳು ಎಂದು ಸಾಬೀತಾಗಿರುವ ಲಜ್ಜಾಸ್ಪದ ಅನುಭವವೂ ಆತನ ನೆನಪಿಗೆ ಬರುವುದಿಲ್ಲ.

ನಮ್ಮ ರೈತರು ಜಲಿಯಾನ್‌ವಾಲಾಬಾಗ್‌ನಲ್ಲಿ ಡಾಯರ್‌ನ ಗುಂಡುಗಳಿಗೆ ಎದೆ

ಪುಟ 4 ನೋಡಿ

ಗೋಳೀಬಾರು ಸಂಪೂರ್ಣ ಅನಗತ್ಯವಾಗಿತ್ತು

ಸಿಪಿಐ(ಎಂ)ನ ಸತ್ಯಶೋಧನಾ ತಂಡದ ವರದಿ

ಪುಟ 4

"ಕಾರ್ಮಿಕರು ಹಕ್ಕಿಗಳಲ್ಲ-ಗುಂಡಿನಿಂದ ಹೊಡೆದುರುಳಿಸಲು"

ಪ್ರಧಾನ ಮಂತ್ರಿಗಳಿಗೆ ಸಿಐಟಿಯು ಅಧ್ಯಕ್ಷರ ಪತ್ರ

ಕಾರ್ಮಿಕರೇ ನಡೆಸುತ್ತಿರುವ ಟೀ ತೋಟಗಳು

- ಸಿ.ನಂಜುಂಡಪ್ಪ

ಬಂಡವಾಳಗಾರರು ತಮ್ಮ ಒಡೆತನದಲ್ಲಿರುವ ಪತ್ರಿಕೆಗಳ ಮೂಲಕ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಬಿಳಿಯಾನೆಗಳು ಎಂದು ಹೀಯಾಳಿಸಿ ಅಪಪ್ರಚಾರ ಮಾಡುತ್ತಿರುವಾಗ, ಐಎಂಎಫ್‌ವಿಶ್ವ ಬ್ಯಾಂಕ್‌ಗಳ ಆದೇಶಗಳಿಗೆ ಮಣಿದು ಭಾರತ ಸರಕಾರವು ಸಾರ್ವಜನಿಕ ಕ್ಷೇತ್ರವನ್ನು ಕ್ರಮೇಣವಾಗಿ ವಿಸರ್ಜಿಸುತ್ತಾ ಬಂದಿರುವಾಗ, ಪ್ರಪಂಚದ ಸಾಮ್ರಾಜ್ಯಶಾಹಿಗಳು ಸಮಾಜವಾದ ಸತ್ತಿದೆ, ಬಂಡವಾಳಶಾಹಿಯೇ ಶಾಶ್ವತ ಎಂದು ಅಬ್ಬರದ ಬೊಬ್ಬೆಯನ್ನು ಹೊಡೆಯುತ್ತಿರುವಾಗ ತ್ರಿಪುರದಲ್ಲಿ ಕಾರ್ಮಿಕರು ನಡೆಸುವ ಟೀ ತೋಟಗಳು ಇವೆಲ್ಲಕ್ಕೂ ಸವಾಲಾಗಿ ನಿಂತು, ಸಮಾಜವಾದಿ ತತ್ವವನ್ನು ಎತ್ತಿ ಹಿಡಿದು ಹೊಳೆಯುತ್ತಿವೆ ಎನ್ನುತ್ತಾರೆ. ಇತ್ತೀಚೆಗೆ ತ್ರಿಪುರಾಕ್ಕೆ ಭೇಟಿ ನೀಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ತೋಟ ಕಾರ್ಮಿಕರ ಸಂಘಟನೆಯಲ್ಲಿ ದುಡಿದ ಮುಂದಾಳು ಸಿ.ಎನ್.ನಂಜುಂಡಪ್ಪನವರು ಇಂತಹ

ಮೂರು ವರ್ಷಗಳಿಂದ ನನಗೆ ತ್ರಿಪುರಕ್ಕೆ ಭೇಟಿಕೊಡಬೇಕೆಂಬ ಆಮಂತ್ರಣವಿದ್ದಿತು. ಅಸ್ಸಾಂ ರಾಜ್ಯದ ದಿಭ್ರುಗಡ್‌ನಲ್ಲಿ ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ ಒಕ್ಕೂಟದ ಏಳನೆಯ ಸಮ್ಮೇಳನ ಮುಗಿದ ನಂತರ ತ್ರಿಪುರದ ಮುಖಂಡರೊಡನೆ ತ್ರಿಪುರಕ್ಕೆ ಭೇಟಿ ಕೊಟ್ಟೆ. ಅಲ್ಲಿರುವಾಗ ಕೆಲವು ಟೀ ತೋಟಗಳಿಗೆ ಭೇಟಿ ಕೊಟ್ಟು ಅಲ್ಲಿಯ ಕಾರ್ಮಿಕರೊಂದಿಗೆ ಮಾತನಾಡಿದೆ. ಅಲ್ಲಿ ಅಪೂರ್ವವಾದ ವಿಷಯಗಳು ನನಗೆ ತಿಳಿದವು. ಜಾಗತಿಕ ಸಮಾಜವಾದಕ್ಕೆ ಹಿನ್ನಡೆಯಾಗಿ, ಸೋವಿಯತ್ ಒಕ್ಕೂಟದ ವಿಘಟನೆಯಾಗಿ ಮಾನವ ಬೆಳವಣಿಗೆಯ ಕೊನೆಯ ಹಂತ ಬಂಡವಾಳಶಾಹಿಯೇ ಎಂದೂ, ಸಮಾಜವಾದಕ್ಕೆ ಭವಿಷ್ಯವೇ ಇಲ್ಲವೆಂದು ಸಾಮ್ರಾಜ್ಯಶಾಹಿ ಅಬ್ಬರದ ಪ್ರಚಾರ ನಡೆಸುವ ವೇಳೆಯಲ್ಲೂ ತ್ರಿಪುರಾದಲ್ಲಿ ಏಳು ಟೀ ಪ್ಲಾಂಟೇಶನ್‌ಗಳನ್ನು ಕಾರ್ಮಿಕರೇ ಯಶಸ್ವಿಯಾಗಿ ನಡೆಸುತ್ತಿದ್ದರು, ಈಗಲೂ ನಡೆಸುತ್ತಿದ್ದಾರೆ, ಇದಕ್ಕೆ ಪ್ರಚಾರವಿಲ್ಲವಷ್ಟೆ.

ತ್ರಿಪುರದಲ್ಲಿ 5992 ಹೆಕ್ಟೇರ್ ಪ್ರದೇಶದಲ್ಲಿ ಟೀ ಬೆಳೆಯುತ್ತದೆ. ಈ ಭೂಮಿ57 ಪ್ಲಾಂಟೇಶನ್‌ಗಳಲ್ಲಿದೆ. ಈ 57 ಟೀ ಪ್ಲಾಂಟೇಶನ್‌ಗಳ ಪೈಕಿ 7 ಟೀ ತೋಟಗಳನ್ನು ಕಾರ್ಮಿಕರೇ ಯಶಸ್ವಿಯಾಗಿ ನಡೆಸುತ್ತಿದ್ದಾರೆ. 57 ಟೀ ತೋಟಗಳಲ್ಲಿ ಒಟ್ಟು 15500 ಕಾರ್ಮಿಕರಿದ್ದಾರೆ. 1995ರಲ್ಲಿ 60 ಲಕ್ಷ ಕೆಜಿ ಟೀ ಉತ್ಪಾದನೆಯಾಯಿತು. 1996ರ ಉತ್ಪಾದನೆ 62 ಲಕ್ಷ ಕೆಜಿ ಆಗಬಹುದು.

ಕಾರ್ಮಿಕರೇ ನಡೆಸುವ ಏಳು ತೋಟಗಳಲ್ಲಿ 1054 ಕಾರ್ಮಿಕರಿದ್ದಾರೆ. ಈ ಏಳು ತೋಟಗಳ ಪೈಕಿ ಎರಡು ತೋಟಗಳಲ್ಲಿ ಮಾತ್ರ ಟೀ ಫ್ಯಾಕ್ಟರಿಗಳಿವೆ.

ದುರ್ಗಾಬಾರಿ ಟೀ ಎಸ್ಟೇಟಿನಿಂದ ಡಿಸೆಂಬರ್ 26ರ ಮಧ್ಯಾಹ್ನ ನಾನು ಇಳಿದುಕೊಂಡಿದ್ದ ಶಾಸಕರ ಭವನದ ಅತಿಥಿಗೃಹಕ್ಕೆ ಒಂದು ಜೀಪು ಬಂದಿತು. ಆ ವಾಹನದಲ್ಲಿ ತ್ರಿಪುರದ ಸಿಐಟಿಯು ರಾಜ್ಯ ಸಮಿತಿಯ ಖಜಾಂಚಿ ದ್ವಿಜೇನ್ ಸಾಹಾ ಮತ್ತು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾನು ಘೋಷ್‌ರ ಜತೆಯಲ್ಲಿ ತ್ರಿಪುರದ ರಾಜಧಾನಿ ಅಗರ್ತಲಾದಿಂದ 16 ಕಿ.ಮೀ. ದೂರದಲ್ಲಿರುವ ದುರ್ಗಾಬಾರಿ ಟೀ ಎಸ್ಟೇಟಿಗೆ ಹೋದೆ.

ದುರ್ಗಾಬಾರಿ ಟೀ ಎಸ್ಟೇಟ್ 1920ರಲ್ಲಿ ಪ್ರಾರಂಭವಾಯಿತು. ಅದನ್ನು ಪ್ರಾರಂಭಿಸಿದ ಪ್ಲಾಂಟರ್ ಬಾಂಗ್ಲಾ ದೇಶದವರು. ಅವರ ಹೆಸರು ಬಾದಲ್ ಘೋಷ್. 1920ರಲ್ಲಿ ಅವರು ಭಾರತೀಯರೇ ಆಗಿದ್ದರು. ಆಗ ಬಾಂಗ್ಲಾ ದೇಶವಿರಲಿಲ್ಲ.

ಬಾದಲ್ ಘೋಷ್ 1952ರಲ್ಲಿ ಸಾಯುವ ಮುನ್ನ ಹರೀಂದ್ರ ನಗರ್ ಟೀ ಎಸ್ಟೇಟಿನ ಒಡೆಯ ಎಸ್.ಎಸ್. ಚಟರ್ಜಿಯವರಿಗೆ ವಹಿಸಿದರು. 1922ರ ನಂತರ ಹೊಸ ಟೀ ಗಿಡಗಳನ್ನು ನೆಡಲಿಲ್ಲ. ಎಸ್.ಎಸ್.ಚಟರ್ಜಿ ದುರ್ಗಾಬಾರಿ ಟೀ ಎಸ್ಟೇಟನ್ನು ಚೆನ್ನಾಗಿ ಹೀರಿ 1956ರ ವೇಳೆಗೆ ಅದನ್ನು ರೋಗಗ್ರಸ್ತವನ್ನಾಗಿ ಮಾಡಿದರು. ಸಮೀಪದಲ್ಲಿಯೇ ಇರುವ ಹರೀಂದ್ರನಗರ್ ಟೀ ಎಸ್ಟೇಟ್ ಚಟರ್ಜಿಯವರ ಸ್ವಂತ ತೋಟ ಅಂದಿನಿಂದ ಇಂದಿನವರೆಗೂ ಚೆನ್ನಾಗಿ ಲಾಭದಾಯಕವಾಗಿಯೇ ನಡೆಯುತ್ತಿದೆ.

1952ರಲ್ಲಿ ಎಸ್.ಎಸ್.ಚಟರ್ಜಿ ವಹಿಸಿಕೊಂಡಾಗ ದುರ್ಗಾಬಾರಿ ಟೀ ತೋಟದಲ್ಲಿ 150 ಕಾರ್ಮಿಕರಿದ್ದರು. 1979ರ ವೇಳೆಗೆ 15 ಕಾರ್ಮಿಕರು ಉಳಿದಿದ್ದರು.

1977ರ ಡಿಸೆಂಬರಿನಲ್ಲಿ ತ್ರಿಪುರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರವು 60 ರಲ್ಲಿ 56 ಸ್ಥಾನಗಳಲ್ಲಿ ಗೆದ್ದು ಅಧಿಕಾರಕ್ಕೆ ಬಂದಿತು. ಕಾಂಗ್ರೆಸ್ಸಿಗೆ ಒಂದು ಸ್ಥಾನವೂ ಸಿಕ್ಕಲಿಲ್ಲ. 4 ಸ್ಥಾನಗಳನ್ನು ಟಿಯುಜೆಎಸ್ ಪಡೆದುಕೊಂಡು ವಿರೋಧ ಪಕ್ಷವಾಯಿತು.

ಎಡರಂಗ ಸರಕಾರವು ದುರ್ಗಾಬಾರಿ ಟೀ ಎಸ್ಟೇಟನ್ನು ನಡೆಸಲು ಕಾರ್ಮಿಕರಿಗೆ ನೆರವಾಯಿತು. 1979ರಲ್ಲಿ ದುರ್ಗಾಬಾರಿ ಟೀ ಎಸ್ಟೇಟ್ ಕಾರ್ಮಿಕರ ಸಂಘದ ರಚನೆಯಾಯಿತು. ಈ ಸಹಕಾರ ಸಂಘದಲ್ಲಿ 35 ಕಾರ್ಮಿಕರು ಷೇರುದಾರರು, ಒಂದು ಷೇರಿನ ಬೆಲೆ ನೂರು ರೂಪಾಯಿ. ತ್ರಿಪುರ ಸರಕಾರವು ಒಂದು ಸಾವಿರ ರೂಪಾಯಿಯ ಷೇರುಗಳನ್ನು ಕೊಂಡು ಎರಡು ಲಕ್ಷ ರೂಪಾಯಿಯನ್ನು ಕೊಟ್ಟಿತು. 1979ರಿಂದ 1986ರವರೆಗೆ ಸಹಕಾರ ಇಲಾಖೆಯು ರೂ. 5.8 ಲಕ್ಷವನ್ನು ಕಂತುಗಳಲ್ಲಿ ಅನುದಾನ ಕೊಟ್ಟಿತು. ಸಹಕಾರ ಸಂಘವು ನಬಾರ್ಡ್‌ನಿಂದ ರೂ. 10 ಲಕ್ಷ 53 ಸಾವಿರ ಸಾಲವನ್ನು 1986ರಲ್ಲಿ ತೆಗೆದುಕೊಂಡು ಬಡ್ಡಿಸಮೇತ 18 ಲಕ್ಷ ರೂಪಾಯಿಗಳನ್ನು 1994ರಲ್ಲಿ ನಬಾರ್ಡ್‌ಗೆ ಮರುಪಾವತಿ ಮಾಡಿತು.

ಸಹಕಾರ ಸಂಘವು 1979-80ರಲ್ಲಿ 150 ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡಿತು. ಈಗ 300 ಕಾರ್ಮಿಕರಿದ್ದಾರೆ. ಅವರಲ್ಲಿ 200 ಮಂದಿ ಹೆಂಗಸರು.

ನಾವು ವರೇಶ್ ಮುಂಡ ಎಂಬ ಕಾರ್ಮಿಕನ ಮನೆಗೆ ಹೋದೆವು. ಮನೆಯ ಜಾಗ ಸ್ಟಾಂಡರ್ಡ್ ಟೈಪ್ ಮನೆಯ ಜಾಗದಷ್ಟಿದೆ. ಅದರಲ್ಲಿ ಸಹಕಾರ ಸಂಘವು ಕೊಟ್ಟ ಮಂಚವಿದೆ. ವಿದ್ಯುಚ್ಛಕ್ತಿಯ ಫ್ಯಾನ್ ಇದೆ. ನೀರಿನ ಫಿಲ್ಟರ್ ಇದೆ. ವರೇಶ್ ಮುಂಡರ ಮಗಳು ಮಂಜು ಮುಂಡ 9ನೇ ತರಗತಿಯಲ್ಲಿ ಓದುತ್ತಿದ್ದಾಳೆ, ಆ ವಿದ್ಯಾರ್ಥಿನಿ ಕೂತು ಓದುವುದಕ್ಕೆ, ಬರೆಯುವುದಕ್ಕೆ ಸಹಕಾರ ಸಂಘವು ಕೊಟ್ಟ ಟೇಬಲ್ ಮತ್ತು ಕುರ್ಚಿ ಇದ್ದವು.

ಪ್ರತಿಯೊಂದು ಕಾರ್ಮಿಕನ ಮನೆಯೂ ಹೀಗೆಯೇ ಇದ್ದು, ಇಷ್ಟು ಸಲಕರಣೆಗಳಿಂದ ಕೂಡಿದೆ ಎಂದು ತಿಳಿಯಿತು.

ಕಾರ್ಮಿಕರ ಮಕ್ಕಳಾದ ವಿದ್ಯಾರ್ಥಿಗಳಿಗೆ ಅವರು ಹತ್ತನೆಯ ತರಗತಿಯವರೆಗೆ ಓದುವ ತನಕ ಸಮವಸ್ತ್ರ, ಪೆನ್, ಕಾಗದ, ಪಠ್ಯ ಪುಸ್ತಕಗಳು ಮತ್ತು ಶಾಲಾ ಶುಲ್ಕದ ವೆಚ್ಚವನ್ನು ಸಹಕಾರ ಸಂಘವು ವಹಿಸುತ್ತದೆ. ಟ್ಯೂಷನ್‌ಗೆ ಹೋಗುವವರಿಗೆ ಟ್ಯೂಷನ್ ಫೀಯನ್ನೂ ಕೊಡುತ್ತದೆ.

ಕಾರ್ಮಿಕರಿಗೆ ವರ್ಷಕ್ಕೆ ಒಂದು ಜತೆ ಬಟ್ಟೆ, ಒಂದು ಜತೆ ಚಪ್ಪಲಿ, ಒಂದು ಒಳ್ಳೆಯ ರಗ್, ಒಂದು ಸೊಳ್ಳೆಯ ಪರದೆ ಸಿಕ್ಕುತ್ತದೆ. ತಿಂಗಳಿಗೆ ಒಂದು ಕ್ವಿಂಟಾಲ್ ಸೌದೆ ಪ್ರತಿಯೊಬ್ಬರಿಗೂ ಸಿಗುತ್ತದೆ.

ವರ್ಷಕ್ಕೊಮ್ಮೆ ಕಾರ್ಮಿಕರು ತಮ್ಮ ಮಕ್ಕಳೊಂದಿಗೆ ಮನೋರಂಜನಾ ಪ್ರವಾಸ ಹೋಗುವ ಖರ್ಚನ್ನು ಸಹಕಾರ ಸಂಘವು ಕೊಡುತ್ತದೆ.

ಕಾರ್ಮಿಕರ ಮತ್ತು ಅವಲಂಬಿತರ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ಸಹಕಾರ ಸಂಘವು ವಹಿಸುತ್ತದೆ.

ಕಾರ್ಮಿಕರು ಮನೆಯ ಸುತ್ತ ತರಕಾರಿ ಬೆಳೆಯುತ್ತಾರೆ, ಮನೆಯ ಒಂದು ಭಾಗದಲ್ಲಿ ಕೋಳಿಗಳನ್ನೋ, ಮೇಕೆಗಳನ್ನೋ ಅಥವಾ ಹಂದಿಗಳನ್ನೋ ಸಾಕುತ್ತಾರೆ.

ಟೀ ಗಿಡಗಳಿಗೆ ಸ್ಪ್ರಿಂಕ್ಲರ್‌ನಲ್ಲಿ ನೀರನ್ನು ಎರಚುವ ಏರ್ಪಾಡಿದ್ದು ವರ್ಷದ ಯಾವುದೇ ಕಾಲದಲ್ಲಿ ನೀರಿನ ಅಭಾವದಿಂದ ಟೀ ಗಿಡಗಳಿಗೆ ಹಾನಿಯಾಗುವ ಸಂಭವವಿಲ್ಲ.

ಸಹಕಾರ ಸಂಘವು ತೋಟದಲ್ಲಿ ಒಂದು ದೊಡ್ಡ ಸಮುದಾಯ ಭವನವನ್ನು ನಿರ್ಮಿಸಿದೆ. ಈ ಸಮುದಾಯ ಭವನದಲ್ಲಿ ಸಮಾವೇಶಗಳು, ಸಮ್ಮೇಳನಗಳು, ಶಿಕ್ಷಣ ಶಿಬಿರಗಳು, ಮದುವೆಗಳು ನಡೆಯುತ್ತವೆ.

ಎಲ್ಲಾ ಟೀ ತೋಟಗಳಲ್ಲಿರುವಂತೆ ಈ ಟೀ ತೋಟದಲ್ಲೂ ದಿನಗೂಲಿ ರೂ. 17.70 ಮಾತ್ರ, ಆದರೆ ಪ್ರತಿನಿತ್ಯ ಆಹಾರದ ಸಬ್ಸಿಡಿ 4 ರೂ., ಅವಲಂಬಿತರಿಗೆ ತಲೆಗೆ 2 ರೂಪಾಯಿ ಸಿಕ್ಕುತ್ತದೆ. ಆಹಾರದ ಸಬ್ಸಿಡಿ, ತೋಟದಿಂದ ತೋಟಕ್ಕೆ ಭಿನ್ನವಾಗಿವೆ. ಆದರೆ ಈ ತೋಟದಲ್ಲಿ ಗರಿಷ್ಠ ಪ್ರಮಾಣದ ಸಬ್ಸಿಡಿ ಸಿಕ್ಕುವುದು.

ಈ ಯೋಜನೆಯ ಶಿಲ್ಪಿ 60 ವರ್ಷದ ಬ್ರಹ್ಮಚಾರಿ ಸುಧಾಮಯ್ ಮಜುಮ್‌ದಾರ್ ಮಾರ್ಗದರ್ಶಿಯಾಗಿ ಅಲ್ಲಿಯೇ ವಾಸಿಸುತ್ತಾರೆ. ಅವರ ವಿದ್ಯಾಭ್ಯಾಸ ಕಲ್ಕತ್ತದಲ್ಲಿ ಮ್ಯಾಟ್ರಿಕ್‌ನವರೆಗೆ ಆಗಿದೆ. ಎಲ್ಲರೂ ಅವರನ್ನು ಅಕ್ಕರೆಯಿಂದ ಘಾಟುದಾ ಎಂದೇ ಕರೆಯುತ್ತಾರೆ.

- II -

ಡಿಸೆಂಬರ್ 27 ಮತ್ತು 28ರಂದು ನನ್ನ ಕಾರ್ಯಕ್ರಮವು ಸಚಿವ ಬಿಮಲ್ ಸಿನ್ಹರೊಂದಿಗೆ ಇದ್ದಿತು. ಅವರು ಕಮಾಲ್‌ಪುರದಲ್ಲಿ ನಡೆಯುತ್ತಿದ್ದ ಒಂದು ವಿಜ್ಞಾನ ಮೇಳಕ್ಕೆ ನನ್ನನ್ನು ಕರೆದೊಯ್ದರು. ಅಲ್ಲಿಯ ಕಾಲೇಜು ಮತ್ತು ಪ್ರೌಢಶಾಲೆಗಳ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಏರ್ಪಡಿಸಿದ್ದ ವಿಜ್ಞಾನ ಮೇಳವನ್ನು ಸಚಿವರು ಉದ್ಘಾಟಿಸಿದರು. ಅವರ ಊರೇ ಕಮಾಲ್‌ಪುರ. ಅವರು ಗೆಲ್ಲುತ್ತಾ ಬಂದಿರುವ ವಿಧಾನಸಭಾ ಕ್ಷೇತ್ರವೂ ಕಮಾಲ್‌ಪುರ. ತ್ರಿಪುರದ ಎಡರಂಗ ಸರಕಾರವು ಹೊಸದಾಗಿ ರಚಿಸಿರುವ ದಲಿಯ ಜಿಲ್ಲೆಯಲ್ಲಿ ಕಮಾಲ್‌ಪುರವಿದೆ. ರಾತ್ರಿ ಸಚಿವರ ಮನೆಯಲ್ಲಿಯೇ ತಂಗಿದೆ. ಅವರು ಮನೆ ತಲುಪಿದ್ದೇ ತಡ ಮನೆಯಲ್ಲಿ ತಮ್ಮ ಅರ್ಜಿಗಳು, ಅಹವಾಲುಗಳೊಂದಿಗೆ ಬಂದ ಜನ ತುಂಬಿ ಹೋದರು. ರಾತ್ರಿ11 ಗಂಟೆ ದಾಟಿದರೂ ಸಚಿವರಿಗೆ ಊಟ ಮಾಡಲು ಪುರುಸೊತ್ತಾಗಲಿಲ್ಲ.

28ರಂದು ಸಚಿವರೊಂದಿಗೆ ನಾನು ಮಾಯುಂಗ್ ಟುಕೋ ಟೀ ತೋಟಕ್ಕೆ ಹೋದೆ(ಮಾಯುಂಗ್ ಟುಕೋ ಎಂದರೆ ಬೋರಾಕ್ ಭಾಷೆಯಲ್ಲಿ 'ಆನೆ ಈಜುವ' ಎಂದರ್ಥ). ಕಮಾಲ್‌ಪುರದಿಂದ 'ಮಾಯುಂಗ್‌ಟುಕೋ' ಟೀ ತೋಟವನ್ನು ತಲುಪಲು ಸಚಿವರ ಕಾರು ನಲವತ್ತಕ್ಕಿಂತಲೂ ಹೆಚ್ಚು ನಿಮಿಷ ಸಮಯ ತೆಗೆದುಕೊಂಡಿತು.

'ಲಾಲ್‌ಸಲಾಮ್','ರೆಡ್ ಸಲ್ಯೂಟ್', 'ಜಿಂದಾಬಾದ್' ಘೋಷಣೆ ಗಳೊಂದಿಗೆ ಕಾರ್ಮಿಕರು ನಮ್ಮನ್ನು ಸ್ವಾಗತಿಸಿದರು. ಇದು ಕಾರ್ಮಿಕರೇ ಹೊಸದಾಗಿ ಪ್ರಾರಂಭಿಸಿರುವ ತೋಟ. 1984ರ ಏಪ್ರಿಲ್ 26ರಂದು ಈ ತೋಟ ವನ್ನು ಕಾರ್ಮಿಕರು ಪ್ರಾರಂಭಿಸಿದರು. ಈ ತೋಟವನ್ನು ಪ್ರಾರಂಭಿಸಲು ದುರ್ಗಾಬಾರಿ ಟೀ ಎಸ್ಟೇಟ್ ಈ ತೋಟದ ಕಾರ್ಮಿಕರಿಗೆ 2000 ಟೀ ಗಿಡಗಳನ್ನು ಕೊಟ್ಟಿತು. ಮೊದಲ ಬಾರಿ 30 ಕೆಜಿ ಸೊಪ್ಪು ಉತ್ಪಾದನೆ ಯಾಯಿತು. 1987ರಲ್ಲಿ 11000 ಕೆಜಿ, 1996-97ರಲ್ಲಿ 1 ಲಕ್ಷ 30 ಸಾವಿರಕೆಜಿ ಟೀ ಸೊಪ್ಪು ಉತ್ಪಾದನೆಯಾಯಿತು.

ಈ ಟೀ ತೋಟದಲ್ಲಿ ಕಾರ್ಖಾನೆ ಇಲ್ಲ, ಬೆಳೆದ ಟೀ ಸೊಪ್ಪನ್ನು ಈಗ ಕೆಜಿಗೆ 5 ರೂಪಾಯಿ ಪ್ರಕಾರ ಹತ್ತಿರವಿರುವ ರಾಮ ದುರ್ಲಭಪುರ ಟೀ ಎಸ್ಟೇಟಿಗೆ ಮಾರಾಟ ಮಾಡುತ್ತಾರೆ.

365 ಎಕರೆ ವಿಸ್ತೀರ್ಣವಿರುವ ಈ ತೋಟದಲ್ಲಿ ಈವರೆವಿಗೆ 65 ಎಕರೆಗೆ ಮಾತ್ರ ಟೀ ಗಿಡಗಳನ್ನು ಹಾಕಿದ್ದಾರೆ. ಇದು 1984ರಲ್ಲಿ ಪ್ರಾರಂಭವಾದ ತೋಟವಾದುದರಿಂದ ಪ್ರತಿವರ್ಷವೂ ಇಂತಿಷ್ಟು ಎಕರೆಗೆಂದು ಗಿಡಗಳನ್ನು ನೆಡುತ್ತಲೇ ಇರುತ್ತಾರೆ. ಈ ತೋಟದಲ್ಲಿ ಟೀ ಗಿಡಗಳನ್ನು ಬಹಳ ಒತ್ತಾಗಿ ಹಾಕಿದ್ದಾರೆ. ಪಶ್ಚಿಮ ಬಂಗಾಳವೂ ಸೇರಿದಂತೆ ಇಡೀ ಈಶಾನ್ಯ ಭಾರತದಲ್ಲಿಯೇ ಅತ್ಯಂತ ಹೆಚ್ಚು ಒತ್ತಾಗಿ ಟೀ ಗಿಡಗಳನ್ನು ನೆಟ್ಟಿರುವ ತೋಟ ಇದಾಗಿದೆ. ಈಗ 65 ಎಕರೆಯಲ್ಲಿ ಮೂರು ಲಕ್ಷ ಟೀ ಗಿಡಗಳಿವೆ.

ಈ ತೋಟವನ್ನು ಪ್ರಾರಂಭಿಸಲು ಸಹಕಾರ ಸಂಘ ಪ್ರಾರಂಭವಾಗುವಾಗ 52 ಕಾರ್ಮಿಕರು ಸದಸ್ಯರಾಗಿದ್ದರು. ಷೇರು ಬೆಲೆ ನೂರು ರೂಪಾಯಿ. ಮೊದಲ ವರ್ಷ 20000 ರೂಪಾಯಿ, ಮೂರನೆಯ ವರ್ಷ 1 ಲಕ್ಷ 87 ಸಾವಿರ ರೂಪಾಯಿ, ಈವರೆಗೆ ಒಟ್ಟು ರೂ. 5,75,000 ಅನುದಾನವನ್ನು ತ್ರಿಪುರ ಸರಕಾರದ ಸಹಕಾರ ಮತ್ತು ಕೈಗಾರಿಕಾ ಇಲಾಖೆಗಳು ಅನುದಾನವನ್ನು ಕೊಟ್ಟಿವೆ.

ಈಗ 65 ಎಕರೆಯಲ್ಲಿಟೀ ಗಿಡಗಳಿರುವ ತೋಟದ ಬೆಲೆ ತ್ರಿಪುರದಲ್ಲಿ 70ರಿಂದ 80 ಲಕ್ಷ ರೂ. ಆಗುವುದು ಎಂದರೆ 1984ರ ನಂತರದ ವರ್ಷಗಳ ಕಾರ್ಮಿಕರ ಶ್ರಮವು ಈವರೆಗೆ ರೂ. 64 ಲಕ್ಷದಿಂದ ರೂ. 74 ಲಕ್ಷವಾಗುವಷ್ಟು ಮೌಲ್ಯವನ್ನು, ಶ್ರಮವನ್ನು ಸೃಷ್ಟಿಸಿದೆ.ಈ ತೋಟವನ್ನು ವಿದ್ಯುಚ್ಛಕ್ತಿ ಇನ್ನೂ ತಲುಪಿಲ್ಲ.

ಕಾರ್ಮಿಕರ ಮನೆಗಳು ಸ್ಟಾಂಡರ್ಡ್ ಟೈಪ್ ಮನೆಗಳ ವಿಸ್ತೀರ್ಣದಷ್ಟಿವೆ. ಕಕ್ಕಸುಗಳು ಚೆನ್ನಾಗಿವೆ.

ಪ್ರಾರಂಭದ ವರ್ಷಗಳಲ್ಲಿಕಾರ್ಮಿಕರು, 55 ಹೆಂಗಸರು, 45 ಗಂಡಸರು ಇದ್ದರು. ಈಗ 250 ಕಾರ್ಮಿಕರಿದ್ದಾರೆ.

ಈಗ 35ರಿಂದ 40 ಮಕ್ಕಳಿವೆ. 20ರಿಂದ 25 ಮಕ್ಕಳು ಶಾಲೆಗೆ ಹೋಗುತ್ತವೆ. ಸಹಕಾರ ಸಂಘವು ಕಿಂಡರ್ ಗಾರ್ಟನ್ ಶಾಲೆಯನ್ನು ನಡೆಸುತ್ತದೆ. ಸರಕಾರವು ಕಳೆದ ವರ್ಷ ಶಾಲೆಯನ್ನು ಪ್ರಾರಂಭಿಸಿತು.

ಇಲ್ಲಿ ಇರುವ ಸಾಮಾನ್ಯ ಕಾಯಿಲೆಗಳು ಮಲೇರಿಯಾ ಮತ್ತು ಬ್ಯಾಸಲರಿಆಮಶಂಕೆ. ಸಹಕಾರ ಸಂಘವು ಕಾರ್ಮಿಕರ ಸಂಪೂರ್ಣ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ಮಾಡುತ್ತದೆ.

ಕಾರ್ಮಿಕರಿಗೆ ಕೂಲಿ ದಿನಕ್ಕೆ 17.70 ರೂ. ಮತ್ತು ರೂ. 1.50 ಸಿಕ್ಕುತ್ತದೆ. ಎರಡು ವರ್ಷಕ್ಕೆ ಒಂದೊಂದು ತಲಾ ಕಂಬಳಿ ಸಿಕ್ಕುತ್ತದೆ. ಈ ವರ್ಷ ಶೇ. 10ರಷ್ಟು ಬೋನಸ್ ಸಿಕ್ಕಿದೆ.

ಆಫೀಸಿನ ಮತ್ತುತೋಟದ ಕೆಲಸದ ವೇಳೆ ಬೆಳಿಗ್ಗೆ 8.30 ರಿಂದ ಸಂಜೆ 5 ಗಂಟೆಗೆಯವರೆಗೆ.

ಆಫೀಸು ಸಿಬ್ಬಂದಿ ಇಬ್ಬರಿದ್ದಾರೆ. ಒಬ್ಬೊಬ್ಬರಿಗೆ ತಿಂಗಳಿಗೆ ರೂ. 900 ಸಂಬಳ. ಈ ಆಫೀಸು ಸಿಬ್ಬಂದಿ ಸಹಕಾರ ಸಂಘದ ನಿರ್ದೇಶನದ ಪ್ರಕಾರ ಕೆಲಸ ಮಾಡುತ್ತಾರೆ. ಸಹಕಾರ ಸಂಘದಲ್ಲಿ ಇಬ್ಬರು ಕಾರ್ಮಿಕರು ಬೀಂದ್ರ ರಗೊಯಿಬರ್ತೋ ಮತ್ತು ಮಂಗ್ರಾ ಕರಿಯ ನಾಯಕ ಪಾತ್ರವನ್ನು ವಹಿಸುತ್ತಾರೆ.

ಬೆಳಿಗ್ಗೆಹೊರಡುವಾಗ ನನಗೆ ಉಪಾಹಾರ ಮಾಯುಂಗ್ ಟುಕೋ ಟೀ ತೋಟದಲ್ಲಿ ಏರ್ಪಡಿಸಿದ್ದಾರೆಎಂದು ಸಚಿವರು ಹೇಳಿದರು. ಆದರೆ ಅವರು ಬೆಳಿಗ್ಗೆ 6.30ಕ್ಕೆನೇ ಮನೆಯಲ್ಲಿಮನೆ ಮಂದಿಯೊಂದಿಗೆ ಊಟ ಮಾಡಿದ್ದರು. ತೋಟದ ಕಚೇರಿಯಲ್ಲಿ ಹತ್ತಿಪ್ಪತ್ತು ಮಂದಿ ಕಾರ್ಮಿಕರೊಂದಿಗೆ ಮಾತನಾಡುತ್ತಿದ್ದಾಗ ಬ್ರೆಡ್ ಮತ್ತು ಮೊಟ್ಟೆಯಿಂದ ತಯಾರಿಸಿದ ಫ್ರೆಂಚ್ ಟೋಸ್ಟ್ ಬಂದಿತು. ನನಗೆ ಅಚ್ಚರಿಯಾಯಿತು. ಅದನ್ನು ಯಾರು ತಯಾರಿಸಿದರೆಂದು ವಿಚಾರಿಸಲಾಗಿ ಕಾರ್ಮಿಕರೇ ತಯಾರಿಸಿದ್ದುದು ತಿಳಿಯಿತು!

1988ರಲ್ಲಿ ಕಾಂಗ್ರೆಸ್-ಟಿಯುಜೆಎಸ್ ಸರಕಾರವು ಅಧಿಕಾರಕ್ಕೆ ಬಂದ ನಂತರ ಈ ತೋಟದ ಕಾರ್ಮಿಕರ ಮೇಲೆ ಕಾಂಗ್ರೆಸ್ ಗೂಂಡಾ ಪಡೆ ಐಎನ್‌ಟಿಯುಸಿ ನಾಯಕ ಬಿಸಜಿತ್ ಸಿನ್ಹನ ಮುಖಂಡತ್ವದಲ್ಲಿ ಪದೇ ಪದೇ ಧಾಳಿ ನಡೆಯಿತು. ಕೊಲೆಯಾಯಿತು. ಸಹಕಾರ ಸಂಘದ ಏಳು ಮುಖಂಡರ ಮೇಲೆ ಮೂರು ಕ್ರಿಮಿನಲ್ ಮೊಕದ್ದಮೆಗಳಾದವು. ಸುಮಾರು ರೂ. 35000ದಿಂದ 40000ದವರೆಗೆ ಖರ್ಚಾಯಿತು. ಕಾರ್ಮಿಕರು ಎದೆಗುಂದಲಿಲ್ಲ, ಧೈರ್ಯವಾಗಿ ಧಾಳಿಯ ವಿರುದ್ಧ ಹೋರಾಡಿದರು.

ಕಾಂಗ್ರೆಸ್ ಧಾಳಿಯ ಪರಿಣಾಮವಾಗಿ ಬಹಳ ನಷ್ಟವಾದುದರಿಂದ ಇಂದು ತೋಟವು ಲಾಭವಿಲ್ಲದೆ ನಷ್ಟವಿಲ್ಲದೆ ನಡೆಯುತ್ತಿದೆ.

ನಾನು ಅಲ್ಲಿಂದ ಹೊರಡುವ ಮುನ್ನ ಕಾರ್ಮಿಕರೆಲ್ಲರೂ ಸಭೆ ಸೇರಿದರು ನಾನು ಹೇಳುವುದನ್ನು ಕೇಳಬೇಕೆಂದು. ನಾನು ಇಪ್ಪತ್ತು ನಿಮಿಷಗಳ ಕಾಲ ಇಂಗ್ಲೀಷ್‌ನಲ್ಲಿ ಮಾತನಾಡಿದೆ. ನನ್ನ ಭಾಷಣವನ್ನು ಸಚಿವ ಬಿಮಲ ಸಿನ್ಹ ಅವರ ಭಾಷೆಗೆ ತರ್ಜುಮೆ ಮಾಡಿದರು.

ಮತ್ತೆ ಘೋಷಣೆಗಳೊಂದಿಗೆ ಕಾರ್ಮಿಕರು ನಮ್ಮನ್ನು ಬೀಳ್ಕೊಟ್ಟರು.

ಅನಂತರ ನಮ್ಮ ಭೇಟಿ ಕಮಾಲ್‌ಪುರ ವಿಧಾನಸಭಾ ಕ್ಷೇತ್ರದಲ್ಲಿರುವ 'ದಾರಾಂಗ್ ತಿಲ್ಲಾ' ಟೀ ಎಸ್ಟೇಟ್‌ಗೆ.

ಈ ತೋಟವನ್ನು ಹಿಂದೆ ನಡೆಸುತ್ತಿದ್ದ ಬಂಗಾಳೀ ಪ್ಲಾಂಟರ್ ಇದನ್ನು ರೋಗಗ್ರಸ್ತವನ್ನಾಗಿ ಮಾಡಿ ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾದಿಂದ ತೋಟದ ಹೆಸರಲ್ಲಿ ಸಾಲ ಮಾಡಿ ಸಾಲವು ದೊಡ್ಡದಾಗಿ ಬೆಳೆದು ಅದನ್ನು ಮರು ಪಾವತಿ ಮಾಡದೆ ಕಣ್ಮರೆಯಾಗಿದ್ದ.

ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯವು 1983ರ ಜೂನ್ 28ರಂದು ದಾರಾಂಗ್‌ತಿಲ್ಲ ಟೀ ಎಸ್ಟೇಟನ್ನು ಹರಾಜಿಗೆ ಇಟ್ಟಿತು. ಎಡರಂಗ ಸರಕಾರದ ಸಹಾಯದಿಂದ ಸಹಕಾರ ಸಂಘವನ್ನು ರಚಿಸಿದ್ದ ಕಾರ್ಮಿಕರು ಹರಾಜಿನಲ್ಲಿ ತೋಟ ವನ್ನು 1,40,000.50 ಪೈಸೆಗೆ ಕೊಂಡು ಕೊಂಡರು.

ಪ್ಲಾಂಟರ್ ಕಣ್ಮರೆಯಾದ ನಂತರ ಬೇರೆ ಬೇರೆಯವರು 282 ಎಕರೆ ತೋಟದಲ್ಲಿ 165 ಎಕರೆಯನ್ನು ಒತ್ತುವರಿ ಮಾಡಿ ಬೇಸಾಯ ಮಾಡಲೂ ಪ್ರಾರಂಭಿಸಿದರು.ಈಗ 90 ಎಕರೆಯಲ್ಲಿ ಮಾತ್ರ ಟೀ ಗಿಡಗಳಿವೆ.

ಇಲ್ಲಿಯ ಸಹಕಾರ ಸಂಘದಲ್ಲಿ 63 ಸದಸ್ಯರಿದ್ದಾರೆ. ಒಂದೊಂದು ಷೇರಿನ ಬೆಲೆ ನೂರು ರೂಪಾಯಿ. ಶೈಲೇನ್ ದೇ ಎಂಬುವರು ಸಂಘದ ಅಧ್ಯಕ್ಷರು.

ರಾಜ್ಯ ಸರಕಾರದ ಸಹಕಾರ ಇಲಾಖೆ ಮತ್ತು ಕೈಗಾರಿಕಾ ಇಲಾಖೆ ಈವರೆಗೆ ಈ ಸಹಕಾರ ಸಂಘಕ್ಕೆ ಏಳು ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಕೊಟ್ಟಿವೆ.

ಇಲ್ಲಿ ಕೊಯ್ದ ಟೀ ಸೊಪ್ಪನ್ನು ನೆರೆಯ ಖಾಸಗಿ ಟೀ ತೋಟಕ್ಕೆ ಮಾರಾಟ ಮಾಡಿ ಸಹಕಾರ ಸಂಘವು ಹಣವನ್ನು ಪಡೆಯುವುದು. ಕಳೆದ ವರ್ಷ ಒಂದು ಕೆಜಿಗೆ ರೂ. 4.85 ಸಿಕ್ಕಿತ್ತು. 1995-96ರಲ್ಲಿ 142937 ಕೆಜಿ ಟೀ ಉತ್ಪಾದನೆಯಾಯಿತು.

ಈ ತೋಟದಲ್ಲಿ ಒಟ್ಟು 110 ಕಾರ್ಮಿಕರಿದ್ದು ಅವರಲಿ 43 ಮಂದಿ ಮಹಿಳೆಯರು. ಇಲ್ಲಿಯೂ ಕಾರ್ಮಿಕರಿಗೆ ಎರಡು ವರ್ಷಕ್ಕೆ ಒಂದು ಕಂಬಳಿ ಸಿಕ್ಕುವುದು. ಶೇ. 8.33 ಬೋನಸ್ ಸಿಕ್ಕಿದೆ. ತೋಟವು ನಷ್ಟ ಮಾಡದೆ ಲಾಭಗಳಿಸದೆ ನಡೆಯುತ್ತಿದೆ. ಈ ತೋಟದಲ್ಲಿ ಮ್ಯಾನೇಜರ್ ಸೇರಿ ಸಿಬ್ಬಂದಿ ಮತ್ತು ಉಪ ಸಿಬ್ಬಂದಿ ಒಟ್ಟು 10 ಮಂದಿ ಇದ್ದಾರೆ. ಉಪ ಸಿಬ್ಬಂದಿಯ ಸಂಬಳ ರೂ. 900ರಿಂದ ರೂ. 1000ದವರೆಗೆ. ಸಿಬ್ಬಂದಿಯ ಸಂಬಳ ರೂ. 1700, ಮ್ಯಾನೇಜರ್ ಸಂಬಳ ರೂ. 3000. ಇಲ್ಲಿಯ ಮ್ಯಾನೇಜರ್ ಟೀ ಕೈಗಾರಿಕೆಯಲ್ಲಿ ಪರಿಣತರಾಗಿದ್ದು ಇತರ ಟೀ ಕೈಗಾರಿಕೆಗಳಿಗೂ ಸಲಹೆ ಕೊಡುತ್ತಾರೆ.

ಕಾಂಗ್ರೆಸ್-ಟಿಯುಜೆಎಸ್ ಆಡಳಿತದಲ್ಲಿ ಕಾಂಗ್ರೆಸ್ ಗೂಂಡಾಗಳು ಅನೇಕ ಬಾರಿ ದಾರಾಂಗತಿಲ್ಲಾ ಟೀ ತೋಟದ ಮೇಲೆ ಧಾಳಿ ನಡೆಸಿದರು. ಸಿಕ್ಕಿದ್ದನ್ನೆಲ್ಲಾ ತೆಗೆದುಕೊಂಡು ಹೋಗಿ ಮಾರಿದರು. ವಿದ್ಯುಚ್ಛಕ್ತಿಯ ಬಲ್ಬ್, ಹೋಲ್ಡರ್, ವೈರುಗಳನ್ನೂ ತೆಗೆದುಕೊಂಡು ಹೋದರು. ಕಾರ್ಮಿಕರನ್ನು ಮನಸ್ವೀ ಥಳಿಸಿದರು.

1993ರಲ್ಲಿ ಎಡರಂಗ ಸರಕಾರ ಬಂದ ನಂತರ ಸಹಕಾರ ಸಂಘವು 2 ಲಕ್ಷ ರೂಪಾಯಿ ಸಾಲ ಮಾಡಿ ಕಳೆದು ಹೋಗಿದ್ದನ್ನೆಲ್ಲಾ ತಂದು ಹಾಕಿತೋಟವನ್ನು ಮತ್ತೆ ಸರಿಪಡಿಸಿತು.

ನಾವು ಹೋಗಬೇಕಾಗಿದ್ದ ದಾರಿಯಲ್ಲಿ ಸೇತುವೆಯೊಂದು ಕುಸಿದು ಬಿದ್ದಿದ್ದು 'ಏಚುಕ್' ಎಸ್ಟೇಟಿಗೆ ಹೋಗಲು ಆಗಲಿಲ್ಲ. ಆ ತೋಟದಲ್ಲಿರುವ ಎಲ್ಲಾ ಕಾರ್ಮಿಕರೂ ತ್ರಿಪುರಿ ಗಿರಿಜನರೇ ಆಗಿದ್ದು ಸಹಕಾರ ಸಂಘದ ಮೂಲಕ ಅವರೇ ಟೀ ತೋಟವನ್ನು ನಡೆಸುತ್ತಿದ್ದಾರೆ ಎಂದು ಸಚಿವರು ನನಗೆ ಹೇಳಿದರು.

ಸಹಕಾರಿ ಸಂಘಗಳು ನಡೆಸುವ ಟೀ ತೋಟಗಳು-ಉತ್ಪಾದನಾ ಸಾಧನಗಳು ಸಾಮೂಹಿಕ ಒಡೆತನಕ್ಕೆ ಒಳಪಟ್ಟಿವೆ. ಇಲ್ಲಿ ವೈಯಕ್ತಿಕ ಒಡೆತನ ಅಥವಾ ಖಾಸಗಿ ಒಡೆತನ ಎಂಬುದಿಲ್ಲ. ಸಾಮೂಹಿಕ ಒಡೆತನದ ಜತೆಗೆ ಸಾಮೂಹಿಕ ಉತ್ಪಾದನೆ ಮತ್ತು ಸಾಮೂಹಿಕ ವಿತರಣೆ. ಆದರೂ ಸಹ ಏಳು ತೋಟಗಳ ಪೈಕಿ ಯಾವ ಒಂದು ಸಹಕಾರ ಸಂಘವೂ ನಷ್ಟ ಮಾಡುತ್ತಿಲ್ಲ. ಲಾಭ ಮಾಡುತ್ತಿವೆ. ಅಗತ್ಯವೆನಿಸಿದಲ್ಲಿ ಕಾರ್ಮಿಕರಿಗೆ ಹೆಚ್ಚಿನ ಕೂಲಿಯನ್ನು ಕೊಡುವ ನಿರ್ಧಾರವನ್ನು ಸಹಕಾರ ಸಂಘದ ಮೂಲಕ ಕಾರ್ಮಿಕರೇ ಕೈಗೊಳ್ಳಬಹುದು.

ಸಿಐಟಿಯು ಯಶಸ್ವಿ
5ನೇ ಬೆಂಗಳೂರು ಜಿಲ್ಲಾ ಸಮ್ಮೇಳನ

ಬೆಂಗಳೂರು: ಸಿಐಟಿಯುವಿನ 5ನೇ ಬೆಂಗಳೂರು ಜಿಲ್ಲಾ ಸಮ್ಮೇಳನವು ಜನವರಿ 24 ಮತ್ತು 25 ರಂದು ನಗರದ ಎನ್.ಜಿ.ಓ.ಹಾಲ್‌ನಲ್ಲಿ ಯಶಸ್ವಿಯಾಗಿ ಜರುಗಿತು. ಸಮ್ಮೇಳನದ ಉದ್ಘಾಟನೆಯನ್ನು ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರು ಮತ್ತು ರಾಜ್ಯ ಅಧ್ಯಕ್ಷರಾದ ಕಾ॥ ಸೂರ್ಯನಾರಾಯಣರಾವ್ ಮಾಡಿದರು. ಇಂದಿನ ಪರಿಸ್ಥಿತಿಯನ್ನು ಕಾರ್ಮಿಕರು ಅರ್ಥೈಸಿಕೊಳ್ಳಬೇಕು, ಜಾತಿ, ಧರ್ಮ, ಭಾಷೆಯ ಹೆಸರುಗಳಲ್ಲಿ ಕಾರ್ಮಿಕರ ಐಕ್ಯತೆಯನ್ನು ಒಡೆಯಲು ಪ್ರಯತ್ನಿಸುವ ಶಕ್ತಿಗಳ ಕುರಿತು ಎಚ್ಚರಿಕೆಯಿಂದ ಇರಬೇಕು. ಈ ಶಕ್ತಿಗಳನ್ನು ದೂರವಿಟ್ಟು ಕಾರ್ಮಿಕರ ಐಕ್ಯತೆಯನ್ನು ಕಾಪಾಡಲು ಸಿಐಟಿಯುವಿನಿಂದ ಮಾತ್ರ ಸಾಧ್ಯವೆಂದರು. ಕಳೆದ ಜಿಲ್ಲಾ ಸಮ್ಮೇಳನದಲ್ಲಿ 17,000ವಾಗಿದ್ದ ಸಿಐಟಿಯುವಿನ ಬೆಂಗಳೂರು ಜಿಲ್ಲೆಯ ಸದಸ್ಯತ್ವ 30,000ಕ್ಕೂ ಹೆಚ್ಚಾಗಲು ಕಾರಣ, ಎಲ್ಲಾ ವಿಭಾಗದ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕಾಗಿ ಸಿಐಟಿಯು ನಡೆಸಿದ ಹೋರಾಟಗಳು. ಕಾರ್ಮಿಕರ ಮಧ್ಯೆ ಬೃಹತ್ ಪ್ರಭಾವವನ್ನು ಹೊಂದಿರುವ ಈ ಸಂಘಟನೆ ಇನ್ನೂ ಬಲಿಷ್ಠವಾಗಿ ಬೆಳೆದು ಬರಬೇಕೆಂದು ಆಶಿಸಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಕಾರ್ಯದರ್ಶಿಗಳಾದ ಕಾ॥ ವಿಜೆಕೆ ನಾಯರ್ ರವರು, ಹೊಸ ಆರ್ಥಿಕ ನೀತಿ ಮತ್ತು ಉದಾರೀಕರಣಗಳಿಂದ ಸಾರ್ವಜನಿಕ ವಲಯದ ಕಾರ್ಖಾನೆಗಳ ಕೇಂದ್ರವಾಗಿದ್ದ ಬೆಂಗಳೂರು ಈಗ ಬಹುರಾಷ್ಟ್ರೀಯ ಕಂಪನಿಗಳ ಕೇಂದ್ರವಾಗುತ್ತಿದೆ. ಸಾರ್ವಜನಿಕ ವಲಯದ ಕಾರ್ಖಾನೆಗಳಲ್ಲಿ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಕಾಂಟ್ರಾಕ್ಟ್ ಕಾರ್ಮಿಕರ ಸಂಖ್ಯೆಯು ಹೆಚ್ಚುತ್ತಿದೆ. ಒಟ್ಟಾರೆ ಸರಕಾರದ ನೀತಿಗಳು ನಮ್ಮ ದೇಶದ ಸ್ವಾವಲಂಬನೆ, ಸಾರ್ವಭೌಮತೆಗೆ ಧಕ್ಕೆ ಯಾಗಿದೆ. ಕನಿಷ್ಟ ವೇತನ, ಮತ್ತಿತರ ಕಾರ್ಮಿಕರ ಕಾನೂನುಗಳನ್ನು ಜಾರಿ ಮಾಡುವಲ್ಲಿ ಸರಕಾರದ ವಿಳಂಬ ನೀತಿಯನ್ನು ಖಂಡಿಸಿದರು. ಕಾರ್ಮಿಕರು ಐಕ್ಯ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿದರು.

180 ಜನ ವಿವಿಧ ಕಾರ್ಮಿಕ ಸಂಘಟನೆಗಳನ್ನು ಪ್ರತಿನಿಧಿಸಿ ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಬೆಲೆ ಏರಿಕೆ, ಭ್ರಷ್ಟಾಚಾರ, ರಾಜ್ಯ ಮತ್ತು ಕೇಂದ್ರ ಸರಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಜನವರಿ 30 ರಂದು ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ನಡೆದ ವಿಧಾನ ಸೌಧ ಚಲೋಗೆ ಸಂಪೂರ್ಣ ಬೆಂಬಲ, ಎಲ್ ಅಂಡ್ ಟಿ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ, ಹೋರಾಟದಲ್ಲಿರುವ ವಳ್ಳಿಯಪ್ಪ ಟೆಕ್ಸ್‌ಟೈಲ್ ಕಾರ್ಮಿಕರಿಗೆ ಬೆಂಬಲ, ಸಾರ್ವಜನಿಕ ಕಾರ್ಖಾನೆಗಳ ಖಾಸಗೀಕರಣದ ವಿರುದ್ಧ ಮತ್ತು ಅವುಗಳನ್ನು ಉಳಿಸಿ, ಬೆಳೆಸಬೇಕೆಂದು ಒತ್ತಾಯಿಸಿ, ಗುತ್ತಿಗೆ ಕಾರ್ಮಿಕರ ಮೇಲೆ ನಡೆಯುವ ಶೋಷಣೆಯ ವಿರುದ್ಧ ಮತ್ತು ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಲು ಒತ್ತಾಯಿಸಿ, ಅಂಗನವಾಡಿ ನೌಕರರ ಸಮಸ್ಯೆಗಳನ್ನು ಇತ್ಯರ್ಥ ಮಾಡಲು ಸರಕಾರವನ್ನು ಒತ್ತಾಯಿಸಿ, ಪವರ್‌ಕಟ್ ವಿರುದ್ಧ ಮತ್ತು ಅದರಿಂದಾಗಿ ಸ್ಟೀಲ್ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಕಾರ್ಮಿಕರಿಗೆ ಆಗುತ್ತಿರುವ ತೊಂದರೆಗಳ ಕುರಿತು, ವಿದ್ಯುತ್ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಒತ್ತಾಯಿಸಿ, ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಖಾಸಗೀಕರಣದ ವಿರುದ್ಧ ಮತ್ತು ಹಲವಾರು ನಿರ್ಣಯಗಳನ್ನು ಒಮ್ಮತದಿಂದ ಸಮ್ಮೇಳನ ಅಂಗೀಕರಿಸಿದೆ.

50 ಸದಸ್ಯರ ನೂತನ ಜಿಲ್ಲಾ ಸಮಿತಿಯನ್ನು ಸಮ್ಮೇಳನವು ಆಯ್ಕೆಮಾಡಿದೆ. ಕೆ.ಎಸ್. ಸುಬ್ರಮಣ್ಯ-ಅಧ್ಯಕ್ಷರು, ರೋನಾಲ್ಡ್ ವಾಜ್, ಆರ್. ಶ್ರೀನಿವಾಸ್, ಇ.ಕೆ.ಎನ್.ರಾಜನ್, ವಿಭೂತಿಮಠ್ - ಉಪಾಧ್ಯಕ್ಷರುಗಳು, ಮೀನಾಕ್ಷಿ ಸುಂದರಂ - ಪ್ರಧಾನ ಕಾರ್ಯದರ್ಶಿ, ಹೆಚ್.ಎನ್.ಗೋಪಾಲಗೌಡ, ಜಿ.ರಾಮಯ್ಯ, ಎಸ್.ವರಲಕ್ಷ್ಮಿ, ಲೀಲಾವತಿ, ಎಂ.ರಾಜಣ್ಣ- ಕಾರ್ಯದರ್ಶಿಗಳು, ಮಿಲ್ಕಿಯೋರ್- ಖಜಾಂಚಿಗಳಾಗಿರುವ ನೂತನ ಪದಾಧಿಕಾರಿ ಮಂಡಳಿಯನ್ನು ಆಯೆ ಮಾಡಲಾಗಿದೆ.

ಧಾರವಾಡ ಜಿಲ್ಲಾ ಸಮ್ಮೇಳನ



ಕಾರ್ಮಿಕರು ಸಂಘಟಿತರಾಗಿ ತಮ್ಮ ಹೋರಾಟವನ್ನು ಕೇವಲ ಕೂಲಿ, ಭತ್ಯೆ, ಬೋನಸ್ ಮುಂತಾದ ಆರ್ಥಿಕ ಬೇಡಿಕೆಗಳಿಗೆ ಸೀಮಿತಗೊಳಿಸದೇ, ದೇಶದ ಎಲ್ಲಾ ದುಡಿಯುವ ಜನರ ಸಮಸ್ಯೆಗಳನ್ನು ಎತ್ತಿಕೊಂಡು ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಸೂಕ್ತ ಸಾಮಾಜಿಕ ಬದಲಾವಣೆಯ ಜವಾಬ್ದಾರಿಯನ್ನು ನಿರ್ವಹಿಸುವುದು ಅಗತ್ಯವಿದೆ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್ ಸಿಐಟಿಯು ಧಾರವಾಡ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸುತ್ತಾ ಕರೆ ನೀಡಿದರು. ದೇಶದಲ್ಲಿ 16 ಕೋಟಿ ಜನರು ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದು, ಅವರೆಲ್ಲರ ಕೂಲಿ, ಉದ್ಯೋಗ, ಶಿಕ್ಷಣ, ವಸತಿ ಮತ್ತಿತರ ಎಲ್ಲಾ ಸಮಸ್ಯೆಗಳಿಗೆ ಕಾರ್ಮಿಕ ಸಂಘಟನೆಗಳು ಸ್ಪಂದಿಸಬೇಕೆಂದು ಸಲಹೆ ಮಾಡಿದರು. ವಿಜ್ಞಾನ, ತಂತ್ರಜ್ಞಾನ ಅತ್ಯಂತ ಶೀಘ್ರವಾಗಿ ಬೆಳೆಯುತ್ತಿದ್ದು, ಜಗತ್ತು ಸಂಪರ್ಕ ಸಾರಿಗೆ ಸಾಧನಗಳ ಮೂಲಕ ತೀರಾ ಹತ್ತಿರವಾಗುತ್ತಿರುವುದನ್ನು ಸ್ವಾಗತಿಸಿದ ನಾಯರ್ ಸದ್ಯ ಅವುಗಳ ಲಾಭವನ್ನು ಬಹುರಾಷ್ಟ್ರೀಯ ಸಂಸ್ಥೆಗಳು ದೇಶದ ಗುತ್ತೇದಾರಿ ಸಂಸ್ಥೆಗಳು ಮತ್ತು ಭೂ ಮಾಲಕರು ಪಡೆಯುತ್ತಿದ್ದಾರೆ ಎಂದು ವಿಷಾದಿಸಿದರು. ಬದಲಾದ ಪರಿಸ್ಥಿತಿಯಲ್ಲಿ ದುಡಿಯುವ ಜನರ ಮೂಲಭೂತ ಸಮಸ್ಯೆಗಳಾದ ಬಡತನ, ದಾರಿದ್ರ್ಯ, ಅನಕ್ಷರತೆ, ಅನಾರೋಗ್ಯ ಇತ್ಯಾದಿಗಳನ್ನು ಹೋಗಲಾಡಿಸಿ, ಸಮಾನ ಅವಕಾಶಗಳ ಹಾಗೂ ಸಹ ಬಾಳ್ವೆಯ ಜನತಾ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಶ್ರಮಿಸಬೇಕಾಗಿದೆ ಎಂದರು. ಈ ಜಿಲ್ಲಾ ಸಮ್ಮೇಳನವು ಏಪ್ರಿಲ್‌ನಲ್ಲಿ ಏರ್ನಾಕುಲಂನಲ್ಲಿ ನಡೆಯಲಿರುವ ಸಿಐಟಿಯುವಿನ ಅಖಿಲ ಭಾರತ ಸಮ್ಮೇಳನದ ಹಾಗೂ ಮಾರ್ಚಿಯಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ರಾಜ್ಯ ಸಮ್ಮೇಳನದ ಪೂರ್ವಭಾವಿಯಾಗಿ ನಡೆಯುತ್ತಿದೆ ಎಂದು ತಿಳಿಸಿದ ನಾಯರ್ ರಾಜ್ಯದ ಈ ಭಾಗದಲ್ಲಿ ಸಿಐಟಿಯು ಬಲಪಡಿಸಲು ಕರೆ ನೀಡಿದರು.

ಸಮ್ಮೇಳನವನ್ನು ಉದ್ದೇಶಿಸಿ, ಗ್ರಾಮ ಪಂಚಾಯತ್ ನೌಕರರ ಸಂಘದ ಪರವಾಗಿ ಸಿ.ಆರ್.ಭಟ್, ಟೆಲಿಕಾಂ ನೌಕರರ ಸಂಘದ ಎಂ.ಸದಾನಂದ, ಸಾಮೂಹಿಕ ಸಂಘಟನೆಗಳ ಪರವಾಗಿ ಎಂ.ಕೆ.ದೇಶಪಾಂಡೆ, ವಿಮಾ ನೌಕರರ ಸಂಘದ ಪರವಾಗಿ ಬಿ.ವೈ.ಈಳಿಗೇರ, ಶಿಕ್ಷಕರ ಪರವಾಗಿ ಬಿ.ಎಸ್.ಸೊಪ್ಪಿನ, ಎಸ್.ಎಫ್.ಐ ಪರವಾಗಿ ಮಹೇಶ್ ಪತ್ತಾರ್ ಶುಭಕೋರಿ ಮಾತನಾಡಿದರು.

ಜಿಲ್ಲಾ ಸಿಐಟಿಯುವಿನ ಮುಂದಿನ ಕಾರ್ಯಕ್ರಮದ ಕುರಿತು ವರದಿಯನ್ನು ಅಧ್ಯಕ್ಷರಾದ ಎಂ.ಬಿ.ಕಟ್ಟಿ ಮಂಡಿಸಿದರು. ಸಮ್ಮೇಳನದಲ್ಲಿ 120 ಪ್ರತಿನಿಧಿಗಳು ಭಾಗವಹಿಸಿದ್ದು, ನಂತರ ಕೇಂದ್ರ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಹಮ್ಮಿಕೊಂಡಿರುವ ಹೋರಾಟ, ರಾಜ್ಯ ಜನತಾದಳ ಸರಕಾರದ ನಿಷ್ಕ್ರಿಯತೆಯ ವಿರುದ್ಧ ನಡೆಯಲಿರುವ ಪ್ರತಿಭಟನಾ ಆಂದೋಲನ ನಗರ ಹಾಗೂ ಪುರಸಭೆಗಳು ಪುನಃ ಆಕ್ಟ್ರಾಯ್ ತೆರಿಗೆ ಜಾರಿಗೊಳಿಸುವ ವಿರೋಧಿ ಚಳುವಳಿ, ವಿಮಾ ಉದ್ಯಮದ ಖಾಸಗೀಕರಣದ ವಿರುದ್ಧ ಹೋರಾಟ, ಗ್ರಾಮ ಪಂಚಾಯತ್ ನೌಕರರಿಗೆ ಸರಕಾರಿ ಹಾಗೂ ಪುರಸಭಾ ನೌಕರರಿಗೆ ಸರಿಸಮನಾಗಿ ವೇತನ ಶ್ರೇಣಿ ಮತ್ತಿತರ ಸೇವಾ ಸೌಲಭ್ಯಗಳಿಗಾಗಿ ಹೋರಾಟ, ಹಾನಗಲ್ ತಾಲೂಕಿನ ಕೃಷಿ ಕೂಲಿಕಾರರ ಭೂಮಿಗಾಗಿ ಹೋರಾಟ, ಬೀಡಿ ಕಾರ್ಮಿಕರಿಗೆ ಕನಿಷ್ಟ ಕೂಲಿ ಜಾರಿಗಾಗಿ ಹೋರಾಟ, ಬೋನಸ್ ಮಿತಿ ತೆಗೆದು ಹಾಕಲು ಆಂದೋಲನ ಮುಂತಾದವುಗಳನ್ನು ಬೆಂಬಲಿಸಿ ಠರಾವುಗಳನ್ನು ಅಂಗೀಕರಿಸಲಾಯಿತು.

ಈ ಸಮ್ಮೇಳನ ಮುಂದಿನ ಅವಧಿಗಾಗಿ 31 ಮಂದಿಯ ಸಮಿತಿಯನ್ನು ಆಯೆ ಮಾಡಿದೆ. ಅವರಲ್ಲಿ ಎಂ.ಬಿ.ಕಟ್ಟಿ ಅಧ್ಯಕ್ಷರಾಗಿ, ಎಂ.ಕೆ.ದೇಶಪಾಂಡೆ ಮತ್ತು ಎಂ.ಸದಾನಂದ ಉಪಾಧ್ಯಕ್ಷರಾಗಿ, ಡಿ.ಬಿ.ಗೋಂದಕರ್ ಪ್ರಧಾನ ಕಾರ್ಯದರ್ಶಿಯಾಗಿ, ಸಿ.ಆರ್.ಭಟ್ ಸಂಘಟನಾ ಕಾರ್ಯದರ್ಶಿಯಾಗಿ, ಬಿ.ಎಂ.ಪೂಜಾರಿ, ವಿ.ಎಂ.ಜೋಶಿ ಮತ್ತು ರವಿ ಹೊನವಾಡ ಸಹ ಕಾರ್ಯದರ್ಶಿಗಳಾಗಿ ಹಾಗೂ ಆರ್.ಬಿ.ಹರಿದಾಸ್ ಖಜಾಂಚಿಯಾಗಿ ಆಯ್ಕೆ ಗೊಂಡರು.

ಕನಿಷ್ಟ ಕೂಲಿ 42.46 ರೂಗೆ ಒತ್ತಾಯ

ಮಂಗಳೂರಿನ ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ 14ನೇ ವಾರ್ಷಿಕ ಮಹಾಸಭೆಯು ಜನವರಿ 19 ರಂದು ಕಿಲೆಂಜಾರು ಶಾಲೆಯಲ್ಲಿ ಕೆ.ವಾಸುದೇವ ಆಚಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಬೀಡಿ ಕಾರ್ಮಿಕರ ರಾಜ್ಯವ್ಯಾಪಿ ನಡೆದ ಹಂತ ಹಂತ ಹೋರಾಟದ ಫಲವಾಗಿ 96 ರ ನವಂಬರ್ 1 ರಿಂದ ಸಾವಿರ ಬೀಡಿಗೆ ತುಟ್ಟಿಭತ್ಯೆ ಸೇರಿ 42.46 ಪೈಸೆ ನಿಗದಿಯಾಗಿ 70 ದಿನ ಕಳೆದರೂ ಈ ತನಕ ಬೀಡಿ ಮಾಲಕರು ಕೊಡದೇ 34.13 ಪೈ. ಯನ್ನೇ ಕೊಟ್ಟು ಸಾವಿರ ಬೀಡಿಯಲ್ಲಿ 8.33 ಪೈಸೆ ಕೊಡದೇ ಲಕ್ಷಗಟ್ಟಲೆ ಬೀಡಿ ಕಾರ್ಮಿಕರಿಗೆ ದ್ರೋಹ ಮಾಡಿರುತ್ತಾರೆ. ಮುಂದಿನ ದಿನದಲ್ಲಿ ಕಡಿತಗೊಳಿಸಿದ ಈ ಮಜೂರಿಯನ್ನು ಪಡೆಯಲು ಬೀಡಿ ಮಾಲಕರ ಮುಂದೆ ಶಕ್ತಿಯುತ ಹೋರಾಟ ನಡೆಸಲು ಮಹಾಸಭೆಯು ನಿರ್ಣಯಿಸಿದೆ. ಅಲ್ಲದೇ ಪೆನ್ಶನ್ ಯೋಜನೆಯನ್ನು ಮೂರನೇ ಸವಲತ್ತಾಗಿ ಕೊಡಲು ಒತ್ತಾಯ. 60 ಮಿಲಿ ಮೀಟರ್ ಸಿಗರೇಟಿಗೆ ತೆರಿಗೆ ವಿನಾಯಿತಿ ತೆಗೆಯಬೇಕು. 20 ಲಕ್ಷ ಬೀಡಿಗೆ ತೆರಿಗೆ ಹಾಕಬೇಕು, ಸಂಯುಕ್ತ ರಂಗ ಅಧಿಕಾರಕ್ಕೆ ಬಂದು ಅವರೇ ರಚಿಸಿದ ಕನಿಷ್ಟ ಕಾರ್ಯಕ್ರಮವನ್ನು ಜಾರಿಗೊಳಿಸಬೇಕು, ಬೀಡಿ ಕಾರ್ಮಿಕರ ಮಕ್ಕಳಿಗೆ ಮಾರ್ಕ್ಸ್‌ಗಳ ಪರಿಗಣನೆ ತೆಗೆದುಕೊಳ್ಳದೆ, ಪಾಸಾದ ಎಲ್ಲಾ ಬೀಡಿ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್ ಶಿಪ್ ಕೊಡಬೇಕು. ಬೀಡಿ ಕಾರ್ಮಿಕರಿಗೆ 20 ಶೇ ಬೋನಸ್ಸು ಕೊಡಲು ಒತ್ತಾಯ, ವಾರದಲ್ಲಿ 6 ದಿವಸ ಕೆಲಸ. ಕೆಲಸವಿಲ್ಲದ ದಿನಗಳಿಗೆ ಪರಿಹಾರ ಕೊಡಬೇಕು. ಬೀಡಿ ಕೈಗಾರಿಕೆಯಲ್ಲಿ ಮಧ್ಯವರ್ತಿಗಳನ್ನು ರದ್ದು ಮಾಡಬೇಕೆಂಬ 6 ಬೇಡಿಕೆಯನ್ನು ನಿರ್ಣಯಿಸಿದೆ. ಮಹಾಸಭೆಯನ್ನು ಉದ್ದೇಶಿಸಿ ದ.ಕ.ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಕೆ.ಆರ್.ಶ್ರೀಯಾನ್, ದ.ಕ.ಬೀಡಿ ಫೆಡರೇಷನ್ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿ, ಗುರುಪುರ ಪ್ರದೇಶ ಸಿಪಿಐ(ಎಂ) ಪಕ್ಷದ ಕಾರ್ಯದಶಿ ಯು.ಬಿ.ಲೋಕಯ್ಯ ಮುಂತಾದವರು ಮಾತನಾಡಿದರು.

ಮಹಾಸಭೆಯು 1997 ನೇ ಸಾಲಿಗೆ ಕೆ.ವಾಸುದೇವ ಆಚಾರಿ ಅಧ್ಯಕ್ಷ, ಶ್ರೀಮತಿ ಭವಾನಿ, ಶ್ರೀಮತಿ ಸುಂದರಿದಾಸ್‌ರನ್ನು ಉಪಾಧ್ಯಕ್ಷರನ್ನಾಗಿಯೂ ಕೆ.ಸದಾಶಿವದಾಸ್ ಕಾರ್ಯದರ್ಶಿಯಾಗಿ, ಶ್ರೀಮತಿ ಬೇಬಿ ನಾಯ್ಕ, ಶ್ರೀಮತಿ ಸವಿತಾ ಕುಮಾರಿ; ಸರೋಜಿನಿಯವರನ್ನು ಜೊತೆ ಕಾರ್ಯದರ್ಶಿಗಳನ್ನಾಗಿಯೂ, ಶ್ರೀ ನೋಣಯ ಗೌಡರನ್ನು ಕೋಶಾದಿಕಾರಿಯನ್ನಾಗಿರುವ 29 ಮಂದಿ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿರುತ್ತದೆ. ಅಲ್ಲದೆ ಸಿಐಟಿಯು ದ.ಕ.ಜಿಲ್ಲಾ ಸಮ್ಮೇಳನಕ್ಕೆ ನಮ್ಮ ಸಂಘದಿಂದ 8 ಮಂದಿಯನ್ನು ಪ್ರತಿನಿಧಿಗಳನ್ನು ಆಯ್ಕೆ ಮಾಡಿದೆ.

ರಸಗೊಬ್ಬರ ಪೂರೈಕೆಗೆ ಆಗ್ರಹ

ರಾಯಚೂರು: ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಫೆಡರೇಷನ್ ರಾಯಚೂರು ಶಾಖೆಯು ರೈತರಿಗೆ ಗದ್ದೆಗಳಲ್ಲಿ ಕಾಳು ಕಟ್ಟುವ ಕಾಲದಲ್ಲಿ ಅತ್ಯಗತ್ಯವಾಗಿ ಬೇಕಾದ 17:17:17 ಮತ್ತು 20:20 ರಸಗೊಬ್ಬರ ಪೂರೈಸುವುದರಲ್ಲಿ ವಿಫಲವಾಗಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಚಂದ್ರಶೇಖರ ಬಾಳೆಯವರು ಖಂಡಿಸಿದ್ದಾರೆ.

ಇಡೀ ಜಿಲ್ಲೆಯ ಯಾವುದೇ ಭಾಗದಲ್ಲೂ ಸಿಗದೆ, ಜಿಲ್ಲೆಯರೈತರು ಕಂಗಾಲಾಗಿದ್ದಾರೆ. ಪಕ್ಕದ ಆಂಧ್ರದಲ್ಲಿ ಹೇರಳವಾಗಿ ಸಿಗುವ ಈ ಗೊಬ್ಬರ ಇಲ್ಲಿ ಸಿಗದೆ ಇರಲು ಸಬ್ಸಿಡಿಯನ್ನು ಕೊಡದೆ ಇರುವುದೇ ಕಾರಣ ಎಂದು ವ್ಯಾಪಾರಿಗಾರರು ಹೇಳುತ್ತಾರೆ. ಇದೇ ಕಾರಣವಾದರೆ 'ಮಣ್ಣಿನ ಮಗನ ರಾಜ್ಯಾಭಾರದಲ್ಲೂ ಮಣ್ಣಿನ ಮಕ್ಕಳು ಗೋಳಾಡಬೇಕೆ' ಸರಕಾರ ಈ ಬಗ್ಗೆ ಶೀಘ್ರ ಪರಿಶೀಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು, ಇಲ್ಲವೇ ಜಿಲ್ಲಾದ್ಯಂತ ಹೋರಾಟ ರೂಪಿಸಲಾಗುವುದೆಂದು ತಿಳಿಸಿದ್ದಾರೆ.

ಪ್ರೆಸ್ ವರ್ಕರ್ಸ್ ವಾರ್ಷಿಕ ಸಭೆ

ದ.ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕು ಪ್ರೆಸ್ ವರ್ಕರ್ಸ್ ಯೂನಿಯನ್ನಿನ ವಾರ್ಷಿಕ ಮಹಾಸಭೆಯು ಜನವರಿ 26 ರಂದು ಪಿ.ವಿಶ್ವನಾಥ ರೈರವರ ಅಧ್ಯಕ್ಷತೆಯಲ್ಲಿ ಉಡುಪಿಯ ಶ್ರೀನಿವಾಸ ಸಭಾಭವನದಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ವಿಮಾ ನೌಕರರ ಸಂಘದ ಎ.ಎಸ್.ಆಚಾರ್ಯರವರು ಪಾಲ್ಗೊಂಡಿದ್ದರು.

ಸಭೆಯನ್ನುದ್ದೇಶಿಸಿ ಬೀಡಿ ಅಂಡ್ ಟೊಬೋಕೋ ಲೇಬರ್ ಯೂನಿಯನ್‌ನ ಸಾಧು ಅಮೀನ್, ನೆಯ್ಗೆ ಯೂನಿಯನ್ನಿನ ಕೆ.ಗುರುರಾಜ ಶೆಟ್ಟಿಗಾರ್ ಮಾತನಾಡಿದರು. ಸಭೆಯು ತಾಲ್ಲೂಕಿನಲ್ಲಿ ಬಲಿಷ್ಠವಾದ ಸಂಘಟನೆ ಕಟ್ಟಿ ತಮ್ಮ ಬೇಡಿಕೆಗಳನ್ನು ಈಡೇರಿಸಿ ಕೊಳ್ಳಲು ಹೋರಾಡಲು ನಿರ್ಧರಿಸಿತು. ನಂತರ ಹೊಸ ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷರು:ಪಿ.ವಿಶ್ವನಾಥ ರೈ, ಉಪಾಧ್ಯಕ್ಷರಾಗಿ ನಿತ್ಯಾನಂದ ನಾಯಕ್, ಕಾರ್ಯದರ್ಶಿಯಾಗಿ ರಮೇಶ್ ಮೆಂಡನ್, ಜತೆ ಕಾರ್ಯದರ್ಶಿಗಳಾಗಿ ಕೆ.ಅಶೋಕಶೆಟ್ಟಿ, ಕೃಷ್ಣನಾಯಕ್ ಮತ್ತು ಖಜಾಂಚಿಯಾಗಿ ಬಿ.ರಾಮಕೃಷ್ಣ ಭಟ್ ಆಯ್ಕೆಗೊಂಡರು.

ಕರ್ನಾಟಕ ಪ್ರಾಂತ ರೈತಸಂಘದ ಜಿಲ್ಲಾ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘದ 5ನೇ ಜಿಲ್ಲಾ ಸಮ್ಮೇಳನವು ದೇವದುರ್ಗ ಪಟ್ಟಣದಲ್ಲಿ 25 ಮತ್ತು 26 ಜನವರಿ 1997 ರಂದು ಯಶಸ್ವಿಯಾಗಿ ಜರುಗಿತು. ಹಿರಿಯ ನಾಯಕರಾದ ಕುಷ್ಟಗಿಯ ವಕೀಲರಾದ ಆರ್. ಕೆ ದೇಸಾಯಿಯವರು ಧ್ವಜರೋಹಣವನ್ನು ಉದ್ಘಾಟನಾ ಸಮಾರಂಭದಲ್ಲಿ ಉದ್ಘಾಟನೆಯನ್ನು ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯವರಾದ ಪಿ. ಜಗನಾಥ್ ನೆರವೇರಿಸಿದರು. ಅವರು ಮತನಾಡುತ್ತಾ ಪಿ.ವಿ. ನರಸಿಂಹರಾಯರ ಹೊಸ ಆರ್ಥಿಕ ನೀತಿಯಿಂದಾಗಿ ಬೇಸತ್ತ ರೈತ ಸಮುದಾಯ ಬಿಜೆಪಿಯ ಕೋಮು ನೀತಿಯನ್ನು ವಿರೋಧಿಸಿ ಸಂಯುಕ್ತ ರಂಗ ರಚಿಸಿಕೊಂಡಿರುವ ಪಕ್ಷಗಳಿಗೆ ಮತ ನೀಡಿತು. ಆದರೆ ಸಂಯುಕ್ತ ರಂಗದ ದೇವೇಗೌಡರು ಪಿ.ವಿ.ನರಸಿಂಹರಾಯರ ಹೊಸ ಆರ್ಥಿಕ ನೀತಿ ಎಂಬ ಆತ್ಮಾಹುತಿ ಅಸ್ತ್ರವನ್ನು ಹಿಡಿದು ರೈತರನ್ನು ಬಗ್ಗುಬಡಿಯಲು ಹೊರಟಿರುವುದು ವಿಷಾದನೀಯ ಎಂದರು.

ಈ ಸಮಾರಂಭದಲ್ಲಿ ರಾಜ್ಯ ಸಮಿತಿಯ ಉಪಾಧ್ಯಕ್ಷರಾದ ಚಂದ್ರಶೇಖರ್ ಬಾಳೆಯವರು ಹಾಜರಿದ್ದರು. ಜಿಲ್ಲೆಯಲ್ಲಿ ಪ್ರಗತಿಗೆ ಅಡ್ಡಿಯಾಗಿರುವ ಹಲವಾರು ಅಂಶಗಳನ್ನು ಚರ್ಚಿಸಿ ಅವುಗಳನ್ನು ವಿರೋಧಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ನಂತರ ಹೊಸ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರು: ಆರ್.ಕೆ.ದೇಸಾಯಿ ಕುಷ್ಟಗಿ, ಕಾರ್ಯದರ್ಶಿ ಮಲ್ಲಯ್ಯ ಜಾಲಹಳ್ಳಿ, ರಾಯಚೂರು, ಉಪಾಧ್ಯಕ್ಷರು ಎಸ್.ತಿಪ್ಪಣ್ಣ ರಾಯಚೂರು, ಸಹಕಾರ್ಯದರ್ಶಿ ಹನುಮಂತಪ್ಪ ಮುರಡಿ ಯಲಬುರ್ಗ, ಹಣಕಾಸು ಕಾರ್ಯದರ್ಶಿ ವೈ.ರಾಮಣ್ಣ ದೇವದುರ್ಗ, ಅಲ್ಲದೆ 12 ಸದಸ್ಯರ ಸಮಿತಿಯನ್ನು ಆಯ್ಕೆಮಾಡಲಾಯಿತು.

ಗ್ರಾಮ ಪಂಚಾಯತ್ ನೌಕರರ ಸಮಾವೇಶ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಜನವರಿ 20 ರಂದು ಗ್ರಾಮ ಪಂಚಾಯತ್ ನೌಕರರ ಸಮಾವೇಶವನ್ನು ಎನ್.ಜಿ.ಓ.ಹಾಲ್‌ನಲ್ಲಿ ನಡೆಸಲಾಯ್ತು. 10 ತಾಲೂಕುಗಳಿಂದ 150 ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರಾರಂಭದಲ್ಲಿ ಮೆರವಣಿಗೆಯ ಮುಖಾಂತರ ಜಿಲ್ಲಾ ಪರಿಷತ್ ಕಛೇರಿಗೆ ಹೋಗಿ ತಮ್ಮ ಬೇಡಿಕೆಗಳ ಮನವಿಯನ್ನು ಮುಖ್ಯ ಕಾರ್ಯದರ್ಶಿಯವರಿಗೆ ನೀಡಿದರು.

ನೂತನ ಜಿಲ್ಲಾ ಸಮಿತಿ

ಗೌರವಾಧ್ಯಕ್ಷರು: ಟಿ.ಎಸ್.ನಾಯಕ್, ಅಧ್ಯಕ್ಷರಾಗಿ ಸುಭಾಷ್ ಕೊಪ್ಪಿಕರ, ಕಾರ್ಯದರ್ಶಿಯಾಗಿ ಎನ್.ಪಿ.ನಾಯ್ಕ ಅಲ್ಲದೆ 13 ಸದಸ್ಯರನ್ನೊಳಗೊಂಡ ಜಿಲ್ಲಾ ಸಮಿತಿಯನ್ನು ಸಮಾವೇಶವು ಆಯ್ಕೆ ಮಾಡಿತು. ಸಂಘದ ಪ್ರಧಾನ ಕಾರ್ಯದರ್ಶಿ ವಿ.ಪಿ.ಕುಲಕರ್ಣಿ ಭಾಗವಹಿಸಿದರು.

ಗುಲ್ಬರ್ಗ: ರೈತರ ಸಮಾವೇಶ

ಗುಲ್ಬರ್ಗ: ಕೃಷ್ಣಾ ಮೇಲ್ದಂಡೆ ಯೋಜನೆ ನೀರಾವರಿ ರೈತರ ಸಮಾವೇಶವು 96ರ ಡಿಸೆಂಬರ್ 23ರಂದು ಭೀಮರಾಯನ ಗುಡಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ನರಗುಂದ, ನವಲಗುಂದ ರೈತರ ಹೋರಾಟ ಸಮಿತಿಯ ಮುಖಂಡರಾದ ಕಾ॥ ಹೆಚ್.ಎಸ್.ಕೊಪ್ಪಣ್ಣನವರು ಉದ್ಘಾಟಿಸುತ್ತಾ ರೈತರ ಮೇಲೆ ಸರಕಾರವು ವಿನಾಕಾರಣ ನೀರಾವರಿ ಕರ ಹಾಕಿ ರೈತರನ್ನು ದಿವಾಳಿ ಮಾಡಿಧುದರ ವಿರುದ್ಧ ಬೆಂಗಳೂರಿಗೆ ಪಾದಯಾತ್ರೆಯ ಮೂಲಕ ಹೋಗಿ ಸರಕಾರದ ಕಣ್ಣು ತೆರೆಸಬೇಕೆಂದು ಕರೆ ನೀಡಿದರು.

ನೀರಾವರಿ ರೈತರ ಸಮಸ್ಯೆಯನ್ನು ತಮ್ಮ ಪ್ರಾಸ್ತವಿಕ ಭಾಷಣದಲ್ಲಿ ಶಹಾಪುರ ತಾಲೂಕು ರೈತ ಸಂಘದ ಅಧ್ಯಕ್ಷರಾದ ಆನೆಗುಂದಿಯವರು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಪಂಚಾಯತ್ ಸದಸ್ಯರಾದ ಮೇಘರಾಜ ರೈತರು ತಮ್ಮ ಹಕ್ಕುಗಳಾಗಿ ಬಲಿಷ್ಠವಾದ ಸಂಘಟನೆ ಕಟ್ಟಿ ಹೋರಾಡ ಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ಜನವಾದಿ ಮಹಿಳಾ ಸಂಘಟನೆಯ ನೀಲ ಮಾತನಾಡಿ ಇಂದು ಹೋರಾಟಕ್ಕೆ ಮಹಿಳೆಯರೂ ಪುರುಷರೊಂದಿಗೆ ಭುಜಕ್ಕೆ ಭುಜಕೊಟ್ಟು ನಿಲ್ಲಬೇಕೆಂದು ಕರೆ ನೀಡಿದರು.

ಸಮಾವೇಶವನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮುಖಂಡರಾದ ಮಾರುತಿ ಮಾನ್ಪಡೆ ಹಾಜರಿದ್ದು ಮಾತನಾಡಿದರು.

ಸಮಾವೇಶದ ಅಧ್ಯಕ್ಷತೆಯನ್ನು ಸುರಪುರ ತಾಲೂಕು ರೈತ ಮುಖಂಡರಾದ ಶೆಳ್ಳಿಪ್ಪ ಹವಾಲದಾರ ವಹಿಸಿದ್ದರು. ಸಮಾವೇಶದಲ್ಲಿ ಹಲವು ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಯಿತು. □

ಗೋಲೀಬಾರು ಸಂಪೂರ್ಣ ಅನಗತ್ಯವಾಗಿತ್ತು

ಪೋಲೀಸರ ಬೇಜವಾಬ್ದಾರಿ, ಅಮಾನುಷ ವರ್ತನೆ

ಸಿಪಿಐ(ಎಂ) ನಿಯೋಗದ ವರದಿ

ಫೆಬ್ರವರಿ 3ರಂದು ಹೆಜ್ಜಾಲದಲ್ಲಿ ಪೋಲೀಸ್ ಗೋಳೀಬಾರಿಗೆ ರಸ್ತೆ ತಡೆ ಮಾಡುತ್ತಿದ್ದ ಕಾರ್ಮಿಕರಿಂದ ಯಾವ ಪ್ರಚೋದನೆಯೂ ಇರಲಿಲ್ಲ. ಪೋಲೀಸರು ಬೇಜವಾಬ್ದಾರಿಯಿಂದ ಅಮಾನುಷವಾಗಿ ವರ್ತಿಸಿದ್ದಾರೆ. ಯಾರನ್ನಾದರೂ ಬಂಧಿಸಲೇಬೇಕೆಂದು ಹಟ ತೊಟ್ಟಂತೆ ಕಾಣುತ್ತದೆ. ಸಿಪಿಐ(ಎಂ) ಕೇಂದ್ರ ಸಮಿತಿಯ ಪರವಾಗಿ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಸತ್ಯಶೋಧನಾ ತಂಡಕ್ಕೆ ಕಂಡು ಬಂದ ಸಂಗತಿಯಿದು.

ಸಿಪಿಐ(ಎಂ) ಸಂಸತ್ ಸದಸ್ಯ ಒ.ಭರತನ್ ಹಾಗೂ ಕರ್ನಾಟಕದ ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿಯವರಿದ್ದ ಈ ತಂಡ ಹೆಜ್ಜಾಲಕ್ಕೆ ಭೇಟಿ ನೀಡಿ ಘಟನೆಯ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿದ್ದಲ್ಲದೆ ಗೋಳೀಬಾರಿಗೆ ಬಲಿಯಾದವರ ಮನೆಗಳಿಗೂ ಭೇಟಿ ನೀಡಿ ದುಃಖತಪ್ತರನ್ನು ಸಾಂತ್ವನಗೊಳಿಸಲು ಪ್ರಯತ್ನಿಸಿತು. ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿರುವ ವಿಕ್ಟೋರಿಯಾ ಆಸ್ಪತ್ರೆಗೂ ಅವರು ಭೇಟಿಯಿತ್ತರು.

ಕಾರ್ಮಿಕರು ತಮ್ಮ ದೀರ್ಘಕಾಲದ ನ್ಯಾಯಯುತ ಬೇಡಿಕೆಗಳ ಬಗ್ಗೆ ಸರಕಾರದ ನಿರ್ಲಕ್ಷ್ಯದತ್ತ ಸಾರ್ವಜನಿಕರ, ಸರಕಾರದ ಗಮನ ಸೆಳೆಯಲು 2 ಗಂಟೆಗಳ ರಸ್ತೆ ತಡೆ ನಡೆಸಲು ನಿರ್ಧರಿಸಿ ಪೋಲೀಸರ ಅನುಮತಿ ಕೇಳಿದ್ದರು. ಪೋಲೀಸರು ಒಂದು ಗಂಟೆಯಾಗುತ್ತಿದ್ದಂತೆ ಮೈಸೂರು ರಸ್ತೆಯನ್ನು ತೆರವು ಮಾಡಲು ಪ್ರಯತ್ನಿಸಿದಾಗ ಶಾಂತವಾಗಿಯೇ ಕುಳಿತಿದ್ದ ಕಾರ್ಮಿಕರು, ಅವರ ಮುಖಂಡರು ತಾವು ಬಂಧನಕ್ಕೊಳಗಾಗಲು ಸಿದ್ಧ ಎನ್ನುತ್ತಿದ್ದಾಗಲೇ ಲಾಠಿ ಪ್ರಹಾರ, ಅಶ್ರುವಾಯು ಮತ್ತು ಗೋಳೀಬಾರು ಒಮ್ಮೆಲೆ ನಡೆಯಿತು ಎಂದು ಪ್ರತ್ಯಕ್ಷ ದರ್ಶಿಗಳಿಂದ ತಿಳಿದು ಬಂದಿರುವುದಾಗಿ ಸಿಪಿಐ(ಎಂ) ನಿಯೋಗ ಹೇಳಿದೆ. ಬಸ್, ಕಾರುಗಳ ಮೇಲೆ ಕಲ್ಲು ತೂರಾಟ, ಅಗ್ನಿ ಸ್ಪರ್ಶ ನಡೆದದ್ದು ನಿಜ. ಆದರೆ ಅದು ಕಾರ್ಮಿಕರು ರಸ್ತೆತಡೆ ನಡೆಸುತ್ತಿದ್ದ ಸ್ಥಳದಿಂದ ಅರ್ಧ ಕಿಲೋಮೀಟರ್ ದೂರದಲ್ಲಿ ನಡೆಯಿತು ಎಂದೂ ಸ್ಪಷ್ಟವಾಗಿದೆ.

ಪೋಲೀಸರಲ್ಲೇಕೆ ಗೊಂದಲ?

ಗೋಳೀಬಾರಿಗೆ ಆದೇಶ ಕೊಟ್ಟವರು ಯಾರು ಎಂಬ ಬಗ್ಗೆ ಪೋಲೀಸರಲ್ಲೇ ಬಹಳ ಗೊಂದಲ ಇರುವುದು ಸಿಪಿಐ(ಎಂ) ತನಿಖಾ ತಂಡಕ್ಕೆ ಕಂಡು ಬಂತು. ಈ ಬಗ್ಗೆ ಕೇಳಿದಾಗ ಪೋಲೀಸರು ಅವರ ಅಧಿಕಾರಿಗಳು ತಡವರಿಸಿದರು, ಸ್ಪಷ್ಟವಾದ ಉತ್ತರ ದೊರೆತಿಲ್ಲ. ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಘಟನಾ ಸ್ಥಳದಲ್ಲಿ ಇದ್ದ ಅಥವಾ ಅವರಿಂದ ಆದೇಶ ಪಡೆದ ಪುರಾವೆಯೇನೂ ದೊರೆತಿಲ್ಲ. ಬೆಂಗಳೂರು ಗ್ರಾಮಾಂತರ ಪೋಲೀಸ್ ಸೂಪರಿಂಟೆಂಡೆಂಟ್‌ರು ಬಂದ ಕೂಡಲೇ ಗೋಳೀಬಾರು ಆರಂಭವಾಯಿತು ಎಂದು ಕಂಡು ಬಂದಿದೆ. ಅಲ್ಲದೆ ಗೋಳೀಬಾರು ನಡೆದಾಗ ಎಸ್.ಐ., ಸರ್ಕಲ್ ಇನ್ಸ್‌ಪೆಕ್ಟರ್, ಎಸ್.ಪಿ. ಈ ಮೂವರೂ ಪೋಲೀಸ್ ಅಧಿಕಾರಿಗಳು ಅಲ್ಲಿದ್ದರು.

ರಸ್ತೆ ತಡೆ ಕಾರ್ಯಕ್ರಮ ಸಂಘಟಿಸಿದ್ದ ಕಾರ್ಮಿಕ ನಾಯಕರಲ್ಲಿ ಗೊಂದಲವಿತ್ತು ಎಂಬಂತೆ ಚಿತ್ರಿಸಲು ಪೋಲೀಸರು ಪ್ರಯತ್ನಿಸಿದ್ದಾರೆ. ವಿ.ಜಿ.ಕೆ.ನಾಯರ್, ರಾಜಣ್ಣ ಹಾಗೂ ವರಲಕ್ಷ್ಮಿ ರಸ್ತೆ-ತಡೆಯ ನೇತೃತ್ವ ವಹಿಸಿದ್ದರು. ಅವರಲ್ಲಿ ಈ ಬಗ್ಗೆ ಏನೂ ಗೊಂದಲವಿರಲಿಲ್ಲ, ರಸ್ತೆ ತಡೆ ಶಾಂತಿಯುತವಾಗಿಯೇ ನಡೆಯುತ್ತಿತ್ತು ಎಂದೂ ಸಿಪಿಐ(ಎಂ) ತಂಡಕ್ಕೆ ಕಂಡು ಬಂದಿದೆ.

ಗೋಳೀಬಾರು ಯಾವುದೇ ನಿಯಂತ್ರಣವಿಲ್ಲದೆ ಸಿಕ್ಕ ಸಿಕ್ಕ ಕಡೆ ನಡೆದಿದೆ ಎಂಬುದೂ ಸಿಪಿಐ(ಎಂ) ತಂಡಕ್ಕೆ ಮನವರಿಕೆಯಾಗಿದೆ. ಪಕ್ಕದಲ್ಲಿದ್ದ ಶಾಲೆಯ ಗೋಡೆಯ ಮೇಲೆಯೇ ಅಶ್ರುವಾಯು ಸಿಡಿಸಿದ್ದರಿಂದ ಮಕ್ಕಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡುವಂತಾಯಿತು. ಸುತ್ತಮುತ್ತಲ ಅಂಗಡಿ ಬಾಗಿಲುಗಳಲ್ಲಿ ಗುಂಡಿನ ಗುರುತುಗಳಿವೆ. ಬಹಳ ದೂರದವರೆಗೂ ಬೆನ್ನಟ್ಟಿ ಜನರ ಮೇಲೆ ಗೋಳೀಬಾರು ನಡೆಸಿದ್ದು ಸ್ಪಷ್ಟವಾಗಿದೆ. ಅಲ್ಲದೆ ಗೋಳೀಬಾರು ನಡೆಸಿದಾಗ ಗುಂಡುಗಳು ಮೊಣಕಾಲ ಮೇಲೆ ಹೋಗದಂತೆ ನೋಡಿಕೊಳ್ಳುವ ತರಬೇತಿ ಪೋಲೀಸರಿಗೆ ನೀಡಲಾಗಿರುತ್ತದೆ. ಆದರೆ ಈ ಘಟನೆಯಲ್ಲಿ ಗುಂಡಿಗೆ ಬಲಿಯಾದವರು ಹಾಗೂ ಅದರಿಂದ ಗಾಯಗೊಂಡವರು ಎಲ್ಲರಿಗೂ ಗುಂಡು ಎದೆ ಹಾಗೂ ಎಡ-ಬಲ ಭುಜಗಳನ್ನೇ ಹೊಕ್ಕಿರುವುದು ಕಂಡು ಬಂದಿದೆ.

ಪೋಲೀಸರ ದುರಾಚಾರಕ್ಕೆ ಕೈಗನ್ನಡಿ!

ಪೋಲೀಸರು ಬಂಧಿಸಿದವರಲ್ಲಿ ವಿ.ಜೆ.ಕೆ.ನಾಯರ್ ಮತ್ತು ಕೆಲವು ಕಾರ್ಮಿಕರಲ್ಲದೆ, ಗೋಳೀಬಾರಿನ ವೇಳೆಗೆ ಬೇರೆ ಬೇರೆ ಕಾರಣಗಳಿಗಾಗಿ ಅಲ್ಲಿದ್ದ ಹಲವು ಅಮಾಯಕರನ್ನು ಬಂಧಿಸಿರುವುದೂ ಕಂಡು ಬಂದಿದೆ. ಬಂಧಿತರಲ್ಲಿ ಒಬ್ಬ 9ನೇ ತರಗತಿಯಲ್ಲಿ ಓದುತ್ತಿರುವ, ಇನ್ನೊಬ್ಬ ಹತ್ತನೇ ತರಗತಿಯಲ್ಲಿ ಓದುತ್ತಿರುವ ಬಾಲಕ, ಮತ್ತೊಬ್ಬ ಇಂಜಿನಿಯರಿಂಗ್ ಕಾಲೇಜ್ ವಿದ್ಯಾರ್ಥಿ-ತಮ್ಮ ತಮ್ಮ ಶಾಲೆ-ಕಾಲೇಜುಗಳಿಗೆ ಹೊರಟವರು, ಬಸ್ ಸಿಗದೆ ಘಟನಾ ಸ್ಥಳದಲ್ಲಿದ್ದವರು. ತಮ್ಮ ಶಾಲಾ ಬ್ಯಾಗುಗಳ ಸಹಿತ ಇವರನ್ನು ಬಂಧಿಸಲಾಗಿದೆ. ಒಬ್ಬರು ಲಾರಿ ಡ್ರೈವರ್ ಕ್ಲೀನರ್ ಕೂಡಾ ಬಂಧಿತರಾಗಿದ್ದಾರೆ. ಇವರೆಲ್ಲರ ಮೇಲೆ ಕೊಲೆ ಪ್ರಯತ್ನದ ಆಪಾದನೆ ಹಾಕಲಾಗಿದೆ. ಅಲ್ಲದೆ ಇನ್ನೂ 2000 ಮಂದಿಯ ಹೆಸರುಗಳನ್ನು ಸೂಚಿಸದೆ ಮೊಕದ್ದಮೆ ಹಾಕಲಾಗಿದೆ! ಯಾರನ್ನಾದರೂ ಬಂಧಿಸಿ ಗೋಳೀಬಾರಿಗೆ ಸಮರ್ಥನೆ ಸೃಷ್ಟಿಸಬೇಕೆಂಬ ಹಠ ಪೋಲೀಸರಲ್ಲಿದ್ದಂತಿತ್ತು.

ಕಾಂಗ್ರೆಸ್ ಮತ್ತು ಜನತಾದಳ ಈ ಘಟನೆಯ ಬಗ್ಗೆ ಪರಸ್ಪರ ದೂರಿತ್ತಿವೆ. ಆದರೆ ಪೋಲೀಸರು ಬಂಧಿಸಿದವರಲ್ಲಿ ಈ ಎರಡು ಪಕ್ಷಗಳಿಗೆ ಸೇರಿದವರು ಒಬ್ಬರೂ ಕೂಡಾ ಇಲ್ಲ ಎಂಬುದು ಸ್ಪಷ್ಟವಾಗಿ ಕಂಡು ಬಂದಿದೆ. ಇವರಿಬ್ಬರಿಗೂ ದೀರ್ಘ ಕಾಲದಿಂದ ಹೋರಾಟದಲ್ಲಿರುವ ಕಾರ್ಮಿಕರ ಸಂಕಷ್ಟಗಳ ಬಗ್ಗೆ ಕಾಳಜಿಯೇನೂ ಇಲ್ಲ, ಉಪ ಚುನಾವಣೆಯಲ್ಲಿ ಪ್ರಯೋಜನ ಗಳಿಸುವುದಷ್ಟೇ ಅವರ ಉದ್ದೇಶವಿದ್ದಂತಿದೆ. ಈ ಘಟನೆಯ ಹಿಂದೆ ಯಾರದೋ ಕೈವಾಡ ಇರುವ ಸಾಧ್ಯತೆಯೂ ಇದೆ ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಸಿಪಿಐ(ಎಂ) ತನಿಖಾ ತಂಡ ತಿಳಿಸಿತು.

ಸಾಮಾನ್ಯವಾಗಿ ಇಂತಹ ರಸ್ತೆ ತಡೆಗೆ ಅನುಮತಿ ನೀಡಿದಾಗ ಪೋಲೀಸರು ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆ ಮಾಡಬೇಕು. ಇಲ್ಲಿ ಒಂದು ಗಂಟೆ ರಸ್ತೆ ತಡೆಗೆ ಅನುಮತಿ ನೀಡಿದರೂ ಮೈಸೂರು ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆ ಮಾಡದಿರುವುದು ಪೋಲೀಸರ ಬೇಜವಾಬ್ದಾರಿತನವನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಸಂಸತ್ ಸದಸ್ಯ ಒ.ಭರತನ್ ಅಭಿಪ್ರಾಯಪಟ್ಟಿದ್ದಾರೆ.

ಮಾಲಕನನ್ನು ಬಂಧಿಸಿ

ತಮ್ಮ ತನಿಖೆಯಲ್ಲಿ ಕಂಡು ಬಂದ ಸಂಗತಿಗಳನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಕಳಿಸಿದ ಈ ಸತ್ಯಶೋಧನಾ ತಂಡದ ಸದಸ್ಯರು ಪತ್ರಿಕಾ ಸಮ್ಮೇಳನವೊಂದರಲ್ಲಿ ಪತ್ರಕರ್ತರ ಮುಂದಿಟ್ಟರು. ಈ ಹಿನ್ನೆಲೆಯಲ್ಲಿ ನಿಮ್ಮ ಒತ್ತಾಯಗಳೇನು ಎಂದು ಕೇಳಿದಾಗ ಅವರು ಈ ಕೆಳಗಿನ ಒತ್ತಾಯಗಳನ್ನು ಪುನರುಚ್ಚರಿಸಿದರು.

- ಗಿರಣಿಯ ಮಾಲಕ ವಳ್ಳಿಯಪ್ಪನವರನ್ನು ಬಂಧಿಸಬೇಕು. ಏಕೆಂದರೆ ಆತ ಕಾರ್ಮಿಕ ಕಾನೂನುಗಳ ಉಲ್ಲಂಘನೆ ಮಾಡಿ ಈ ದುರಂತಕ್ಕೆ ಕಾರಣನಾದ ಕೇಂದ್ರ ವ್ಯಕ್ತಿ. ಕಾರ್ಮಿಕರು ರಚಿಸಿಕೊಂಡ ಸಂಘದೊಂದಿಗೆ ಮಾತುಕತೆ ನಡೆಸಲು ನಿರಾಕರಿಸುವ ಯಾವುದೇ ಮಾಲಕ ಕಾನೂನಿನ ಪ್ರಕಾರ 6 ತಿಂಗಳ ಸಜೆಗೊಳಪಡಬೇಕಾಗುತ್ತದೆ. ಅಲ್ಲದೆ ಈ ಮಾಲಕ ಲೇಬರ್ ಕಮೀಶನರ್ ಎದುರು, ಮಂತ್ರಿಗಳ ಎದುರು, ಮುಖ್ಯಮಂತ್ರಿಗಳ ಎದುರು ಕೂಡಾ ಒಪ್ಪಿಕೊಂಡದ್ದನ್ನು ಕೂಡಾ ಪಾಲಿಸಿಲ್ಲ. ಎರಡು ಬಾರಿ ಸಂಧಾನಕ್ಕೆ ತಾನೇ ಸ್ವತಃ ಪ್ರಯತ್ನಿಸಿದರೂ ಈ ಮಾಲಕ ಅದನ್ನು ವಿಫಲಗೊಳಿಸಿದ್ದನ್ನು ಸಿಪಿಐ(ಎಂ) ಶಾಸಕ ಶ್ರೀರಾಮರೆಡ್ಡಿಯವರು ನೆನಪಿಸಿದರು.
- ಕಾರ್ಮಿಕರಿಗೆ ಕಾನೂನು ಪ್ರಕಾರ ನೀಡಬೇಕಾದ ಕನಿಷ್ಟ ಸೌಲಭ್ಯಗಳಾದರೂ ಸಿಗುವಂತಾಗಬೇಕು.
- ಗೋಳೀಬಾರಿಗೆ ಬಲಿಯಾದ ಮೂವರ ಕುಟುಂಬಕ್ಕೆ ತಲಾ 5 ಲಕ್ಷ ರೂ ಹಾಗೂ ಗೋಳೀಬಾರಿನಿಂದ ತೀವ್ರ ಗಾಯಗಳಾಗಿ ನರಳುತ್ತಿರುವವರಿಗೆಲ್ಲಾ ತಲಾ 1 ಲಕ್ಷ ರೂ ಪರಿಹಾರ ನೀಡಬೇಕು.

ಸತ್ಯಶೋಧನಾ ತಂಡ ತನ್ನ ವರದಿಯನ್ನು ಸಿಪಿಐ(ಎಂ) ಕೇಂದ್ರ ಸಮಿತಿಗೆ ಸಲ್ಲಿಸಲಿದ್ದು ಇದನ್ನು ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ಸಂಸತ್ತಿನಲ್ಲಿ ಎತ್ತಲಾಗುವುದು ಎಂದು ಸಿಪಿಐ(ಎಂ) ಮುಖಂಡರು ತಿಳಿಸಿದ್ದಾರೆ.

ಲೇಬರ್ ಕಾನೂನುಗಳನ್ನು ಹಾಡು ಹಗಲೇ ಉಲ್ಲಂಘಿಸುವ ಕಾರ್ಖಾನೆ ಮಾಲೀಕನನ್ನು ಪೋಲೀಸರೇಕೆ ಹೀಗೆ ದಂಡಿಸುವುದಿಲ್ಲ. ಕಾರ್ಮಿಕರಿಗೆ ಮಾತ್ರ ಏಕೆ ಇಂತಹ ಹಿಂಸೆ?



ದುಡಿಯುವ ಜನಗಳಿಗೆ ಮಾತ್ರ ರೋಸಿಹೋಗುವ ಹಕ್ಕಿಲ್ಲವೇ?

ಪುಟ 1ರಿಂದ

ಕೊಟ್ಟದ್ದು ಇಂತಹ ಸ್ವಾತಂತ್ರ್ಯಕ್ಕಾಗಿಯೇನು? ನಮ್ಮ ಕಾರ್ಮಿಕರು ಮುಂಬೈ, ಕಲ್ಕತ್ತಾ ಮತ್ತಿತರ ನಗರಗಳ ಬೀದಿಗಳಲ್ಲಿ ಬ್ರಿಟಿಷ್ ಪೋಲೀಸರ ಗುಂಡುಗಳಿಗೆ ಸವಾಲೊಡ್ಡಿದ್ದು ಇಂತಹ ಪ್ರಜಾಪ್ರಭುತ್ವಕ್ಕಾಗಿಯೇನು? - ಇದು ಫೆಬ್ರವರಿ 4 ರಂದು ನಡೆದ ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಾದ ಸೂರ್ಯನಾರಾಯ ಣರಾವ್ ದುಡಿಯುವ ಜನಗಳ ನಡುವೆ ನಾಲ್ಕೈದು ದಶಕಗಳಿಂದ ದುಡಿಯುತ್ತಿರುವ ಹಿರಿಯ ಮುಖಂಡರಾದ ಪಿ.ರಾಮಚಂದ್ರರಾವ್ ಮತ್ತಿತರರು ಎತ್ತಿದ ಗಹನವಾದ ಪ್ರಶ್ನೆ. ರೈತರು, ಕಾರ್ಮಿಕರು ಬಿಳಿದೊಗಲಿನ ಸ್ಯಾಂಡರ್ಸ್‌ಗಳ, ಡಾಯರ್‌ಗಳ ಗುಂಡೇಟುಗಳನ್ನು ಎದುರಿಸಿ ನಿಂತದ್ದು ಅನಿಲ್‌ಕುಮಾರ್‌ಗಳ, ಬರ್ಮನ್‌ಗಳ, ನಾರಾಯಣಗೌಡರುಗಳ ಬೆದರಿಕೆಗಳಿಗೆ, ಲಾಠಿಗಳಿಗೆ ಬಲಿಯಾಗಲು ಅಲ್ಲ ಎಂಬುದನ್ನು ಇವರು ನೆನಪಿಸಿಕೊಳ್ಳಬೇಕು. 47 ವರ್ಷಗಳ ಹಿಂದೆ ನಮ್ಮದು ಪ್ರಜಾಪ್ರಭುತ್ವ ಎಂದು ಘೋಷಿಸಿಕೊಂಡದ್ದು ಪೋಲೀಸರು, ಅಧಿಕಾರಿಗಳು, ರಾಜಕಾರಣಿಗಳು, ಹೆಂಚಿನ ಕಾರ್ಖಾನೆ ಮಾಲಕರ, ವಳ್ಳಿಯಪ್ಪಗಳ, ಎಲ್ ಅಂಡ್ ಟಿಗಳ, ಬಹುರಾಷ್ಟ್ರೀಯ ಕಂಪನಿಗಳ ಒಡೆಯರ ದುರಾಸೆಗಳನ್ನು ಪೋಷಿಸಲಿ ಎಂದಲ್ಲ ಎಂಬುದನ್ನು ಇವರೆಲ್ಲಾ ಈಗಲಾದರೂ ಅರಿತುಕೊಳ್ಳಬೇಕು.

ರಾಜೀವ್ ಗಾಂಧಿಯವರು ಆರಂಭಿಸಿದ, ನರಸಿಂಹರಾಯರು ಗಟ್ಟಿಗೊಳಿಸಲೆತ್ನಿಸಿದ, ಈಗ ದೇವೇಗೌಡರು-ಚಿದಂಬರಂಗಳು ಮುಂದುವರೆಸಬಯಸುವ "ಉದಾರೀಕರಣ" ನೀತಿಗಳಲ್ಲಿ ದುಡಿಯುವ ಜನರ ಅಗತ್ಯಗಳಿಗೆ, ಹಕ್ಕುಗಳಿಗೆ ಏನೇನೂ ಸ್ಥಾನವಿಲ್ಲ, ಉದಾರತೆಯಂತೂ ಇಲ್ಲವೇ ಇಲ್ಲ ಎಂಬುದು ನಿಜ. ಇಂತಹ ನೀತಿಗಳನ್ನು ಜನಗಳು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ ಎಂಬುದು ಕೂಡಾ ಅಷ್ಟೇ ನಿಜ. ಈ ಪೋಲೀಸ್ ಅಧಿಕಾರಿಗಳು, ಇತರ ಅಧಿಕಾರಶಾಹಿಗಳು ಒಂದು ಪ್ರಜಾಪ್ರಭುತ್ವದಲ್ಲಿ ಜನಗಳ ಸೇವಕರು ಎಂಬುದನ್ನು ನೆನಪಿಸಬೇಕಾದ ರಾಜಕಾರಣಿಗಳೇ ಸ್ವತಃ ಇದೇ ಉದಾರೀಕರಣದ ಹೆಸರಲ್ಲಿ ಕಮೀಶನ್‌ಗಳಿಂದ ತಮ್ಮ ಜೇಬುಗಳನ್ನು ತುಂಬಿಸಿಕೊಂಡು ದೇಶದ ಆರ್ಥಿಕಕ್ಕೆ ಭಾರೀ ವಂಚನೆ ಮಾಡಿದ್ದು ವಿವಿಧ ಹಗರಣಗಳಲ್ಲಿ ಬಯಲಾಗುತ್ತಿದೆ. ಇಂತಹ ರಾಜಕಾರಣಿಗಳು ಸುಲಿಗೆಕೋರ ಮಾಲಕರನ್ನು ಮಾತನಾಡಿಸಲೂ ಭಯಪಟ್ಟರೆ ಅದರಲ್ಲಿ ಆಶ್ಚರ್ಯವೇನಿಲ್ಲ? ಆಳುವ ವರ್ಗಗಳ ರಾಜಕಾರಣಿಗಳು ಹೀಗೆ ಮಾನ ಕಳೆಕೊಳ್ಳುತ್ತಿರುವಾಗ ಇನ್ನು ಮುಂದೆ ತಾವೇ ದೊರೆಗಳು ಎಂದು ಪೋಲೀಸ್ ಅಧಿಕಾರಿಗಳು, ಮತ್ತಿತರ ಅಧಿಕಾರಶಾಹಿಗಳು ಅಹಂಭಾವ ಪಟ್ಟರೆ ಅದರಲ್ಲೂ ಆಶ್ಚರ್ಯವಿಲ್ಲ. ಆದರೆ ಈ ದೇಶವನ್ನು ಕಟ್ಟಿ ಅಭಿವೃದ್ಧಿಪಡಿಸಬೇಕಾದ್ದು ಈ ದೇಶದ ಜನಸಾಮಾನ್ಯರಿಗಾಗಿ, ಅದನ್ನು ಸಾಧಿಸಬೇಕಾದವರೂ ಇದೇ ಜನಸಾಮಾನ್ಯರು. ಲಾಠಿ, ಗುಂಡುಗಳಿಗೆ ಅವರ ಪ್ರಜಾಪ್ರಭುತ್ವ ಹಕ್ಕುಗಳನ್ನು, ಅವರ ಮುನ್ನಡೆಯನ್ನು ತಡೆಯಲು ಸಾಧ್ಯವಿಲ್ಲ ಎಂಬ ಐತಿಹಾಸಿಕ ಸತ್ಯವನ್ನು ಈ ಪೋಲೀಸ್ ಅಧಿಕಾರಿಗಳು, ಇತರ ಅಧಿಕಾರಶಾಹಿಗಳು ಮತ್ತು ಮಾನಕಳೆಕೊಳ್ಳುತ್ತಿರುವ ಆಳುವ ವರ್ಗಗಳ ರಾಜಕಾರಣಿಗಳು ಸ್ವತಃ ಅರಿಯಲು ವಿಫಲರಾದರೆ ಅದನ್ನು ದುಡಿಯುವ ಜನಗಳ ಆಂದೋಲನ ಅವರಿಗೆ ಕಲಿಸಿಕೊಡುತ್ತದೆ ಎಂಬುದಾದರೂ ಇವರು ತಿಳಿಯಬೇಕು.

ಒಂದೂವರೆ ದಶಕದ ಹಿಂದೆ ರೈತರ, ಕಾರ್ಮಿಕರ ರಕ್ತದಿಂದ ಕಳಂಕಿತನಾದ ಗುಂಡೂರಾವ್ ಸರಕಾರದ ಗತಿ ತಮಗೂ ಬರದಂತೆ ಪಟೇಲ್ ಸರಕಾರ ಬಯಸುವುದಾದರೆ ತನ್ನ ನೀತಿ-ನಿಯಮಗಳನ್ನು ಅದು ಈಗಲಾದರೂ ಬದಲಿಸಿಕೊಳ್ಳಬೇಕು.

ಪ್ರಧಾನಿಗಳಿಗೆ ಸಿಐಟಿಯು ಅಧ್ಯಕ್ಷರ ಪತ್ರ

"ಮಧ್ಯಪ್ರವೇಶಿಸಿ, ನ್ಯಾಯ ದೊರಕಿಸಿಕೊಡಿ"

ಹೆಜ್ಜಾಲದಲ್ಲಿ ಫೆಬ್ರವರಿ 3ರಂದು ನಡೆದ ಪೋಲೀಸ್ ಗೋಳೀಬಾರನ್ನು ಸಿಪಿಐ(ಎಂ)ನ ಮುಖಂಡರೂ ಸಿಐಟಿಯುನ ಅಖಿಲ ಭಾರತ ಅಧ್ಯಕ್ಷರೂ ಆದ ಇ.ಬಾಲಾನಂದನ್ ಪ್ರಧಾನಮಂತ್ರಿಗಳಿಗೆ ಬರೆದ ಒಂದು ಪತ್ರದಲ್ಲಿ ಬಲವಾಗಿ ಖಂಡಿಸಿದ್ದಾರೆ.

ಈ ಭೀಕರ ಘಟನೆಯತ್ತ ಪ್ರಧಾನಮಂತ್ರಿಗಳ ಗಮನ ಸೆಳೆಯುತ್ತಾ ಪೋಲೀಸರು ಕಾರ್ಮಿಕ ಮುಖಂಡರ ಭಿನ್ನಹಗಳಿಗೆ ಕಿವಿಗೊಡದೆ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಕಾರ್ಮಿಕರ ಮೇಲೆ ಲಾಠಿ ಪ್ರಹಾರ, ಗೋಳೀಬಾರು ಮಾಡಿದ್ದಾರೆ ಎಂದು ಇ.ಬಾಲಾನಂದನ್ ಖೇದ ವ್ಯಕ್ತಪಡಿಸಿದ್ದಾರೆ.

"ಪೋಲೀಸರು ಸ್ವಲ್ಪ ತಾಳ್ಮೆಯಿಂದ ವರ್ತಿಸಿದ್ದರೆ ಈ ಘಟನೆಯನ್ನು ತಡೆಯಬಹುದಿತ್ತು. ಆದರೆ ಪೋಲೀಸರು ಕಾರ್ಮಿಕರನ್ನು ಹಕ್ಕಿಗಳನ್ನು ಹೊಡೆದು ಹಾಕಿದಂತೆ ಹಾಕಬಹುದು ಎಂದು ಭಾವಿಸಿದಂತಿದೆ. ಕರ್ನಾಟಕ ಸರಕಾರದ ಪ್ರತಿಷ್ಠೆಗೆ ಒಳ್ಳೆಯದಲ್ಲ ಎಂದು ನಾನು ಬೇರೆ ಹೇಳಬೇಕಾಗಿಲ್ಲ" ಎಂದು ಮುಂದುವರೆದು ಪ್ರತಿಭಟಿಸಿರುವ ಇ.ಬಾಲಾನಂದನ್ "ನೀವು ಮಧ್ಯಪ್ರವೇಶಿಸಿ ಕೈಗಾರಿಕಾ ವಿವಾದ ಕೂಡಲೇ ಬಗೆಹರಿಯುವಂತೆ ಮಾಡಬೇಕು, ಬಲಿಯಾದವರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಸಿಗುವಂತೆ ಮಾಡಬೇಕು, ಈ ಗೋಳೀಬಾರಿಗೆ ಕಾರಣರಾದ ತಪ್ಪಿತಸ್ಥ ಪೋಲೀಸ್ ಅಧಿಕಾರಿಗಳನ್ನು ಶಿಕ್ಷಿಸಲು ಕ್ರಮ ಕೈಗೊಳ್ಳಬೇಕು ಎಂದು ನಾನು ಬಯಸುತ್ತೇನೆ" ಎಂದು ಪ್ರಧಾನಿಗಳನ್ನು ಆಗ್ರಹಿಸಿದ್ದಾರೆ.

(ಐಎನ್‌ಎನ್)

ಬಡ ದುಡಿಮೆಗಾರರ ಬದುಕಿನೊಂದಿಗೆ ಚೆಲ್ಲಾಟ

ಪುಟ 1ರಿಂದ

ಮಂತ್ರಿಗಳನ್ನು ಕಾನೂನು ಗಳನ್ನು ಎಗ್ಗಿಲ್ಲದೆ ಉಲ್ಲಂಘಿಸಿ ಮಾಲಕ ನಡೆಸುತ್ತಿರುವ ಶೋಷಣೆಗೆ ಪ್ರತಿಭಟನೆ ವ್ಯಕ್ತಪಡಿಸಲು ಈ ಕಾರ್ಮಿಕರು ಬೀದಿಗಿಳಿ ಯಬೇಕಾಗಿ ಬಂತು. ವೇತನ ಒಪ್ಪಂದದ ಅವಧಿ ಮುಗಿದು ಎರಡು ವರ್ಷಗಳಾದರೂ ಹೊಸ ಒಪ್ಪಂದ ಮಾಡಿಕೊಳ್ಳಲು ನಿರಾಕರಣೆ, ಕಾರ್ಮಿಕರೆಲ್ಲರೂ ಸೇರಿ ಕಟ್ಟಿಕೊಂಡಿರುವ ಸಂಘದೊಡನೆ ಮಾತುಕತೆ ಮಾಡಲು ನಿರಾಕರಣೆ, ಓವರ್‌ಟೈಂ ಭತ್ಯೆ ನೀಡಲು ನಿರಾಕರಣೆ, ವೇತನ ಕಡಿತ ಕಾನೂನು ಬಾಹಿರ ಎಂಬ ಲೇಬರ್ ಕಮೀಶನರ್ ಮಾತಿಗೂ ಮನ್ನಣೆಯಿಲ್ಲ. ನಿರ್ವಾಹವಿಲ್ಲದೆ ಡಿಸೆಂಬರ್ 7ರಿಂದ ಮುಷ್ಕರ ಆರಂಭಿಸಿದ ಕಾರ್ಮಿಕರು ಉಪ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳ ನಿವಾಸಗಳ ಮುಂದೆ ಧರಣೆ - ಹೀಗೆ ಹತ್ತು ಹಲವು ರೀತಿಗಳಲ್ಲಿ ತಾಳ್ಮೆಯಿಂದ ಸಮಸ್ಯೆಯ ನ್ಯಾಯಯುತ ವಾದ ಪರಿಹಾರಕ್ಕೆ ಪ್ರಯತ್ನಿಸಿದರು. ಲಾಭ ದಾಹದ ಮಾಲಕನ ಗೂಂಡಾಗಳ ಬೆದರಿಕೆ ಗಳನ್ನೂ ತಾಳ್ಮೆಯಿಂದ ಎದುರಿಸಿದರು. ಆದರೆ ಪೋಲೀಸ್ ಅಧಿಕಾರಿಗಳೂ, ಮಂತ್ರಿ-ಮಾಗಧರೂ, ಆಳುವ ಪಕ್ಷದ ರಾಜಕಾರಣಿಗಳೂ ಮಾಲಕನ ಲಾಭದಾಹಕ್ಕೆ ಕಡಿವಾಣ ಹಾಕಲು ಅಸಮರ್ಥರು ಎನಿಸಿದಾಗ ತಮ್ಮ ಹೋರಾಟವನ್ನು ತೀವ್ರಗೊಳಿಸಲು ಯತ್ನಿಸಿದರು.

ಇದರ ಒಂದು ಭಾಗವೇ ಫೆಬ್ರವರಿ 3ರ ರಸ್ತೆ ತಡೆ. ಈ ಬಗ್ಗೆ ಸಾಕಷ್ಟು ಮುಂಚಿತವಾಗಿಯೇ ಕಾರ್ಮಿಕ ಸಂಘ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರಚಾರ ನಡೆಸಿ ಜನಗಳ ಬೆಂಬಲ ಪಡೆದಿತ್ತು. ಪೋಲೀಸರಿಗೂ ತಿಳಿಸಲಾಗಿತ್ತು. ಧರಣೆ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್, ವಳ್ಳಿಯಪ್ಪ ಟೆಕ್ಸ್‌ಟೈಲ್ಸ್‌ಕಾರ್ಮಿಕ ಸಂಘದ ಅಧ್ಯಕ್ಷ ರಾಜಣ್ಣ ಹಾಗೂ ವರಲಕ್ಷ್ಮಿಯವರ ನೇತೃತ್ವದಲ್ಲಿ ಶಾಂತಿಯುತವಾಗಿ ನಡೆದಿತ್ತು. ಇನ್ನೇನು ಕಾರ್ಯಕ್ರಮ ಮುಗಿಯುತ್ತದೆ ಎನ್ನುವಷ್ಟರಲ್ಲಿ ಅಗೋ ಬಂದರು ಖಾಕಿ ಜನ - ಲಾಠಿ, ಬಂದೂಕಿನ ಖಾಕಿ ಜನ. ಏನೋ ಯೋಜನೆ ಹಾಕಿಯೇ ಬಂದಂತಿತ್ತು.

ಬಂಧನಕ್ಕೆ ತಾವು ಸಿದ್ಧ ಎಂದು ಕಾರ್ಮಿಕ ಮುಖಂಡರೂ, ಕಾರ್ಮಿಕರೂ ಹೇಳುತ್ತಿದ್ದರೂ ಕೇಳದೆ ಸಿಐಟಿಯುನ ರಾಜ್ಯ ಪ್ರಧಾನ ಕಾರ್ಯದರ್ಶಿಗಳನ್ನು, ಜತೆಗೆ ಇನ್ನೂ ಹಲವರನ್ನು ಪೋಲೀಸ್ ವ್ಯಾನಿಗೆ ಎಳೆದು ಹಾಕಿದರು. ಲಾಠೀ ಪ್ರಹಾರ, ಅಶ್ರುವಾಯು, ಗೋಳೀಬಾರು ಎಲ್ಲವೂ ಕಣ್ಣೆವೆಯಿಕ್ಕು ವಷ್ಟರಲ್ಲಿ ನಡೆದುಹೋಯಿತು. ಓಡುತ್ತಿರುವ ಜನಗಳು, ಅಟ್ಟಿಸಿಕೊಂಡು ಸಿಡಿಯುತ್ತಿದ್ದ ಬಂದೂಕುಗಳು. ಅಶ್ರುವಾಯುವಿನ ಮೋಡ. ಕಾರ್ಮಿಕರು ಧರಣೆ ಕುಳಿತಿದ್ದ ಪೆಂಡಾಲಿಗೆ ಬೆಂಕಿ. ಅರ್ಧ ಕಿಲೋಮೀಟರ್ ದೂರದಲ್ಲಿ ಮೇಲೆ ಹೇಳಿದ ಹೃದಯವಿದ್ರಾವಕ ದೃಶ್ಯಗಳು.

ಮಾಲಕನ ಲಾಭದಾಹಕ್ಕೆ ಶರಣಾದ ಪೋಲೀಸರ ರಕ್ತದಾಹಕ್ಕೆ ಬಲಿಯಾದ ಮೊದಲ ವ್ಯಕ್ತಿ ಸೀತಾ. ವಳ್ಳಿಯಪ್ಪ ಕಾರ್ಖಾನೆಯ ಕಾರ್ಮಿಕ ಪಂಚವರ್ಣಂರ ಪತ್ನಿ. ಆಕೆಯ ತಂದೆ ಕೂಡಾ 15 ವರ್ಷಗಳ ಹಿಂದೆ ಇದೇ ವಳ್ಳಿಯಪ್ಪ ಕಾರ್ಖಾನೆಯ ಕಟ್ಟಡ ಕಟ್ಟುವಾಗ ಬಿದ್ದು ಪ್ರಾಣ ಕಳಕೊಂಡ. 15 ವರ್ಷಗಳ ಹಿಂದೆ 3 ರೂ. ದಿನಗೂಲಿಗೆ ಕೆಲಸ ಮಾಡಲಾರಂಭಿಸಿದ ಪಂಚವರ್ಣಂ ಹಿಂದಿನ ಮುಷ್ಕರದಲ್ಲಿ 15 ದಿನ

→

ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ

ವಿರೋಧಿಗಳ ಪ್ರಶ್ನೆಗಳು - ಮಹಿಳಾ ಚಳುವಳಿಯ ಉತ್ತರಗಳು

ಜನವರಿ ೩೩ರಂದು ಜನವಾದಿ ಮಹಿಳಾ ಸಂಘಟನೆಯು ಬೆಂಗಳೂರು ಜಿಲ್ಲಾ ಸಮಿತಿ ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ ಕುರಿತಂತೆ ಏರ್ಪಡಿಸಿದ್ದ ಚರ್ಚೆಯನ್ನು ಉದ್ಘಾಟಿಸುತ್ತಾ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ ಎಐಡಿಡಬ್ಲ್ಯೂಎನ ಸಹ ಕಾರ್ಯದರ್ಶಿ ಮಥಿಲಿ ಶಿವರಾಮನ್‌ರವರು ೩೩ಆ ಮೀಸಲಾತಿಯ ಬಗ್ಗೆ ವಿರೋಧಿಗಳು ಹಾಗೂ ಮಹಿಳಾ ವಿಮೋಚನೆಯ ಹೋರಾಟದ ಹಿತೈಷಿಗಳೆನಿಸಿಕೊಳ್ಳುವವರು ಕೂಡಾ ಎತ್ತಿರುವ ಕೆಲವು ಪ್ರಶ್ನೆಗಳಿಗೆ ಉತ್ತರ ನೀಡಿದರು. ಅವುಗಳನ್ನು ನಮ್ಮ ಓದುಗರಿಗಾಗಿ ಸಂಗ್ರಹಿಸಿ ಕೊಡಲಾಗಿದೆ.

1. *ಸರಕಾರದ ನೀತಿ ನಿರೂಪಣೆಗಳ ಬಗ್ಗೆ ಚರ್ಚೆಯಾಗುವ ಲೋಕಸಭೆಯಂತಹ ಮಹತ್ವದ ಸ್ಥಾನಕ್ಕೆ ಮಹಿಳೆಯರು ಅರ್ಹರಲ್ಲ. ಕೆಳಹಂತದ ಪಂಚಾಯತ್‌ಗಳವರೆಗೆ ಮಾತ್ರ ಅವರು ಶಕ್ತರು.*

ಎಂದರೆ ಈಗಿರುವ ಎಲ್ಲ ಪುರುಷ ಶಾಸಕರು, ಸಂಸದರು ಸರಕಾರದ ಯೋಜನೆಗಳ ಕುರಿತು ಚೆನ್ನಾಗಿ ಬಲ್ಲವರು ಮತ್ತು ಮಹಿಳೆಯರಿಗೆ ಯೋಚನಾ ಶಕ್ತಿಯೇ ಇಲ್ಲ ಎಂಬ ಅಭಿಪ್ರಾಯವಾಗುತ್ತದೆ. ಆದರೆ ಈಗಾಗಲೇ ದೃಢ ಪಟ್ಟಂತೆ ಹೆಚ್ಚಿನ ಜನ ಪ್ರತಿನಿಧಿಗಳು ಸದನದಲ್ಲಿ ಚರ್ಚೆಗಳಲ್ಲಿ ಪಾಲ್ಗೊಳ್ಳುವುದೇ ಇಲ್ಲ.

ಶಾಲಾ ಕಾಲೇಜುಗಳ ಇತರ ಕ್ಷೇತ್ರಗಳ ಫಲಿತಾಂಶಗಳಲ್ಲಿ ಹೆಣ್ಣು ಮಕ್ಕಳು ಮೇಲುಗೈ ಸಾಧಿಸಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಇಷ್ಟಾಗಿ ಹೆಚ್ಚಿನ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸುವಾಗ ಅರ್ಹತೆ ಅಥವಾ ರಾಷ್ಟ್ರೀಯ ಸಮಸ್ಯೆಗಳ ಕುರಿತ ಮಾಹಿತಿಗಳನ್ನು ಆಧರಿಸುವುದಿಲ್ಲ ಎನ್ನುವುದು ಸರ್ವವೇದ್ಯ ಸತ್ಯ.

2. *ಮೀಸಲಾತಿಯಿಂದಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರಾಕ್ಸಿ ರಾಜಕೀಯ ಜಾಸ್ತಿಯಾಗುತ್ತದೆ. ದೊಡ್ಡ ರಾಜಕಾರಣಿಗಳ ಹೆಂಡತಿಯರು, ಕುಟುಂಬದವರು ರಾಜಕೀಯಕ್ಕೆ ಬರಲಷ್ಟೇ ಆಸ್ಪದವಾಗುತ್ತದೆ.*

ಭಾರತದ ಪರಿಸ್ಥಿತಿಯಲ್ಲಿ ಕುಟುಂಬದ ಸದಸ್ಯರ ಬದುಕನ್ನು, ಅದು ಕ್ರಮಿಸಬೇಕಾದ ಮಾರ್ಗವನ್ನು ತೀರ್ಮಾನಿಸುವವರು ಕುಟುಂಬದ ಯಜಮಾನರೇ ಆಗಿರುತ್ತಾರೆ. ಈಗಾಗಲೇ ತಂದೆ, ಮಗ, ಮೊಮ್ಮಗ, ಅಳಿಯ ಹೀಗೆ ದೊಡ್ಡ ರಾಜಕಾರಣಿಗಳ ಕುಟುಂಬದ ಪುರುಷರೆಲ್ಲರು ರಾಜಕೀಯದಲ್ಲಿರುವುದು ಸಾಮಾನ್ಯವಾದ ಸಂಗತಿಯಾಗಿದೆ. ಸಾಮಾನ್ಯವಾಗಿ ಎಲ್ಲ ವಿಧಾನಸಭೆಗಳೂ 'ಬೇಟಾ ಬ್ರಿಗೇಡ್'ಗಳನ್ನು ಹೊಂದಿದವುಗಳೇ ಆಗಿವೆ. ಪರಂಪರಾನುಗತ ಅಧಿಕಾರ ಸೂತ್ರಕ್ಕೆ ಪ್ರೋತ್ಸಾಹವನ್ನು ಎಲ್ಲ ಬಂಡವಾಳಶಾಹಿ ಪಕ್ಷಗಳೂ ನೀಡುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಆದರೆ ಅದರಲ್ಲೂ ಹಲವರು ತಮ್ಮ ವೈಯಕ್ತಿಕ ಅರ್ಹತೆಗಳನ್ನೂ ದೃಢಪಡಿಸಿದವರಿಲ್ಲವೆಂದಲ್ಲ. ಹಾಗೆಯೇ ಮಹಿಳೆಯರೂ ಕೂಡ ಕುಟುಂಬದ ವರ್ಚಸ್ಸಿನಿಂದ ರಾಜಕೀಯಕೆ ಬರಬಹುದು. ನಂತರ ಅರ್ಹತೆಯನ್ನು ಬೆಳೆಸಿಕೊಳ್ಳಬಹುದು. ನಮ್ಮ ದೇಶದ ಸುತ್ತ ಇರುವ ಹೊರದೇಶಗಳಲ್ಲಿರುವ ಎಲ್ಲ ಮಹಿಳಾ ಪ್ರಧಾನಿಗಳು, ಅಧ್ಯಕ್ಷರೂ ಹೀಗೆ ಕುಟುಂಬದ ವರ್ಚಸ್ಸಿನಿಂದ ಬಂದವರೇ. ರಾಜಕೀಯ ಅಧಿಕಾರ ಕುಟುಂಬದ ಪರಂಪರಾನುಗತ ಹಕ್ಕಾಗುವುದರ ವಿರುದ್ಧ ಗಟ್ಟಿಯಾಗಿ ಮಾತನಾಡುವ ಸಾರ್ವಜನಿಕ ಅಭಿಪ್ರಾಯ ಮಾತ್ರವೇ ಇದನ್ನು ಬದಲಿಸಬಲ್ಲದು. ಇಷ್ಟಾಗಿಯೂ ಈ ಪ್ರಶ್ನೆ ಮಹಿಳೆಯರ ಸಂದರ್ಭಗಳಲ್ಲಿ ಮಾತ್ರ ವ್ಯಕ್ತವಾಗುತ್ತಿದೆ ಯಾಕೆ?

3. *ಮಹಿಳೆಯಗೆ ಮೀಸಲಾತಿ ಎಂದರೆ ಮಹಿಳೆಯರು ಮಹಿಳೆಯರಿಗೆ ಪ್ರತಿಸ್ಪರ್ಧಿಗಳಾಗಿ ಸೆಣಸಬೇಕಾಗುತ್ತದೆ. ಇದು ಸೋದರಿತ್ವವನ್ನು ಕಡಿಮೆ ಮಾಡಿ, ಮಹಿಳೆಯರಲ್ಲಿ ಐಕ್ಯತೆಯನ್ನು ಕಮ್ಮಿ ಮಾಡಿ ಪ್ರತಿಕೂಲ ವಾತಾವರಣವನ್ನು ನಿರ್ಮಾಣ ಮಾಡುತ್ತದೆ*

ಪುರುಷರು ಪುರುಷರ ಪ್ರತಿಸ್ಪರ್ಧಿಗಳಾಗುವಾಗ ಇಂತಹ ಸಮಸ್ಯೆಗಳು ಎದುರಾಗುವುದಿಲ್ಲವೇ? ಮತ್ತು ಸಾಮಾನ್ಯ ಕ್ಷೇತ್ರಗಳಲ್ಲಿ ಪುರುಷ ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸುವಾಗ ಮಹಿಳಾ ಅಭ್ಯರ್ಥಿಗಳು ಹಲವು ರೀತಿಯ ಚಾರಿತ್ರ್ಯವಧೆ ಮಾಡುವಂತಹ ಟೀಕೆಗಳನ್ನು ಎದುರಿಸಬೇಕಾಗುತ್ತದೆ. ಇದು ಅವರನ್ನು ಚುನಾವಣಾ ಕಣದಿಂದ ಹಿಂಜರಿಯುವಂತೆ ಮಾಡುತ್ತದೆ, ಧೃತಿಗೆಡಿಸುತ್ತದೆ. ಎರಡನೆಯದಾಗಿ ಮಹಿಳೆ ಎಂದಾಕ್ಷಣ ಸೋದರತ್ವ ಭಾವನೆಯೊಂದೇ ಇರಬೇಕು ಎನ್ನುವುದೂ ಸರಿಯಲ್ಲ. ಮಹಿಳೆಯರಾದರೂ ಕೂಡ ಅವರು ಪ್ರತಿನಿಧಿಸುವ ಪಕ್ಷಗಳ ಸಿದ್ಧಾಂತ ತತ್ವಗಳನ್ನಾಧರಿಸಿಯೇ ಚುನಾವಣೆಯನ್ನು ಎದುರಿಸುತ್ತಾರೆ. ಉದಾಹರಣೆಗೆ ಹೊಸ ಆರ್ಥಿಕ ನೀತಿಗಳನ್ನು ಕುರಿತಂತೆ ವಿವಿಧ ಪಕ್ಷಗಳ ನಿಲುವು.

4. *ಮೀಸಲಾತಿ ಶ್ರೀಮಂತ ವರ್ಗದ ಮಹಿಳೆಯರಿಗೆ ಮಾತ್ರ ಶಾಸನಸಭೆಗಳಿಗೆ ಪ್ರವೇಶದ ಅವಕಾಶ ನೀಡುತ್ತದೆ.*

ವರ್ಗ ಆಧಾರಿತ ಅಸಮಾನತೆ ಪುರುಷ ಮಹಿಳೆ ಇಬ್ಬರಿಗೂ ಅನ್ವಯಿಸುತ್ತದೆ. ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ನಿಲ್ಲಿಸಲು ಅವರ ಶ್ರೀಮಂತಿಕೆಯನ್ನು ಆಧರಿಸುವುದಾದರೆ ಅದು ಪುರುಷ, ಮಹಿಳೆ ಇಬ್ಬರಿಗೂ ಅನ್ವಯಿಸುತ್ತದೆ. ಪ್ರಸಕ್ತ ಇರುವ ಜಾತಿ, ಕೋಮುಗಳ ಆಧಾರದ ಚುನಾವಣಾ ಸಂದರ್ಭದಲ್ಲಿ ಎಡ ಪಕ್ಷಗಳನ್ನು ಹೊರತುಪಡಿಸಿ ಬೇರೆ ಪಕ್ಷಗಳು ಅಭ್ಯರ್ಥಿಗಳನ್ನು ಆರಿಸುವುದು ಜಾತಿಯ ಮೇಲೆಯೇ. ಅಂತೆಯೇ ಮತದಾರರೂ ಕೂಡ ಹಾಗೆಯೇ ಇದ್ದಾರೆ. ಇಂತಹ ತಪ್ಪು ಅಭಿಪ್ರಾಯಗಳನ್ನು ಹರಡುವ ಶಕ್ತಿಗಳು ಹೇಳುವಂತೆ ಮಹಿಳಾ ಅಭ್ಯರ್ಥಿಗಳಿಗೆ ಕೊರತೆ ಏನೂ ಇಲ್ಲ. ಯಾವುದೇ ಚಳುವಳಿಯಲ್ಲಿ ಪಾಲ್ಗೊಳ್ಳುವವರಿಗೆ ಸಹಜವಾಗಿಯೇ ಶಕ್ತ, ಸಮರ್ಥ, ಅರ್ಹ ಮಹಿಳಾ ಅಭ್ಯರ್ಥಿಗಳು ಎಲ್ಲಾ ಜಾತಿ, ವರ್ಗಗಳಲ್ಲಿಯೂ ಗೋಚರಿಸುತ್ತಾರೆ. ಇಲ್ಲಿರುವ ಪ್ರಶ್ನೆ ಆ ಗುಂಪಿನ ಪುರುಷರಲ್ಲಿ ಈ ಅರ್ಹತೆಯನ್ನು ಗುರುತಿಸುವ ಮನಃಸ್ಥಿತಿ ಇದೆಯೇ? ಹಲವು ಸಂದರ್ಭಗಳಲ್ಲಿ ಜಾತೀಯ ಭಾವನೆ ಕೆಟ್ಟ ರೀತಿಯ ಪುರುಷ ಪ್ರಾಧಾನ್ಯತೆಗೂ ಅವಕಾಶ ಮಾಡಿಕೊಡುತ್ತದೆ.

5. *ಮಹಿಳೆಯರು ರಾಜಕಾರಣದಲ್ಲಿ ಸಕ್ರಿಯವಾಗಿ ಪಾಲ್ಗೊಂಡರೆ ಕೌಟುಂಬಿಕ ಕ್ಷೇತ್ರ ಸೊರಗುತ್ತದೆ.*

ಮಹಿಳಾ ಚಳುವಳಿಯ ಅನುಭವ ಮತ್ತು ಅಭಿಪ್ರಾಯದಂತೆ ಎಲ್ಲಿ ಪುರುಷ ಮಹಿಳೆಯರ ಮಧ್ಯೆ ಸಮಾನತೆಯ ಭಾವನೆ ಇರುತ್ತದೋ, ಪುರುಷ ಮತ್ತು ಮಹಿಳೆಯರಿಬ್ಬರೂ ಕೌಟಂಬಿಕ ಜವಾಬ್ದಾರಿಗಳನ್ನು ಸಮನಾಗಿ ಹಂಚಿಕೊಳ್ಳುತ್ತಾರೋ ಆ ಕುಟುಂಬ ಸುಖೀ ಕುಟುಂಬವಾಗಿರುತ್ತದೆ. ಕುಟುಂಬದ ಜವಾಬ್ದಾರಿ ಮಹಿಳೆಯದು ಮಾತ್ರ ಎಂಬ ಭಾವನೆ ಖಂಡಿತ ಸರಿಯಲ್ಲ. ಇಂದಿನ ಆರ್ಥಿಕ ದುಃಸ್ಥಿತಿಯ ಕಾರಣದಿಂದಾಗಿ ಮಹಿಳೆಯರು ಅನಿವಾರ್ಯವಾಗಿ ಔದ್ಯೋಗಿಕ ಕ್ಷೇತ್ರಕೆ ಕಾಲಿಡುತ್ತಿದ್ದಾರೆ. ಹದಗೆಟ್ಟ ಪರಿಸ್ಥಿತಿಯಿಂದಾಗಿ ಪುರುಷರು ಊರಿಂದೂರಿಗೆ ತೆರಳುತ್ತಿದ್ದು ಮಹಿಳೆಯರೇ ಇಡೀ ಕುಟುಂಬದ ನಿರ್ವಹಣೆಯ ಜವಾಬ್ದಾರಿ ಹೊತ್ತಿರುವುದೂ ವಾಸ್ತವವಾಗಿದೆ. ಶಿಶುರಕ್ಷಣೆಯಂತಹ ಸೌಲಭ್ಯಗಳನ್ನು ಸರಕಾರ ವಹಿಸಿಕೊಳ್ಳಬೇಕಾಗುತ್ತದೆ. ಕುಟುಂಬದ ಜವಾಬ್ದಾರಿ ಎಂಬ ನೆವದಲ್ಲಿ ಮಹಿಳೆಯರನ್ನು ನಾಗರೀಕ ಹಕು ಗಳಿಂದ ವಂಚಿತಳನ್ನಾಗಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ.

6. *ಆಕಸ್ಮಾತ್ ಹೆಚ್ಚಿನ ಸಂಖ್ಯೆಯ - ಬಲ ಪಂಥೀಯ, ಕೋಮುವಾದಿ ಮಹಿಳೆಯರು ಆಯೆ ಗೊಂಡರೆ - ಮಹಿಳಾ ಚಳುವಳಿಗೆ ಧಕೆ ಉಂಟುಮಾಡುತ್ತದೆ.*

ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಂಸತ್ತಿಗೆ ಆಯೆ ಗೊಂಡರೆಂದ ಮಾತ್ರಕೆ ಮಹಿಳೆಯರ ಸಮಸ್ಯೆಗಳೆಲ್ಲ ಪರಿಹಾರವಾಗುವುದೆಂಬ ಭ್ರಮೆ ಮಹಿಳಾ ಚಳುವಳಿಗೆ ಇಲ್ಲ. ಪುರುಷ ಸಂಸದರಂತೆಯೇ, ಮಹಿಳಾ ಸಂಸದರೂ ಕೂಡ ಪಕ್ಷದ ತತ್ವಗಳ ಆಧಾರದಲ್ಲಿ ಬೇರ್ಪಡುತ್ತಾರೆ. ಯಾವುದೇ ಚಳುವಳಿ ಬೆಳೆಯಲು ಸಿಗುವ ಸಹಾಯ ಸಿದ್ಧಾಂತವನ್ನು ಆಧರಿಸುತ್ತದೆಯೇ ಹೊರತು ದೈಹಿಕ ರಚನೆಯನ್ನಲ್ಲ. ಯಾವುದೇ ಸಮಸ್ಯೆಗೆ ಸಂಬಂಧಿಸಿದಂತೆ ಪುರುಷರಾಗಲೀ/ಮಹಿಳೆಯರಾಗಲೀ ಅವರವರ ಪಕ್ಷದ ಸೈದ್ಧಾಂತಿಕ ನೆಲೆಯಲ್ಲಿ ಪ್ರತಿಪಾದಿಸುತ್ತಾರೆಯೇ ಹೊರತು ಲಿಂಗದ ಆಧಾರದಲ್ಲಲ್ಲ. ಮಹಿಳೆಯರಿಗೆ ಮೀಸಲಾತಿ ಎಂದರೆ ಶಕ್ತಿಗಳ ಬಲಾಬಲವನ್ನು ನಿರ್ಧರಿಸುವುದಲ್ಲ. ಬದಲಿಗೆ 50 ವರ್ಷಗಳಿಂದ ನಮ್ಮ ದೇಶದ ರಾಜಕೀಯ ಕ್ಷೇತ್ರದಲ್ಲಿ ನಿರಾಕರಿಸಲಾದ ಅವಕಾಶವನ್ನು ಕಲ್ಪಿಸುವುದು. ಮಹಿಳೆಯರನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಸಾರ್ವಜನಿಕ ಕ್ಷೇತ್ರಕೆ ತರುವುದೆಂದರೆ ಅವರ ಬಗ್ಗೆ ಸಮಾಜದಲ್ಲಿರುವ ಅಭಿಪ್ರಾಯಗಳ ಬದಲಾವಣೆಗೆ ಮಾರ್ಗ ಕಲ್ಪಿಸಿದಂತೆ.

7. *ಮೀಸಲಾತಿಗೆ ಬದಲು ಎಲ್ಲಾ ರಾಜಕೀಯ ಪಕ್ಷಗಳೂ 1/3 ಭಾಗದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಕೊಡಬೇಕೆಂದು ಕಡ್ಡಾಯ ಮಾಡುವುದು*

ಹೆಚ್ಚಿನ ರಾಜಕೀಯ ಪಕ್ಷಗಳು ಎಲ್ಲಾ ಸ್ಥಾನಗಳಿಗೂ ಸ್ಪರ್ಧಿಸುವುದಿಲ್ಲ. ಏಕ ಪಕ್ಷದ ಸರಕಾರದ ಚುನಾವಣೆಯ ಪರಿಸ್ಥಿತಿ ದೇಶದಲ್ಲಿಲ್ಲ. ಸಂಯುಕ್ತ ರಂಗಗಳಾಗಿ ಸ್ಪರ್ಧಿಸುವ ಸಂದರ್ಭದಲ್ಲಿ ಈ ರೀತಿಯ ಕಡ್ಡಾಯಕೆ ಖಂಡಿತ ಮಾನ್ಯತೆ ದೊರೆಯವುದಿಲ್ಲ. ಬದಲಾವಣೆಯತ್ತ ಹೆಜ್ಜೆ ಹಾಕುವಂತೆ ಸಮಾಜವನ್ನು ಪ್ರೇರೇಪಿಸುವುದು ಇಂದಿನ ತುರ್ತಿನ ಅಗತ್ಯ. ಮೀಸಲು ಸ್ಥಾನ ಎಂಬ ಕಲ್ಪನೆ ಮಹಿಳಾ ಅಭ್ಯರ್ಥಿಗಳನ್ನು ನಿಲ್ಲಿಸುವ ಅಭಿಪ್ರಾಯವೇ ಇಲ್ಲದ ಪಕ್ಷಗಳೂ ನಿಲ್ಲಿಸಲೇ ಬೇಕಾದ ಪರಿಸ್ಥಿತಿಯನ್ನು ತಂದಿಡುತ್ತದೆ.

8. *ಲಾಟರಿ ಎತ್ತುವ ಮೂಲಕ ಮಹಿಳಾ ಮೀಸಲಾತಿ ಕ್ಷೇತ್ರವನ್ನು ನಿರ್ಧರಿಸುವುದು ಶಾಸಕರು/ ಸಂಸದರಿಗೆ ಕ್ಷೇತ್ರದ ಬಗ್ಗೆ ಕಾಳಜಿಯನ್ನು ಕಡಿಮೆ ಮಾಡುತ್ತದೆ.*

ಪಕ್ಷ ರಾಜಕಾರಣ ಮಾನ್ಯತೆ ಪಡೆದ ನಮ್ಮ ದೇಶದಲ್ಲಿ ವ್ಯಕ್ತಿ ಮುಖ್ಯವಾಗುವುದಿಲ್ಲ. ಜನರ ಕುರಿತು ಪಕ್ಷದ ಬದ್ಧತೆ ಮುಖ್ಯವಾಗಬೇಕೇ ಹೊರತು ವ್ಯಕ್ತಿಯಲ್ಲ. ಕೆಲವು ಸಂದರ್ಭಗಳಲ್ಲಿ ವ್ಯಕ್ತಿಗಳು ತಮ್ಮ ವರ್ಚಸ್ಸಿನಿಂದ ಪಕ್ಷದ ಬಗ್ಗೆ ಜನರ ಅಭಿಪ್ರಾಯವನ್ನು ಕೂಡ ಬದಲಿಸಲು ಶಕ್ತರಾಗಬಹುದು. ಮೊದಲಿಗೆ ಎಸ್.ಸಿ./ಎಸ್.ಟಿ. ಮೀಸಲಾತಿಯಲ್ಲಿ ಕೂಡ ಇಂತಹುದೇ ಇದ್ದದ್ದು. ಕೆಲವು ಕಾಲದ ಪ್ರಯೋಗದ ನಂತರ ಅವಶ್ಯಕತೆ ಬಂದಲ್ಲಿ ಬದಲಾವಣೆ ತರಬಹುದು.

9. *ಇತರ ಹಿಂದುಳಿದ ವರ್ಗಗಳಿಗೆ ಕೂಡ ಮೀಸಲಾತಿ ಅವಕಾಶ ಕಲ್ಪಿಸಬೇಕು.*

ಸಂವಿಧಾನದಲ್ಲಿ ಅವಕಾಶವಿರುವ ಓಬಿಸಿ ಪ್ರಶ್ನೆಯನ್ನು ಈ ಹಂತದಲ್ಲಿ ತರುವುದು ಸರ್ವಥಾ ಸಾಧುವಲ್ಲ. ಈಗ ನಮ್ಮ ಮುಂದಿರುವಂತೆಯೇ ಮಸೂದೆ ಅಂಗೀಕಾರವಾಗಬೇಕು. ನಂತರದ ಹಂತದಲ್ಲಿ ಮಾರ್ಪಾಟುಗಳನ್ನು ಮಾಡಲು ಪ್ರಯತ್ನ ನಡೆಯಬೇಕು.

ಸಸ್ಪೆಂಡ್ ಆಗಿದ್ದರು. ಈಗ ಮುದ್ದಿನ ಮಡದಿಯನ್ನು ತನ್ನಿಂದ ಕಿತ್ತುಕೊಂಡ ಮಾಲಕನ ಲಾಭದಾಹವನ್ನು ಅಡಗಿಸಲು ಕಟಿಬದ್ಧರಾಗಿದ್ದಾರೆ.

ಪ್ರತಿಭಟನೆಯ ಮಹಾಪೂರ

ಪಂಚವರ್ಣಂ ಅಷ್ಟೇ ಅಲ್ಲ, ವಳ್ಳಿಯಪ್ಪ ಕಾರ್ಖಾನೆಯ ಕಾರ್ಮಿಕರಷ್ಟೇ ಅಲ್ಲ, ಇಡೀ ಬೆಂಗಳೂರಿನ ಕಾರ್ಮಿಕ ವರ್ಗಕ್ಕೆ ಈ ಸುದ್ದಿ ಕೇಳಿ ರೋಸಿ ಹೋಯಿತು. ಗುಂಡಿನೇಟಿನಿಂದ ಕಾರ್ಮಿಕರು ಸಂಘ ಕಟ್ಟದಂತೆ ಮಾಡಬಹುದೆಂಬ ಮಾಲಕನ, ಅವನೊಂದಿಗೆ ಶಾಮೀಲಾದ ಪೋಲೀಸ್ ಅಧಿಕಾರಿಗಳ ಲೆಕ್ಕಾಚಾರ ಹಳಸಲು ಲೆಕ್ಕಾಚಾರ, ಮೂರ್ಖರ ಲೆಕ್ಕಾಚಾರ ಎಂದು ಫೆಬ್ರವರಿ 4ರಂದು ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆ ಸಾರಿತು. ಫೆಬ್ರವರಿ3ರ ಗೋಳೀಬಾರು ಬೆಂಕಿ ಹಚ್ಚುವುದರಲ್ಲಿ ತೊಡಗಿದ್ದ ಕಾರ್ಮಿಕರನ್ನು ಚದುರಿಸಲು ಮಾಡಬೇಕಾಯಿತು ಎಂದ ಎಂದಿನ ಪೋಲೀಸರ ಸಬೂಬನ್ನು ಕಾರ್ಮಿಕರು ನಂಬಿರಲಿಲ್ಲ, ಜನರೂ ನಂಬಿರಲಿಲ್ಲ, ಏಕೆಂದರೆ ಕಾಂಗ್ರೆಸ್ ಜನತಾದಳ ಮುಖಂಡರ ಹೇಳಿಕೆ, ಪ್ರತಿ ಹೇಳಿಕೆಗಳಲ್ಲಿ ಬೆಂಕಿ ಹಚ್ಚಿದ್ದು ರಸ್ತೆ ತಡೆ ಕಾರ್ಯಕ್ರಮ ನಡೆಸುತ್ತಿದ್ದ ಕಾರ್ಮಿಕರಂತೂ ಅಲ್ಲ ಎಂದು ಆಗಲೇ ಸ್ಪಷ್ಟವಾಗಿತ್ತು.

"ವಳ್ಳಿಯಪ್ಪನನ್ನು ಬಂಧಿಸಿ" "ಎಸ್.ಪಿ. ನಾರಾಯಣಗೌಡರನ್ನು ವಜಾ ಮಾಡಿ" "ಕಾರ್ಮಿಕರ ಬೇಡಿಕೆಗಳಿಗೆ ಗುಂಡಿನೇಟಿನಿಂದ ಉತ್ತರ ಕೊಡುವ ಕಾರ್ಮಿಕ-ವಿರೋಧಿ ನೀತಿಗೆ ಧಿಕ್ಕಾರ" "ಮಾಲಕರ ಕಾನೂನು ಬಾಹಿರ ಕೃತ್ಯಗಳನ್ನು ನಿಲ್ಲಿಸಲಾರದ ಸರಕಾರದ ನೀತಿಗಳಿಗೆ ಧಿಕ್ಕಾರ" "ಕಾಂಗ್ರೆಸ್‌ನ ರಾಜಕೀಯಕ್ಕೆ ಧಿಕ್ಕಾರ" ಇತ್ಯಾದಿ ಘೋಷಣೆಗಳನ್ನು ಕೂಗುತ್ತಾ ಐದು ಸಾವಿರದಷ್ಟಿದ್ದ ಕಾರ್ಮಿಕರು, ಅವರ ಜತೆಗೂಡಿದ ನೌಕರರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಮೈಸೂರು ಬ್ಯಾಂಕ್ ಸರ್ಕಲ್‌ನಿಂದ ಆರಂಭಿಸಿದ ಬೃಹತ್ ಮೆರವಣಿಗೆ ಬೆಂಗಳೂರಿನ ಕಾರ್ಮಿಕ ವರ್ಗದ ಸಾತ್ವಿಕ ಸಿಟ್ಟಿನ ಪ್ರತೀಕದಂತಿತ್ತು. ರಾಜ್ಯದ ಪೋಲೀಸ್ ಮಹಾ ನಿರ್ದೇಶಕರ ಕಚೇರಿಯವರೆಗೆ ಸಾಗಿತು ಮೆರವಣಿಗೆ. ಅಲ್ಲಿಯೇ ರಸ್ತೆಯ ಮೇಲೆಯೇ ಧರಣಿ ಕೂತರು ಪ್ರದರ್ಶನಕಾರರು. ಪೋಲೀಸ್ ಮಹಾ ನಿರ್ದೇಶಕರಿಗೆ ಅವರ ಪೋಲೀಸು ವಿಭಾಗ ಇರಬೇಕಾದ್ದು ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ, ಜನಪ್ರತಿನಿಧಿಗಳು ರೂಪಿಸಿದ ಕಾನೂನಿನ ಜಾರಿಗಾಗಿಯೇ ಹೊರತು ಬಂಡವಾಳಶಾಹಿಗಳ, ಭೂ ಮಾಲಕರ ದುರಾಸೆಗಳ ರಕ್ಷಣೆಗಾಗಿ ಅಲ್ಲ, ಅವುಗಳ ಈಡೇರಿಕೆಗಾಗಿ ಅಲ್ಲ ಎಂಬುದನ್ನು ನೆನಪಿಸಿದರು.

ಧರಣಿಯನ್ನುದ್ದೇಶಿಸಿ ಹಿರಿಯ ಕಾರ್ಮಿಕ ಮುಖಂಡ ಎಸ್. ಸೂರ್ಯನಾರಾಯಣರಾವ್, ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಹಾಗೂ 'ಐಕ್ಯರಂಗ'ದ ಸಂಪಾದಕರಾದ ಪಿ.ರಾಮಚಂದ್ರರಾವ್, ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಹಾಗೂ ಕಾರ್ಮಿಕ ಮುಖಂಡ ಆರ್.ಶ್ರೀನಿವಾಸ್, ವಳ್ಳಿಯಪ್ಪ ಕಾರ್ಮಿಕ ಸಂಘದ ಅಧ್ಯಕ್ಷ ರಾಜಣ್ಣ, ಸಿಐಟಿಯುನ ಜಿಲ್ಲಾಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ವಿಮಲಾ ಹಾಗೂ ಡಿವೈಎಫ್‌ಐನ ರಾಜ್ಯ ಅಧ್ಯಕ್ಷ ಗುರುಶಾಂತ್ ಮಾತನಾಡಿದರು. ಕಳೆದ 16 ವರ್ಷಗಳಲ್ಲಿ ಗುಂಡಿನೇಟಿನಿಂದ ಕಾರ್ಮಿಕರನ್ನು ಕೊಂದ ಘಟನೆ ರಾಜ್ಯದಲ್ಲಿ ನಡೆದಿರಲಿಲ್ಲ. ಆ ಗುಂಡೂರಾಯರ ಸರಕಾರದ ಗತಿಯೇ ಈ ಪಟೇಲರ ಸರಕಾರದ್ದು ಆಗಬಾರದೆಂದಿದ್ದರೆ ಜನತಾದಳದ ಮುಖಂಡರು ತಮ್ಮ ಜವಾಬ್ದಾರಿಗಳ, ನಿಲುವುಗಳ ವಿಮರ್ಶೆ ಮಾಡಿಕೊಳ್ಳಬೇಕು, ಕಾಂಗ್ರೆಸ್ ದಾರಿ ಹಿಡಿಯಬಾರದು, ತಮ್ಮನ್ನು ರಾಜ್ಯದಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ತಂದ ಕಾರ್ಮಿಕರನ್ನು, ಇತರ ದುಡಿಮೆಗಾರರನ್ನು, ಅವರ ರಾಜಕೀಯ ಪಕ್ಷವನ್ನು ಉಪೇಕ್ಷಿಸುವ, ಧಿಕ್ಕರಿಸುವ ನಿಲುವಿನಿಂದ ಕೇಡು ತಂದುಕೊಳ್ಳಬೇಡಿ ಎಂದು ಎಚ್ಚರಿಸಿದರು. ನಾರಾಯಣಗೌಡರು, ಬರ್ಮನ್‌ರಂತಹ ಪೋಲೀಸ್ ಅಧಿಕಾರಿಗಳು ಪ್ರಜಾಪ್ರಭುತ್ವದಲ್ಲಿ ತಮ್ಮ ಕರ್ತವ್ಯಗಳನ್ನು ಅರಿತು, ತಾವು ಜನಗಳ ಸೇವಕರು, ವಳ್ಳಿಯಪ್ಪಗಳ ಅಥವಾ ಆಳುವ ವರ್ಗಗಳ ರಾಜಕಾರಣಿಗಳ ಸೇವಕರಲ್ಲ ಎಂಬುದನ್ನೂ ಅರಿಯಬೇಕು ಎಂದು ಎಚ್ಚರಿಸಿದರು. ವೀರಪ್ಪನ್‌ಗಳನ್ನು ಹಿಡಯಲಾಗದೆ ಬಡ ಕಾರ್ಮಿಕರ ಮೇಲೆ ಗುಂಡು ಹಾರಿಸುವ ಪೋಲೀಸರದ್ದು ಹೇಡಿತನದ ಕೆಲಸ ಎಂದು ನೆನಪಿಸಿದರು.

ಇದಕ್ಕೆ ಮುಂಚೆ ಸಿಪಿಐ(ಎಂ) ರಾಜ್ಯ ಮುಖಂಡರ ನಿಯೋಗವೊಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಕಾರ್ಮಿಕರ ಸಾವಿಗೆ ಕಾರಣವಾದ ಗೋಳೀಬಾರು ನಡೆಸಿದ ಬೆಂಗಳೂರು ಗ್ರಾಮಾಂತರ ಪೋಲೀಸ್ ಸೂಪರಿಟೆಂಡೆಂಟ್‌ರನ್ನು ಮತ್ತು ಇತರ ಇಬ್ಬರು ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು, ಗೋಳೀಬಾರಿನ ನ್ಯಾಯಾಂಗ ತನಿಖೆ ನಡೆಸಬೇಕು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳೂ ಆದ ವಿಜೆಕೆ ನಾಯರ್‌ರವರನ್ನು ಮತ್ತು ಇತರ 16 ಬಂಧಿತರನ್ನು ತಕ್ಷಣ ಬಿಡುಗಡೆ ಮಾಡಬೇಕು ಹಾಗೂ ಕಾರ್ಮಿಕರನ್ನು ಶೋಷಿಸುತ್ತಿರುವ ಮಾಲಕರ ಮೇಲೆ ಕ್ರಮ ಕೈಗೊಳ್ಳಬೇಕು, ಮೃತಪಟ್ಟವರ ಕುಟುಂಬಗಳಿಗೆ ತಲಾ ಐದು ಲಕ್ಷ ರೂ. ಹಾಗೂ ಗಾಯಗೊಂಡವರಿಗೆ ತಲಾ ಒಂದು ಲಕ್ಷ ರೂ. ಪರಿಹಾರ ಧನ ನೀಡಬೇಕು ಎಂದು ಒತ್ತಾಯಿಸಿತು.

ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆಗೆ ಆಜ್ಞೆ ನೀಡಿದ್ದಾರೆ, ಮೃತರ ಕುಟುಂಬಗಳಿಗೆ 1 ಲಕ್ಷ ರೂ. ಹಾಗೂ ಗಾಯಗೊಂಡವರ ಕುಟುಂಬಗಳಿಗೆ ತಲಾ 10 ಸಾವಿರ ರೂ. ಪರಿಹಾರ ಧನ ಘೋಷಿಸಿದ್ದಾರೆ. ಆದರೆ ವಿಜೆಕೆ ನಾಯರ್ ಮತ್ತಿತರ ಬಂಧಿತರ ಬಿಡುಗಡೆಯಾಗಿಲ್ಲ, ಪೋಲೀಸ್ ಅಧಿಕಾರಿಗಳ ವರ್ಗಾವಣೆಯಾಗಿದೆಯಷ್ಟೆ.

ಫೆಬ್ರವರಿ 11ರಂದು ರಾಜ್ಯಾದ್ಯಂತ ಪ್ರತಿಭಟನಾ ದಿನ

ಫೆಬ್ರವರಿ ೫ ಹಾಗೂ ೬ರಂದು ಸಭೆ ಸೇರಿದ ಸಿಪಿಐ(ಎಂ) ರಾಜ್ಯಸಮಿತಿ ಈ ಗೋಳೀಬಾರನ್ನು ಹಾಗೂ ಕಾರ್ಮಿಕರು, ರೈತರು, ಕೃಷಿ ಕೂಲಿಕಾರರ ಹೋರಾಟಗಳಲ್ಲಿ ಪೋಲೀಸರ ದಮನ ಪ್ರವೃತ್ತಿಯನ್ನು ಬಲವಾಗಿ ಖಂಡಿಸಿ ಮೇಲೆ ಹೇಳಿದ ಬೇಡಿಕೆಗಳನ್ನು ಆಗ್ರಹಿಸಿ ವಿಧಾನಸಭೆಯ ಅಧಿವೇಶನ ಆರಂಭವಾಗುವ ಫೆಬ್ರವರಿ ೧೧ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಿದೆ.



ಮಹಾರಾಷ್ಟ್ರದಲ್ಲೂ ಗೋಳೀಬಾರು: ಪೋಲೀಸರಿಂದಲೇ ಆದಿವಾಸಿಗಳ ಕೊಲೆ

ಜನವರಿ 26 ರಂದು ದೇಶ ಪ್ರಜಾಪ್ರಭುತ್ವ ದಿನಾಚರಣೆ ನಡೆಸುತ್ತಿದ್ದಾಗ ಮಹಾರಾಷ್ಟ್ರದ ಶಿವಸೇನೆ-ಬಿಜೆಪಿ ಸರಕಾರದ ಪೋಲೀಸರು ಪ್ರಜೆಗಳ ಅದರಲ್ಲೂ ಸ್ವಾತಂತ್ರ್ಯದ, ಪ್ರಜಾ ಪ್ರಭುತ್ವದ ಫಲಗಳಿಂದ ವಂಚಿತರಾಗಿರುವ ಜನಗಳ ಮೇಲೆ ಗೋಳೀಬಾರು ನಡೆಸಿದರು. ಅವಕ್ಕೆ ಬಿಜೆಪಿ ಕಾರ್ಯಕರ್ತರ ಸಕ್ರಿಯ ಬೆಂಬಲ! ಇವರೆಲ್ಲಾ ಒಟ್ಟಾಗಿ ಇಬ್ಬರು ಆದಿವಾಸಿಗಳ ಪ್ರಾಣಗಳ ಬಲಿಯನ್ನು ಪಡೆದರು. ಮುಂಬರುವ ಜಿಲ್ಲಾ ಪರಿಷತ್ ಚುನಾವಣೆಗಳ ಸಮಯದಲ್ಲಿ ಭಯೋತ್ಪಾದನೆ ಉಂಟು ಮಾಡುವುದೇ ಅವರ ಮುಖ್ಯ ಉದ್ದೇಶ.

ಐತಿಹಾಸಿಕ ವಾರಲೀ ಹೋರಾಟ ನಡೆದ ಮಹಾರಾಷ್ಟ್ರದ ಥಾಣೆ ಜಿಲ್ಲೆಯ ತಲಸಾರಿ ದಶಕಗಳಿಂದ ಸಿಪಿಐ(ಎಂ) ನ ಭದ್ರಕೋಟೆಗಳಲ್ಲೊಂದು. ಇದನ್ನು ಮುರಿಯಲು ಬಿಜೆಪಿ ಪೋಲೀಸರ ಸಹಾಯ ಪಡೆದು ಮುಗ್ಧ ಆದಿವಾಸಿಗಳ ಬೇಟೆಯಾಡುವ ಮಟ್ಟಕ್ಕೆ ಇಳಿದಿದೆಯೆಂಬುದು ಸ್ಪಷ್ಟವಾಗಿದೆ.

ಜನವರಿ 26 ರ ಮಧ್ಯಾಹ್ನ ಕುಖ್ಯಾತ ಎಸ್.ಐ.ಕದಮ್ ನೇತೃತ್ವದಲ್ಲಿ ಪೋಲೀಸ್ ಪಡೆ ತಲಸಾರಿಯ ಕಾವಡಾ ಗ್ರಾಮದ ಮೇಲೆ ಧಾಳಿ ಮಾಡಿ ಆದಿವಾಸಿಗಳ ಮನೆ-ಮನೆಗೆ ನುಗ್ಗಿ ಹೊಡೆದರು. ಇಬ್ಬರು ಸಿಪಿಐ(ಎಂ) ಕಾರ್ಯಕರ್ತರ ಮನೆ ಛಾವಣಿ ಕಿತ್ತರು. ಇದನ್ನು ವಿರೋಧಿಸಲು ಗ್ರಾಮಸ್ಥರು ಒಂದೆಡೆ ಸೇರಿದಾಗ ಪಿಎಸ್ಐ ಕದಂ ತನ್ನ ಸರ್ವಿಸ್ ರಿವಾಲ್ವರ್‌ನಿಂದ ಗುಂಡು ಹಾರಿಸಿ ಇಬ್ಬರನ್ನು ಕೊಂದ, ಹಲವರನ್ನು ಗಾಯಗೊಳಿಸಿದ.

ಪೋಲೀಸರ ಜೊತೆಗೆ ಬಂದಿದ್ದ ಬಿಜೆಪಿ ಕಾರ್ಯಕರ್ತರು ಮತ್ತು ಸ್ಥಳೀಯ ಗೂಂಡಾಗಳು ಪೋಲೀಸರೊಡನೆ ಸೇರಿಕೊಂಡು ಬಡ ಆದಿವಾಸಿಗಳ ಮನೆಗಳನ್ನು ಲೂಟಿ ಮಾಡಿ ಹೋದರು. ಗೋಳೀಬಾರಿನ ಕೆಲವು ಗಂಟೆಗಳ ನಂತರ ಪೋಲೀಸರಿಗೆ ಏನು ನೆನಪಾಯಿತೋ ಮತ್ತೆ ಆ ಹಳ್ಳಿಗೆ ಬಂದು, ಇಬ್ಬರು ಬಿಜೆಪಿ ಬೆಂಬಲಿಗರ ಮನೆಗೆ ಬೆಂಕಿ ಹಾಕಿದರು. ಬಹುಶಃ ಕದಂನ ರಿವಾಲ್ವರ್‌ನಿಂದ ಆದ ಅಮಾನುಷ ಹತ್ಯೆಯನ್ನು ಸಮರ್ಥಿಸಿಕೊಳ್ಳಲು ಸಾಕ್ಷ್ಯದ ಸೃಷ್ಟಿಗಾಗಿ!

ಗೋಳೀಬಾರಿನ ಸುದ್ದಿ ಹರಡಿದಾಗ ತಮ್ಮ ಕ್ರಿಮಿನಲ್ ವರ್ತನೆಯನ್ನು ಮುಚ್ಚಿಕೊಳ್ಳಲೆಂದು ಸುಳ್ಳು ಸುದ್ದಿ ಹರಡಿದರು. ಬಿಜೆಪಿ ಸಂಸತ್ ಸದಸ್ಯ ಚಿಂತಾಮಣ್ ವಣಗರ ನಿವಾಸದೆದುರು ಸಿಪಿಐ(ಎಂ) ಮತ ಪ್ರದರ್ಶನ ನಡೆಸಿತ್ತು. ಅದರಿಂದಾಗಿ ಪೋಲೀಸರು ಗೋಳೀಬಾರು ಮಾಡಬೇಕಾಯಿತು ಎಂದು!. ವಾಸ್ತವ ಸಂಗತಿಯೆಂದರೆ ಹಿಂದಿನ ದಿನ ಅಂದರೆ ಜನವರಿ25 ರಂದು 10 ಸಾವಿರ ಮಹಿಳೆಯರು ತಲಸಾರಿಯಲ್ಲಿ ಒಂದು ದೊಡ್ಡ ಮೆರವಣಿಗೆ ನಡೆಸಿದ್ದರು. ಆ ಪ್ರದೇಶದಲ್ಲಿ ಪೋಲೀಸರ ಉದ್ಧಟ ವರ್ತನೆಗಳನ್ನು ಖಂಡಿಸಲು.

ಪೋಲೀಸರು ಇಬ್ಬರು ಆದಿವಾಸಿಗಳನ್ನು ಕೊಂದುದಲ್ಲದೆ ಸಿಪಿಐ(ಎಂ) ಶಾಸಕ ರಾಮ್ ಜೀವಾರ್ತಾ, ಮಾಜಿ ಸಂಸತ್ ಸದಸ್ಯ ಲಹಾಣುಕೋಮ್, ಮಾಜಿ ಶಾಸಕ ಶಂಕರ್ ಚವ್ಹಾಣ್, ಜಿಲ್ಲಾ ಪರಿಷತ್ ಸದಸ್ಯ ರಾಜಾ ಒರ್ಝಾರೆ, ತಲಸಾರಿ ಪಂಚಾಯತ್ ಸಮಿತಿಯ ಸಭಾಪತಿ ಮಾಂಗರ್ ಮತ್ತು ಸಿಪಿಐ(ಎಂ) ಥಾಣೆ ಜಿಲ್ಲಾ ಸಮಿತಿಯ ಕೆಲವು ಸದಸ್ಯರನ್ನು (ಇವರು ಮುಂಬರುವ ಜಿಲ್ಲಾ ಪರಿಷತ್ ಚುನಾವಣೆಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಎಂದು ಬಿಜೆಪಿ ಭಾವಿಸಿದ ಮುಖಂಡರು)

ಕಳೆದ 35 ವರ್ಷಗಳಲ್ಲಿ ತಲಸಾರಿ ಪಂಚಾಯತ್ ಸಮಿತಿಯಲ್ಲಿ ಸಿಪಿಐ(ಎಂ) ಭಾರೀ ಬಹುಮತ ಗೆದ್ದುಕೊಂಡು ಬಂದಿದೆ. ಥಾಣೆ ಜಿಲ್ಲಾ ಪರಿಷತ್ತಿನಲ್ಲಿ ಈ ಪ್ರದೇಶದ ಎಲ್ಲಾ ಸ್ಥಾನಗಳನ್ನು ಹಾಗೂ ವಿಧಾನ ಸಭಾ ಸ್ಥಾನವನ್ನು ಕಳೆದ ಎರಡು ವರ್ಷಗಳಿಂದ ಸತತವಾಗಿ ಗೆದ್ದುಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಮುಂಬರುವ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವಂತೆ ಮಾಡಲು ಒಂದು ವಾರದಿಂದ ನಡೆಸಿದ್ದ ಪೋಲೀಸ್ ಭಯೋತ್ಪಾದನೆ ಜನವರಿ 26 ರಂದು ಗೋಳೀಬಾರಿನವರೆಗೂ ಹೋಯಿತು.

ಗುಂಡು ಹಾರಿಸಿದ ಸಬ್‌ಇನ್ಸ್‌ಪೆಕ್ಟರ್ ಕದಮ್ ಸಮಾಜಘಾತುಕ ವ್ಯಕ್ತಿಗಳನ್ನು ರಕ್ಷಿಸುವಲ್ಲಿ ಕುಖ್ಯಾತಿ ಪಡೆದಾತ. ಈ ಬಗ್ಗೆ ಆತನನ್ನು 1996 ರಲ್ಲಿ ಅಲ್ಲಿಂದ ವರ್ಗ ಮಾಡಲಾಗಿತ್ತು. ಈಗ ಬಿಜೆಪಿ ತನ್ನ ಬೇಳೆ ಬೇಯಿಸಿಕೊಳ್ಳಲು ಅವನನ್ನು ಮತ್ತೆ ಅಲ್ಲಿಗೆ ಕಳಿಸಿತು. ಆತನೂ ತನ್ನ ಮೇಲೆ ತೋರಿದ ಈ ಕೃಪೆಗಾಗಿ ಬಿಜೆಪಿ ಬಾಸ್‌ಗಳಿಗೆ ಕೃತಜ್ಞತೆ ಸಲ್ಲಿಸಲು ಈ ಕೃತ್ಯದಲ್ಲಿ ತೊಡಗಿದ್ದಾನೆ.

ಈ ಘಟನೆಯನ್ನು ಸಿ.ಪಿ.ಐ.(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. "ದತ್ತಾ ಸಾಮಂತ್‌ರನ್ನು ಕಾರ್ಮಿಕ ವರ್ಗದ ಅವರ ಭದ್ರಕೋಟೆಯಲ್ಲೇ ಕೊಲೆ ಮಾಡಿದ ಬೆನ್ನ ಹಿಂದೆಯೇ ಸಿ.ಪಿ.ಐ.(ಎಂ) ಭದ್ರ ನೆಲೆಯಲ್ಲಿ ಆದಿವಾಸಿಗಳನ್ನು ಗುಂಡಿಕ್ಕಿ ಕೊಲ್ಲುವ ಈ ಘಟನೆ ನಡೆದಿರುವುದು ರಾಜ್ಯದಲ್ಲಿ ಎಡಪಕ್ಷಗಳ ವಿರುದ್ಧ ನಡೆದಿರುವ ಯೋಜಿತ ಧಾಳಿಯ ಸಂಕೇತ ಎಂದು ಅದು ಹೇಳಿದೆ. ಈ ಭಯೋತ್ಪಾದನೆಯ ಪ್ರಯತ್ನವನ್ನು ಪ್ರಜಾಪ್ರಭುತ್ವವಾದಿ ಧರ್ಮನಿರಪೇಕ್ಷ ಶಕ್ತಿಗಳು ಖಂಡಿಸಬೇಕೆಂದು ಅದು ಮನವಿ ಮಾಡಿದೆ.

ಜನವರಿ 27 ರಂದು ಒಂದು ಸಿ.ಪಿ.ಐ.(ಎಂ) ನಿಯೋಗ ಗೋಳೀಬಾರ್ ನಡೆದ ಸ್ಥಳಕ್ಕೆ ಭೇಟಿ ನೀಡಿತು. ಜನವರಿ 28 ರಂದು ಮುಂಬೈಯಲ್ಲಿ ಮಂತ್ರಾಲಯದ ಮುಂದೆ ಹಾಗೂ ತಲಸಾರಿಯಲ್ಲಿ ಧರಣೆ ನಡೆಯಿತು. ಪೋಲೀಸ್ ಭಯೋತ್ಪಾದನೆ ನಿಲ್ಲಬೇಕು, ಸಬ್ ಇನ್ಸ್‌ಪೆಕ್ಟರ್ ಕದಮ್‌ನನ್ನು ವಜಾಮಾಡಿ ಆತನ ಮೇಲೆ ಹತ್ಯೆಯ ಮೊಕದ್ದಮೆ ಹಾಕಬೇಕು, ಬಂಧಿಸಿದ ಎಲ್ಲಾ ಸಿ.ಪಿ.ಐ.(ಎಂ) ಮುಖಂಡರನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದೆ.

ಮುಕ್ತ ಹಾಗೂ ನ್ಯಾಯ ಚುನಾವಣೆ ನಡೆಯಲು ಇದು ಅಗತ್ಯ ಎಂದು ರಾಜ್ಯ ಚುನಾವಣಾ ಆಯೋಗಕ್ಕೂ ತಿಳಿಸಲಾಗಿದೆ ಹಾಗೂ ಕೇಂದ್ರ ಗೃಹ ಮಂತ್ರಿ ಇಂದ್ರಜಿತ್ ಗುಪ್ತರವರಿಗೂ ತಂತಿ ಕಳಿಸಲಾಗಿದೆ

ದಹಾನುನಲ್ಲಿ ಕೆಂಪು ಸಾಗರ

ಇದೇ ಥಾಣೆ ಜಿಲ್ಲೆಯ ದಹಾನು ನಲ್ಲಿ ಈಚೆಗೆ ಬೃಹತ್ ರ್‍ಯಾಲಿಯೊಂದು ನಡೆಯಿತು. ರ್‍ಯಾಲಿ ನಡೆದ ಸ್ಥಳ ಕೆಂಪು ಸಾಗರ ದಂತಿತ್ತು. ಜಿಲ್ಲೆಯ ಬಹುತೇಕ ಪ್ರತಿಯೊಂದು ತಹಶೀಲಿನಿಂದ ಜನರು ಕೆಂಬಾವುಟಗಳೊಂದಿಗೆ ಬಂದಿದ್ದರು. ಸಿಪಿಐ(ಎಂ) ಥಾಣೆ ಜಿಲ್ಲಾ ಸಮಿತಿ ರ್‍ಯಾಲಿಗೆ ಕರೆ ನೀಡಿತ್ತು.

ಪರಿಸರ ರಕ್ಷಣೆಯ ಹೆಸರಿನಲ್ಲಿ, ಥಾಣೆ ಜಿಲ್ಲೆಯ ಹಿಂದುಳಿದ ಉತ್ತರ ಭಾಗದ ಅಭಿವೃದ್ಧಿಯನ್ನು ಶಾಶ್ವತವಾಗಿ ತಡೆಹಿಡಿಯುವಂಥ 1991 ರ ಜೂನ್ ತಿಂಗಳ ದಹಾನು ನೋಟಿಫಿಕೇಶನ್ ಅನ್ನು ರದ್ದುಪಡಿಸುವಂತೆ ಒತ್ತಾಯಿಸುವುದು ಈ ಬೃಹತ್ ಪ್ರದರ್ಶನದ ಮುಖ್ಯ ಉದ್ದೇಶವಾಗಿತ್ತು.

ಬಡತನ್ನು ಜನರೇ ಹೆಚ್ಚಾಗಿ ವಾಸವಿರುವ ಈ ಪ್ರದೇಶದ ಅಭಿವೃದ್ಧಿಯ ಇತರ ಹಲವು ಬೇಡಿಕೆಗಳನ್ನು ಮಂಡಿಸಲಾಯಿತು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಹಾಗೂ ಮಾಜಿ ಸಂಸತ್ ಸದಸ್ಯ ಲಹಾಣು ಕೋಮ್ ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಮ್ ಯೆಚೂರಿ ಮುಖ್ಯ ಭಾಷಣಕಾರರಾಗಿದ್ದರು.

ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಪ್ರಭಾಕರಸಂಝಗಿರಿ, ಕೇಂದ್ರಸಮಿತಿ ಸದಸ್ಯೆ ಅಹಲ್ಯಾ ರಂಗ್ನೇಕರ್, ಥಾಣೆ ಜಿಲ್ಲಾ ಸಮಿತಿ ಕಾರ್ಯದರ್ಶಿ ಸುಭಾಷ್ ಸಾಮಂತ ಮೊದಲಾದವರು ಸಭೆಯಲ್ಲಿ ಮಾತನಾಡಿದರು.

ಮೀಸಲಾತಿ ವಿಳಂಬಕ್ಕೆ ಪ್ರತಿಭಟನೆ

ಸಂಸತ್ತು ಮತ್ತು ರಾಜ್ಯ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಮೀಸಲಾತಿ ಒದಗಿಸುವ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲು ವಿಳಂಬ ಮಾಡುತ್ತಿರುವುದನ್ನು ಪ್ರತಿಭಟಿಸಿ ಕೇರಳದ ವಿಧಾನಮಂಡಲ ಕಾರ್ಯಾಲಯದ ಮುಂದೆ ನೂರಾರು ಮಹಿಳೆಯರು ಪ್ರದರ್ಶನ ನಡೆಸಿದರು.

ಕೇಂದ್ರ ಸರಕಾರಿ ನೌಕರರು ಮತ್ತು ಕಾರ್ಮಿಕರ ಒಕ್ಕೂಟದ ಮಹಿಳಾ ವಿಭಾಗ ಪ್ರತಿಭಟನೆಗೆ ಕರೆ ನೀಡಿತ್ತು. ತಮ್ಮ ಬೇಡಿಕೆಗಳನ್ನು ಶೀಘ್ರವಾಗಿ ಪರಿಗಣಿಸುವಂತೆಯೂ ಪ್ರತಿಭಟನಾಕಾರರು ಕೇಂದ್ರ ಸರಕಾರವನ್ನು ಒತ್ತಾಯಿಸಿದರು.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ (ಎಐಡಿಡಬ್ಲ್ಯೂಎ) ರಾಜ್ಯ ಘಟಕದ ಅಧ್ಯಕ್ಷೆ ಸರೋಜಿನಿ ಬಾಲನಂದನ್ ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿದರು.

ಕೇರಳದಲ್ಲೂ ಆರೆಸ್ಸೆಸ್ - ಬಿಜೆಪಿ ಕೂಟದ ಕೃತ್ಯ

ಕೇರಳದ ಕಾಸರಗೋಡು ಜಿಲ್ಲೆಯ ಇರಿಟ್ಟಿ ಎಂಬಲ್ಲಿ ಜನವರಿ 20 ರಂದು ಎಲ್‌ಡಿಎಫ್ ವ್ಯವಸ್ಥೆಗೊಳಿಸಿದ್ದ ಆದಿವಾಸಿಗಳ ಸಭೆಯೊಂದಕ್ಕೆ ಅಡ್ಡಿ ಪಡಿಸಲು ಆರ್‌ಎಸ್‌ಎಸ್ ಮತ್ತು ಬಿಜೆಪಿ ಕೂಟದವರು ಪ್ರಯತ್ನಿಸಿದರು.

ಸಭೆ ನಡೆಯಬೇಕಿದ್ದ ಶಾಲೆಯ ಆವರಣ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಈ ಕೂಟದವರು ಮಾನ ಹಾನಿಕಾರಕವಾದ ಪೋಸ್ಟರ್‌ಗಳು, ಕಾರ್ಟೂನ್‌ಗಳನ್ನು ಅಂಟಿಸಿದ್ದರು, ಹಾಗೂ ಗೋಡೆಬರಹ ಮಾಡಿದ್ದರು.

ಶಾಂತಿ ಕಾಪಾಡಲು ಬಂದೋಬಸ್ತು ಮಾಡಿದ್ದರೂ ಸಭೆ ನಡೆಯುವ ಶಾಲೆಗೆ ನುಗ್ಗಲು ಆರ್‌ಎಸ್‌ಎಸ್-ಬಿಜೆಪಿ ದುರುಳರು ಪ್ರಯತ್ನಿಸಿದರು. ಆದರೆ ಶಿಸ್ತು ಬದ್ಧ ಸಿಪಿಐ(ಎಂ) ಕಾರ್ಯಕರ್ತರು ಇದಕ್ಕೆ ಅವಕಾಶ ಕೊಡಲಿಲ್ಲ. ಘರ್ಷಣೆ ನಡೆಯುವುದನ್ನು ತಪ್ಪಿಸಿದರು.

ಸಿಪಿಐ(ಎಂ) ಹಿತೈಷಿಯ ಹತ್ಯೆ ಪ್ರಕರಣ

12 ಆರ್.ಎಸ್.ಎಸ್. ಕಾರ್ಯಕರ್ತರಿಗೆ ಜೀವಾವಧಿ ಶಿಕ್ಷೆ

ಕೊಚ್ಚಿಯ ಸೆಷನ್ಸ್ ನ್ಯಾಯಾಧೀಶರು ಜನವರಿ 15 ರಂದು ಆರ್.ಎಸ್.ಎಸ್‌ನ 12 ಕಾರ್ಯಕರ್ತರಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದರು.

1990 ನವೆಂಬರ್ 16 ರ ರಾತ್ರಿ ಸಿಪಿಐ(ಎಂ) ಕಾರ್ಯಕರ್ತ ನಾರಾಯಣನ್ ಅವರ ಮನೆ ಮೇಲೆ ನಡೆಸಿದ ಮಾರಕ ಧಾಳಿ ಸಂಬಂಧ ಈ ಶಿಕ್ಷೆ ವಿಧಿಸಲಾಗಿದೆ.

ಆರ್.ಎಸ್.ಎಸ್. ದುರುಳರ ಅಂದಿನ ಆಕ್ರಮಣದಿಂದಾಗಿ ನಾರಾಯಣನ್‌ರ ಹೆಂಡತಿ ಸರೋಜವಲ್ಲಿ ಮೃತಪಟ್ಟಿದ್ದರು. ಬಾಂಬ್ ಧಾಳಿಯಿಂದ ನಾರಾಯಣನ್ ಮತ್ತು ಅವರ ಮಗ ಸುಜಿತ್‌ಗೆ ಅನೇಕ ಗಾಯಗಳಾಗಿವೆ.

ಸುಜಿತ್‌ಗೆ 50 ಸಾವಿರ ರೂ. ಪರಿಹಾರ ನೀಡಬೇಕೆಂದೂ ನ್ಯಾಯಾಧೀಶರು ತೀರ್ಪಿನಲ್ಲಿ ಆದೇಶಿಸಿದ್ದಾರೆ.

ಆಕ್ರಮಣ ನಿಲ್ಲಿಸಲು ಒತ್ತಾಯ

ಈ ನಡುವೆ ಕಣ್ಣೂರು ಜಿಲ್ಲೆಯಲ್ಲಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಹಲ್ಲೆ ನಡೆಸುವುದನ್ನು ತಕ್ಷಣ ನಿಲ್ಲಿಸುವಂತೆ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಇ.ಪಿ.ಜಯರಾಜನ್ ಆರ್.ಎಸ್.ಎಸ್.ಗೆ ಒತ್ತಾಯಿಸಿದ್ದಾರೆ.

ಆರ್.ಎಸ್.ಎಸ್. ಗೂಂಡಾಗಳು ಎದುವಟ್ಟಿಯಲ್ಲಿ ಸಿಪಿಐ(ಎಂ) ಶಾಖೆ, ಸಭೆ, ಪಕ್ಷದ ಕಾರ್ಯಕರ್ತರ ಅಂಗಡಿಗಳು, ಪಕ್ಷದ ಕಚೇರಿಗಳು ಮತ್ತಿತರ ಸ್ಥಳಗಳ ಮೇಲೆ ನಾಡಬಾಂಬ್‌ಗಳಿಂದ ಆಕ್ರಮಣ ನಡೆಸಿದ್ದಾರೆ. ಪಣೂರು ಪ್ರದೇಶದ ಎಳಮಕೋಡ್‌ನಲ್ಲಿ ಕಾಂಗ್ರೆಸ್‌ನವರು ಕೂಡ ಆರೆಸ್ಸಿಸ್ಸಿನಿಂದ ಇದೇ ರೀತಿಯ ಹಲ್ಲೆಯನ್ನು ಅನುಭವಿಸಬೇಕಾಯಿತು. ಕೂತುಪರಂಬದಲ್ಲಿ ಸಿಪಿಐ(ಎಂ) ಗೆ ಇದೇ ಅನುಭವವಾಯಿತು.

ಪೋಲೀಸ್ ಪಡೆಗಳಲ್ಲಿರುವ ಕೆಲವು ಮೂಲಗಳಿಂದ ಆರೆಸ್ಸೆಸ್ ಗೂಂಡಾಗಳಿಗೆ ನೆರವು ಸಿಗುತ್ತಿರುವಂತೆ ಕಾಣುತ್ತದೆ ಎಂದು ಜಯರಾಜನ್ ಹೇಳಿದ್ದಾರೆ.



ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಬಿನೋಯ್ ಕೋನಾರ್ ಉದ್ಘಾಟಿಸಿ ಮಾತನಾಡುತ್ತಿದ್ದಾರೆ.

ಕರ್ನಾಟಕದಲ್ಲಿ ಎಐಕೆಎಸ್‌ನ 60ನೇ ವಾರ್ಷಿಕೋತ್ಸವ

ರೈತ ಸಂಘಟನೆ, ರೈತರ ಐಕ್ಯತೆ ನಮ್ಮ ದೇಹದಲ್ಲಿ ಮೂಳೆ, ಮಾಂಸ ಇರುವ ರೀತಿಯಲ್ಲಿ ಮೂಡಿಬರಬೇಕು. ಬಡ ಕೃಷಿ ಕೂಲಿಕಾರರ ಆಧಾರದಲ್ಲಿ ರೈತರ ಐಕ್ಯತೆ ಬರಬೇಕು. ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ 60ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹೊಸ ಹೊಸ ಕಾರ್ಯಕರ್ತರನ್ನು ತಂದು ಸಂಘಟನೆಯನ್ನು, ತಿಳುವಳಿಕೆಯನ್ನು ವಿಸ್ತರಿಸಬೇಕು ಎಂದು ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಬಿನೋಯ್ ಕೋನಾರ್ ಬೆಂಗಳೂರಿನಲ್ಲಿ ಇತ್ತೀಚೆಗೆ ರಾಜ್ಯದಲ್ಲಿ 60ನೇ ವಾರ್ಷಿಕೋತ್ಸವಾಚರಣೆಯನ್ನು ಉದ್ಘಾಟಿಸುತ್ತಾ ಹೇಳಿದರು. 1936 ರ ಏಪ್ರಿಲ್‌ನಲ್ಲಿ ಕಿಸಾನ್ ಕಾಂಗ್ರೆಸ್ ಎಂಬ ಹೆಸರಿನಲ್ಲಿ ಆರಂಭವಾದ ಈ ಸಂಘಟನೆ ನಂತರ ಅಖಿಲ ಭಾರತ ಕಿಸಾನ್ ಸಭಾ ಎಂಬ ಹೆಸರಿನಿಂದ ರೈತರನ್ನು ಸಂಘಟಿಸಲಾರಂಭಿಸಿತು. ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳ ವಿರುದ್ಧ ಹೋರಾಟದಲ್ಲಿ ರೈತರನ್ನು ಅಣಿನೆರೆಸಿತು. 60 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಎಐಕೆಎಸ್ ಸಾಧನೆಗಳ ಹಾಗೂ ದೌರ್ಬಲ್ಯಗಳ ಕುರಿತು ಈಗಿನ ಪೀಳಿಗೆಯವರು ಚರ್ಚಿಸಿ ಸಂಘಟನೆಯನ್ನು ಮುಂದಕ್ಕೊಯ್ಯಬೇಕು ಎಂದು ಅವರು ಹೇಳಿದರು.

ಜಲಿಯನ್ ವಾಲಾ ಬಾಗ್‌ನಲ್ಲಿ ಸತ್ತವರು, ಚೌರಿಚೌರಾದಲ್ಲಿ ಸತ್ತವರು ರೈತರು. ಆದರೆ ಬಂಡವಾಳಶಾಹಿಗಳಿಗೆ ರೈತರನ್ನು ಸಂಘಟಿಸಬೇಕಾದ ಅಗತ್ಯ ಕಾಣುವುದಿಲ್ಲ. ಕಾರ್ಮಿಕ ವರ್ಗ ಇದನ್ನು ಮಾಡಬೇಕಾಗಿದೆ. ರೈತರ ಸಂಘಟನೆಗೆ ನೆರವಾಗಬೇಕಾಗಿದೆ ಎಂದು ಬಿನೋಯ್ ಕೋನಾರ್ ಹೇಳಿದರು.

ಅಖಿಲ ಭಾರತ ಕಿಸಾನ್ ಸಭಾಗೆ ಸೇರಿರುವ ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಪಿ.ರಾಮಚಂದ್ರರಾವ್ ಮಾತನಾಡುತ್ತಾ ಇಂದು ಕೂಡಾ ಭೂ ಸಮಸ್ಯೆ ಸಂಪೂರ್ಣವಾಗಿ ಪರಿಹಾರವಾಗಿಲ್ಲ ಎಂದರು. ಬಹುಪಾಲು ಪ್ರದೇಶಗಳಲ್ಲಿ ಭೂ ರಹಿತರು ಅರ್ಜಿಗಳನ್ನು ಹಾಕಿ ಭೂಮಿಯ ಚೀಟಿಗಾಗಿ ಕಾಯುತ್ತಿದ್ದಾರೆ. ಇಂತವರಿಗಾಗಿ ನಾವು ಹೋರಾಟ ಮಾಡಬೇಕಾಗಿದೆ ಎಂದರು. ಕೇವಲ ಪಶ್ಚಿಮ ಬಂಗಾಳದಲ್ಲಿ ಮಾತ್ರ ಲಕ್ಷಾಂತರ ರೈತರು ಭೂಮಿ ಪಡೆದಿದ್ದಾರೆ, ಅದರಿಂದ ಅಲ್ಲಿಯ ಕೃಷಿ ಉತ್ಪಾದನೆ ವೆಚ್ಚ ರಾಜ್ಯ ಮೊದಲ ಸ್ಥಾನ ಪಡೆಯುವಂತಾಗಿದೆ ಎಂದು ಅವರು ಹೇಳಿದರು.

ಮರುದಿನ ರೈತ ಸಂಘಟನೆಯಲ್ಲಿ ತೊಡಗಿರುವ ಕಾರ್ಯಕರ್ತರಿಗೆ ನಡೆದ ತರಬೇತಿ ಶಿಬಿರದಲ್ಲಿ ಮಾತನಾಡುತ್ತ ಪಶ್ಚಿಮ ಬಂಗಾಳದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ ಸೂರ್ಯ ಕಾಂತ್ ಮಿಶ್ರಾ ಅಲ್ಲಿ ಕಿಸಾನ್ ಸಭಾದ ಬೆಳವಣಿಗೆಗೆ ಮತ್ತು ಪಂಚಾಯತ್ ರಾಜ್ಯದ ಯಶಸ್ಸಿನಲ್ಲಿ ಅದರ ಪಾತ್ರದ ಕುರಿತು ಮಾತನಾಡಿದರು. ಪಂಚಾಯತುಗಳಿಂದಾಗಿ ಭೂ ಸುಧಾರಣೆ ಯಶಸ್ವಿಯಾಯಿತೇ ಅಥವಾ ಭೂ ಸುಧಾರಣೆಯಿಂದಾಗಿ ಪಂಚಾಯತಿ ರಾಜ್ಯ ಭದ್ರಗೊಂಡಿತೇ ಎಂಬ ವಾದದಲ್ಲಿ ಹುರುಳಿಲ್ಲ ಎಂದ ಅವರು ಎಡರಂಗ ಸರಕಾರ ಅಧಿಕಾರಕ್ಕೆ ಬರುವ ನಾಲ್ಕು ದಶಕಗಳ ಮೊದಲೇ ಬಂಗಾಳದಲ್ಲಿ ರೈತ ಚಳುವಳಿ, ಎಡ ಚಳುವಳಿ ಬೆಳೆದು ಬಂದಿದೆ ಎಂದರು. ಸುದೀರ್ಘ ಹೋರಾಟ ಮತ್ತು ಎಡರಂಗ ಸರಕಾರದ ಜನ ಪರ ನೀತಿಯಿಂದಾಗಿಯೇ ಅಲ್ಲಿ 15 ಲಕ್ಷ ರೈತ ಕುಟುಂಬಗಳಿಗೆ ಭೂಮಿ ಹಂಚಲು ಸಾಧ್ಯವಾಗಿದೆ ಎಂದು ಅವರು ವಿವರಿಸಿದರು. ಇಂದು ಬಂಗಾಳದಲ್ಲಿ ಸಣ್ಣ ರೈತರ ಕೈಯಲ್ಲಿ ಒಟ್ಟು ಕೃಷಿ ಭೂಮಿಯ 66.5%. ಆದರೆ ಕರ್ನಾಟಕದಲ್ಲಿ ಇದು ಕೇವಲ 27%. ಅತ್ತ ಬಂಗಾಳದಲ್ಲಿ ದೊಡ್ಡ ಹಾಗೂ ಮಧ್ಯಮ ರೈತರ ಪಾಲು 13% ಮಾತ್ರ. ಆದರೆ ಕರ್ನಾಟಕದಲ್ಲಿ ಇದು 46%. ಕರ್ನಾಟಕದಲ್ಲಿ ವಿತರಣೆಯಾದ ಮಿಗುತೆ ಭೂಮಿ ಕೇವಲ 48 ಸಾವಿರ ಎಕರೆ. ಫಲಾನುಭವಿ ರೈತರ ಸಂಖ್ಯೆ ಕೇವಲ 30 ಸಾವಿರ ಇದು ಬಡತನದ ರೇಖೆಗಿಂತ ಕೆಳಗಿರುವವರಲ್ಲಿ ಶೇಕಡ 0.3 ರಷ್ಟೇ. ಆದ್ದರಿಂದಲೇ ರೈತರ ಸಂಘಟನೆ ಮತ್ತು ಸಂಘಟಿತ ಹೋರಾಟವಿಲ್ಲದೆ ಕಾಯಿದೆಗಳ ಅನುಷ್ಠಾನ ಸಾಧ್ಯವಿಲ್ಲ ಎಂಬುದು ಪ್ರಮುಖ ವಿಚಾರ ಎಂದ ಸೂರ್ಯ ಕಾಂತ ಮಿಶ್ರಾ ಈ ಎಲ್ಲಾ ಅನುಭವಗಳ ಆಧಾರದಲ್ಲಿ ಕರ್ನಾಟಕದಲ್ಲಿ ರೈತ ಸಂಘಟನೆ ಯನ್ನು ಬೆಳೆಸಲು ಪ್ರಯತ್ನಿಸಬೇಕು ಎಂದರು.

ನಮ್ಮ ಸರಕಾರ ಇದ್ದರೂ ಇಲ್ಲದಿದ್ದರೂ ಸಮಗ್ರ ಭೂಸುಧಾರಣೆಗೆ ವರ್ಗ ಹೋರಾಟ ಅಗತ್ಯ. ಪಶ್ಚಿಮ ಬಂಗಾಳದಲ್ಲಿ ಎರಡು ದಶಕಗಳ ಕಾಲ ಎಡ ರಂಗ ಸರಕಾರವಿದ್ದರೂ ಅಲ್ಲಿಯೂ ಕರ್ಷಕ ಕ್ರಾಂತಿ ಪೂರ್ಣಗೊಂಡಿಲ್ಲ ಎಂದು ಸ್ಪಷ್ಟಪಡಿಸಿದ ಸೂರ್ಯಕಾಂತ ಮಿಶ್ರಾರವರು ಭಾರತದಲ್ಲಿ ಇಂದಿನ ಸಂವಿಧಾನದಡಿಯಲ್ಲಿ ಸಮಗ್ರ ಭೂಸುಧಾರಣೆ ತರಲು ಅಸಾಧ್ಯ. ನಾವು ತಂದಿರುವ ಕಾಯಿದೆಗೆ ಇತಿಮಿತಿಗಳಿವೆ ಎಂದರು. ಇದಲ್ಲದೆ ಪಂಚಾಯತಿ ಪ್ರಜಾ ಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸ ಬೇಕಾಗಿದೆ ಎಂದವರು ಹೇಳಿದರು.

ಕರ್ನಾಟಕದಲ್ಲಿ ಭೂ ಮಸೂದೆಯು ಅಧಿಕಾರವಿಲ್ಲದ ಪಂಚಾಯತು ಇದೆ. ಆದರೆ ಬಂಗಾಳದಲ್ಲಿ ಪಂಚಾಯತ್ ಮುಖಾಂತರವೇ ರೈತರ ಹಕ್ಕು ಉಳಿಸಲು ಸಾಧ್ಯವಾಗಿದೆ. ಆದರೆ ಜನರ ಭಾಗವಹಿಸುವಿಕೆ ಹೆಚ್ಚುತ್ತಾ ಹೋದಂತೆ ಈ ಕಾಯಿದೆಯಲ್ಲಿನ ಇತಿಮಿತಿ ಜನರಿಗೆ ಅರಿವಾಗಲಿದೆ. ಅದರ ಪ್ರಕ್ರಿಯೆಯಲ್ಲಿ ರೈತರನ್ನು ತೊಡಗಿಸಿ ಕರ್ಷಕ ಕ್ರಾಂತಿ ಈಗಿರುವ ವ್ಯವಸ್ಥೆಯಲ್ಲಿ ಸಾಧ್ಯವಿಲ್ಲ ಎಂಬ ಜಾಗೃತಿಯನ್ನು ಬೆಳೆಸಬೇಕಾಗಿದೆ. ಇಂತಹ ಕೆಲಸಕ್ಕೆ ಪಂಚಾಯತನ್ನು ನಾವು ತೊಡಗಿಸಿಕೊಳ್ಳುವುದಾಗಿ ಹೇಳಿದ ಸೂರ್ಯಕಾಂತ್ ಮಿಶ್ರಾರವರು ಈ ಹಿನ್ನೆಲೆಯಲ್ಲಿ ಕರ್ನಾಟಕದ ಪರಿಸ್ಥಿತಿಗೆ ಅನುಗುಣವಾಗಿ ರೈತರನ್ನು ಸಂಘಟಿಸಲು ರೈತ ಕೃಷಿ ಕೂಲಿಕಾರರ ತಳಹದಿಯಲ್ಲಿ ಅಖಿಲ ಭಾರತ ಕಿಸಾನ್ ಸಭಾವನ್ನು ಕಟ್ಟಿ ಬೆಳೆಸಲು ಪ್ರಯತ್ನಿಸಬೇಕಾಗಿದೆ ಎಂದರು.

ಪಶ್ಚಿಮ ಬಂಗಾಳದ ಪಂಚಾಯತ್ ರಾಜ್ಯ ಮಂತ್ರಿ ಸೂರ್ಯಕಾಂತ್ ಮಿಶ್ರಾ ಮಾತನಾಡುತ್ತಿದ್ದಾರೆ.



ಪಾಕಿಸ್ತಾನದಲ್ಲಿ ನವಾಜ ಶರೀಫ್‌ಗೆ ಭಾರಿ ಬಹುಮತ

ಫೆಬ್ರವರಿ 3 ರಂದು ಪಾಕಿಸ್ತಾನದಲ್ಲಿ ಮಧ್ಯಂತರ ಚುನಾವಣೆಗಳು ನಡೆದು "ಪಾಕಿಸ್ತಾನ ಮುಸ್ಲಿಂ ಲೀಗ್" ನಾಯಕ ನವಾಜ್ ಶರೀಫ್ ಭಾರಿ ಬಹುಮತ ಪಡೆಯುವ ಹಾದಿಯಲ್ಲಿದ್ದಾರೆ ಎಂದು ಮೊದಲ ಚುನಾವಣಾ ಫಲಿತಾಂಶದ ವರದಿಗಳು ಹೇಳಿವೆ. ಆದರೆ ಎರಡು ವರ್ಷಗಳೊಳಗೆ ನಡೆದ ಮಧ್ಯಂತರ ಚುನಾವಣೆಗಳಲ್ಲಿ ಅತ್ಯಂತ ಕಡಿಮೆ ಮತದಾನವಂತೆ. ಪಂಜಾಬ್‌ನ ಕೆಲವು ನಗರಗಳಲ್ಲಿ ಬಿಟ್ಟರೆ ಹೆಚ್ಚಿನ ಕಡೆ ಸರಾಸರಿ ಕೇವಲ ಶೇಕಡಾ 30 ಮತದಾನವಾಗಿದೆ ಎಂದು ಆರಂಭದ ವರದಿಗಳು ತಿಳಿಸಿವೆ.

ಈ ವರದಿಗಳ ಪ್ರಕಾರ ನವಾಜ್ ಶರೀಫ್ ಭಾರೀ ಬಹುಮತದತ್ತ ನಡೆದಿದ್ದು 210 ಸೀಟುಗಳಲ್ಲಿ 150 ರಷ್ಟು ಅವರ ಪಾಕಿಸ್ತಾನ ಮುಸ್ಲಿಂ ಲೀಗ್‌ಗೆ ಬರಬಹುದು ಎಂದು ಅಂದಾಜು ಮಾಡಲಾಗಿದೆ. ಮುಖ್ಯ ಪ್ರತಿಸ್ಪರ್ಧಿಗಳಲ್ಲಿ ಒಂದಾಗಿದ್ದ ಪದಚ್ಯುತ ಮಾಜಿ ಪ್ರಧಾನಿಮಂತ್ರಿ ಬೆನಜೀರ್ ಭುಟ್ಟೋರ 'ಪಾಕಿಸ್ತಾನ ಪೀಪಲ್ಸ್ ಪಾರ್ಟಿ' ಕೇವಲ 20 ಸೀಟುಗಳನ್ನು ಪಡೆಯುವ ಸಾಧ್ಯತೆ ಇದ್ದು ಬಹಳ ಹಿಂದಿದೆ. ಇನ್ನೊಬ್ಬ ತೀವ್ರ ಪ್ರತಿಸ್ಪರ್ಧಿ ಎಂದು ಭಾವಿಸಲಾಗಿದ್ದ ಮಾಜಿ ಕ್ರಿಕೆಟ್ ಕ್ಯಾಪ್ಟನ್ ಇಮ್ರಾನ್ ಖಾನ್‌ರ 'ಇನ್ಸಾಫ್ ಪಾರ್ಟಿ' ಯಾವ ಸೀಟು ಗಳಿಸಲಿಕ್ಕಿಲ್ಲ ಎನ್ನಲಾಗಿದೆ. ಅಲ್ಲದೆ ಇಮ್ರಾನ್ ಖಾನ್ ಸ್ವತಃ ಸ್ಪರ್ಧಿಸಿದ್ದ ಒಂಭತ್ತು ಕ್ಷೇತ್ರಗಳಲ್ಲಿ ಅವರು ಸೋತಿದ್ದಾರಂತೆ. ಪ್ರಧಾನಿ ಭುಟ್ಟೋರ ಕೊಲೆಯಾದ ತಮ್ಮ ಮುರ್ತಜಾ ಭುಟ್ಟೋರ ಪತ್ನಿಯ ಹೊಸ ಪಕ್ಷ ಸಹ ಬೆರಳೆಣಿಕೆಯ ಸೀಟುಗಳನ್ನು ಗಳಿಸಬಹುದಷ್ಟೇ ಎನ್ನಲಾಗಿದೆ. ಜಮಾತೇ ಇಸ್ಲಾಮಿ ಹಾಗೂ ಜಮಾತೇ ಉಲೇಮಾ ಪಾಕಿಸ್ತಾನ ಚುನಾವಣೆಗಳನ್ನು ಬಹಿಷ್ಕರಿಸಿದ್ದವು. ಸಿಂಧ್‌ನಲ್ಲಿ ಅದರಲ್ಲೂ ಕರಾಚಿಯಲ್ಲಿ ಪ್ರಬಲವಾದ ಇನ್ನೊಂದು ಪಕ್ಷ ಮೊಹಜಿರ್ ಪಕ್ಷ ಕಳೆದ ಚುನಾವಣೆಗಳನ್ನು ಬಹಿಷ್ಕರಿಸಿದ್ದರೂ ಈ ಬಾರಿ ಸ್ಪರ್ಧಿಸಿದ್ದು ಅದು ಪಡೆದ ಸೀಟುಗಳ ಬಗ್ಗೆ ವಿವರಗಳು ಇನ್ನೂ ಸಿಕ್ಕಿಲ್ಲ.

ಯಾವ ಪಕ್ಷಕ್ಕೂ ಬಹುಮತ ಬರದೆ ಹೋಗಬಹುದು ಎಂದು ನಿರೀಕ್ಷಿಸಲಾಗಿದ್ದ ಚುನಾವಣೆಯಲ್ಲಿ, ನವಾಜ್ ಶರೀಫ್ ಬಹುಮತ ಪಡೆದಿರುವುದು ಅನಿರೀಕ್ಷಿತವೇ ಎನ್ನಬಹುದು. ಕಳೆದ ಒಂಭತ್ತು ತಿಂಗಳಲ್ಲಿ ನಾಲ್ಕು ಬಾರಿ ಚುನಾವಣೆಗಳನ್ನು ಎದುರಿಸಿರುವ ಪಾಕಿಸ್ತಾನದ ಜನತೆ ಭ್ರಷ್ಟ ರಾಜಕೀಯ ಪಕ್ಷಗಳಿಂದ ಬೇಸತ್ತಿದ್ದಾರೆ. ಆದರೆ ಜನರ ಮುಂದೆ ಪ್ರತಿ ಬಾರಿ ಬದಲಿಸದೆ ಬೇರೆ ದಾರಿ ಉಳಿದಿಲ್ಲ. ಕಳೆದ ನಾಲ್ಕು ಚುನಾವಣೆಗಳು ಬೆನಜಿರ್ ಹಾಗೂ ನವಾಜ್ ಶರೀಫ್ ಅದಲಿ ಬದಲಿಯಾಗಿದ್ದಾರೆ. ಈ ಬಾರಿಯೂ ಇದಕ್ಕೆ ಅಪವಾದವಲ್ಲ.

ಆದರೆ ಪಾಕಿಸ್ತಾನದ ಜನರ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ಬೆನಜಿರ್ ಭುಟ್ಟೋರ ಸರಕಾರ ಐಎಂಎಫ್ ನೀತಿಗಳಿಗೆ ಬಾಗಿ ಭಾರಿ ತೆರಿಗೆ ಹಾಗೂ ಬೆಲೆಏರಿಕೆಗೆ ಕಾರಣವಾಗಿದ್ದು, ವಿಪರೀತ ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರದಿಂದ ರೋಸಿ ಹೋಗಿದ್ದ ಜನ ಆಕೆಯ ಪಕ್ಷಕ್ಕೆ ಪರಾಭವ ಉಣ್ಣಿಸಿದ್ದು ತೀರಾ ಆಶ್ಚರ್ಯವೇನಲ್ಲ. ಆದರೆ ಆಕೆಯ ಸರಕಾರವನ್ನು ಭ್ರಷ್ಟಾಚಾರ ಹಾಗೂ ದುರಾಡಳಿತದ ಆಪಾದನೆ ಮೇಲೆ ಮಾತ್ರ ವಜಾ ಮಾಡಿದ್ದು ಪಾಕಿಸ್ತಾನದ ಪ್ರಜಾಪ್ರಭುತ್ವಕ್ಕೆ ಬುಡವಿಲ್ಲವೆಂಬುದನ್ನು ಇನ್ನೊಮ್ಮೆ ತೋರಿದೆ. ಪಾಕಿಸ್ತಾನದ ಅಧ್ಯಕ್ಷರಿಗೇ ನಿಜವಾದ ಅಧಿಕಾರ ಇರುವುದು ಎಂದು ಇನ್ನೊಮ್ಮೆ ಜನರಿಗೆ ಗೊತ್ತಾಗಿದೆ. ಆದರೆ ಈ ವಜಾ ನಡೆದದ್ದು ಸಾಮ್ರಾಜ್ಯಶಾಹಿ ಬೆಂಬಲಿತ ಸೈನ್ಯಾಧಿಕಾರಿಗಳ ಆಳುವ ಕೂಟ ತನ್ನನ್ನು ಬಲಪಡಿಸುವ ಪ್ರಯತ್ನ ಎನ್ನುವುದಕ್ಕೆ ಸಂದೇಹವಿಲ್ಲ. ಇತ್ತೀಚೆಗೆ ಅಧಿಕೃತವಾಗಿ ಸೈನ್ಯಾಧಿಕಾರಿಗಳ ಪಾಲು ಆಡಳಿತದಲ್ಲಿ ವಿಪರೀತ ಹೆಚ್ಚಿದೆ. ಕಳೆದ ನಾಲ್ಕು ಸರಕಾರಗಳನ್ನು ವಜಾ ಮಾಡಲಾಗಿದ್ದು, ಪಾಕಿಸ್ತಾನದ ಪ್ರಜಾಪ್ರಭುತ್ವವು ಎತ್ತ ಸಾಗಿದೆ ಎಂದು ಇನ್ನೂ ಹೇಳುವುದು ಕಷ್ಟ.

ನೇಪಾಳದಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಮೊದಲ ಸ್ಥಾನ

ಇತ್ತೀಚೆಗೆ ನೇಪಾಳದ ರಾಜಕೀಯ ಅನಿಶ್ಚಿತತೆ ಹಿನ್ನೆಲೆಯಲ್ಲಿ ಅಲ್ಲಿ ನಡೆದ ಐದು ಮರು ಚುನಾವಣೆಯಲ್ಲಿ ಮೂರರಲ್ಲಿ ಗೆಲ್ಲುವುದರ ಮೂಲಕ ನೇಪಾಳ ಕಮ್ಯುನಿಸ್ಟ್ ಪಕ್ಷ(ಐಕ್ಯ ಮಾರ್ಕ್ಸ್‌ವಾದಿ - ಲೆನಿನ್ ವಾದಿ) ತನ್ನ ಅತಿ ದೊಡ್ಡ ಪಕ್ಷ ಸ್ಥಾನ ಉಳಿಸಿಕೊಂಡಿದೆ. ಈ ಮರು ಚುನಾವಣೆಗಳನ್ನು ಬಳಸಿ ಅತಿ ದೊಡ್ಡ ಪಕ್ಷವಾಗುವ ನೇಪಾಳಿ ಕಾಂಗ್ರೆಸ್‌ನ ಕನಸು ಭಗ್ನವಾಗಿ ಎರಡು ಸೀಟುಗಳನ್ನು ಅದು ಗಳಿಸಿದೆ. ಆದರೆ ನೇಪಾಳಿ ಕಾಂಗ್ರೆಸ್ ಅಧ್ಯಕ್ಷ ಗಿರಿಜಾ ಪ್ರಸಾದ್ ಕೊಯಿರಾಲರ ಹಿಂದಿನ ಸೀಟಿನಲ್ಲಿ ಆ ಪಕ್ಷ ಸೋತಿದೆ. ಅದನ್ನು ಕಮ್ಯುನಿಸ್ಟ್ ಪಕ್ಷ ವಶಪಡಿಸಿಕೊಂಡಿದೆ. ಮರು ಚುನಾವಣೆಗಳ ಫಲಿತಾಂಶದ ನಂತರ ಕಮ್ಯುನಿಸ್ಟ್ ಪಕ್ಷ 90 ಸೀಟು ಗಳಿಸಿದರೆ ನೇಪಾಳಿ ಕಾಂಗ್ರೆಸ್ 88 ಗಳಿಸಿ ಹಿಂದಿದೆ. ಆದರೂ ಸಂಧಾನ ನಡೆಸುತ್ತಿವೆ.

ಸೈಪ್ರಸ್‌ನ್ನು ಒಡೆದು ಆಳುತ್ತಿರುವ ಸಾಮ್ರಾಜ್ಯಶಾಹಿ ಪಿತೂರಿ

ಇತ್ತೀಚೆಗೆ ಸೈಪ್ರಸ್ ಯುದ್ಧದ ಭೀತಿಯ ನೆರಳಲ್ಲಿ ಇತ್ತು. ಸೈಪ್ರಸ್ ರಶ್ಯದಿಂದ ಕ್ಷಿಪಣಿ ಕೊಂಡುಕೊಂಡಿದ್ದರ ವಿರುದ್ಧ ತುರ್ಕಿ ಬೆದರಿಕೆ ಹಾಕಿತ್ತು. ಇದು ಮೊದಲ ಬಾರಿ ಅಲ್ಲ ಸೈಪ್ರಸ್ ಇಂತಹ ಬೆದರಿಕೆ ಎದುರಿಸುತ್ತಿರುವುದು.

1960 ರಲ್ಲಿ ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದ ಸೈಪ್ರಸ್ ಅಂದಿನಿಂದಲೂ ಯುದ್ಧದ ನೆರಳು ಕಾಡಿಸುತ್ತಿದೆ. ಸ್ವಾತಂತ್ರ್ಯ ನಂತರ ಧರ್ಮದ ಆಧಾರದ ಮೇಲೆ ಜನರನ್ನು ಒಡೆಯುವ ಸಂವಿಧಾನವನ್ನು ಬ್ರಿಟನ್ ಸೈಪ್ರಸ್ ಮೇಲೆ ಹೊರಿಸಿತು. ಆದರೂ ಮೊದಲ ವರ್ಷಗಳಲ್ಲಿ ಸೈಪ್ರಸ್ ಶಾಂತಿಯಿಂದಿತ್ತು. ಆದರೆ 1963 ರಲ್ಲಿ ಮಕಾರಿಯೋಸ್‌ರ ಸಂವಿಧಾನದಲ್ಲಿ ಸುಧಾರಣೆ ತರುವ ಪ್ರಯತ್ನಕ್ಕೆ ತುರ್ಕಿಯ ತೀವ್ರ ವಿರೋಧ ಕಂಡುಬಂದಿತು. ಆಮೇಲೆ ಇದಕ್ಕೆ ಸೈಪ್ರಸ್ ತುರ್ಕರು ಸಹ ಬೆಂಬಲ ಕೊಟ್ಟರು. ಕ್ರಮೇಣ ಸೈಪ್ರಸ್‌ನ ತುರ್ಕಿ ಹಾಗೂ ಗ್ರೀಕ್ ಮೂಲದ ಜನರ ನಡುವೆ ವಿರಸ ಆರಂಭವಾಯಿತು. ಎರಡೂ ಜನಾಂಗಗಳಲ್ಲಿ ಅಂಧಾಭಿಮಾನ ತಲೆ ಎತ್ತಲಾರಂಭಿಸಿತು. ಎರಡೂ ಕಡೆಯ ಉಗ್ರಗಾಮಿಗಳು ಪರಸ್ಪರರ ಮೇಲೆ ಹಿಂಸಾಚಾರ, ಭಯೋತ್ಪಾದನೆ ಆರಂಭಿಸಿದರು. ಆದರೆ ಈ ನಡುವೆ ಸೈಪ್ರಸ್ ಅಲಿಪ್ತ ಚಳುವಳಿಯ ಸಕ್ರಿಯ ದೇಶವಾಗಿತ್ತು. ಸೈಪ್ರಸ್‌ನಲ್ಲಿ ಅಕೇಲ್ ಎಂಬ ಎಡಪಂಥೀಯದತ್ತ ವೇಗವಾಗಿ ಬೆಳೆಯುತ್ತಿರುವುದು, ಸಾಮ್ರಾಜ್ಯಶಾಹಿ ನಾಟೋ ಕೂಟಕ್ಕೆ ಸಂಬಂಧಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಜನಾಂಗೀಯ ಭಾವನೆಗಳನ್ನು ಬಳಸಿ ಸೈಪ್ರಸ್‌ನ್ನು ಇಬ್ಭಾಗ ಮಾಡಲು ಹೊರಟರು.

1974 ರ ಜುಲೈ ಮಕಾರಿಯೋಸ್ ರನ್ನು ಉರುಳಿಸಿ ಗ್ರೀಕ್ ಬೆಂಬಲಿತ ಗುಂಪು ಅಧಿಕಾರಕ್ಕೆ ಬಂತು. ಆಗ ಗ್ರೀಸ್ ನಲ್ಲಿ ಮಿಲಿಟರಿ ಸರಕಾರ ಆಡಳಿತದಲ್ಲಿತ್ತು. ಇದರ ವಿರುದ್ಧ ಎಂಬಂತೆ ಹಾಗೂ ತುರ್ಕಿ ಸೈಪ್ರಸ್ಸ್‌ನರನ್ನು ರಕ್ಷಿಸಲೋ ಎಂಬಂತೆ ಆಕ್ರಮಿಸಿ ಉತ್ತರ ಸೈಪ್ರಸ್ ಭಾಗವನ್ನು ಆಕ್ರಮಿಸಿಕೊಂಡಿತು. ಗ್ರೀಸ್ ನ ಮಿಲಿಟರಿ ಸರಕಾರವೇ ಸ್ವಲ್ಪ ಸಮಯದಲ್ಲಿ ಬಿದ್ದು ಹೋಯಿತು. ಆದರೂ ತುರ್ಕಿ ಸೈಪ್ರಸ್ ಮೇಲೆ ಧಾಳಿ ಮುಂದುವರಿಸಿ ಸೈಪ್ರಸ್ ನ ಶೇಕಡಾ 37 ಭಾಗವನ್ನು ವಶಪಡಿಸಿಕೊಂಡಿತು. ಹೀಗೆ ತುರ್ಕಿ ಒಂದು ಕಡೆ, ಗ್ರೀಸ್ ಇನ್ನೊಂದು ಕಡೆ ಸೇರಿ ಸೈಪ್ರಸ್‌ನ್ನು ಇಬ್ಭಾಗ ಮಾಡುವ ಅಮೆರಿಕನ್ ಪಿತೂರಿಯನ್ನು ಕಾರ್ಯರೂಪಕ್ಕೆ ತಂದರು.

ಸೈಪ್ರಸ್‌ನ ಉತ್ತರ ಭಾಗದಲ್ಲಿ ತುರ್ಕಿಯ ಬೆಂಬಲದಿಂದ ರಚಿಸಿದ ಸರಕಾರ ವನ್ನು ಈವರೆಗೆ ಯಾವುದೇ ಇತರ ದೇಶದ ಸರಕಾರಗಳು ಮಾನ್ಯತೆ ನೀಡಿಲ್ಲ. ಅಲ್ಲದೆ ವಿಶ್ವಸಂಸ್ಥೆ ಹಲವಾರು ನಿರ್ಣಯಗಳನ್ನು ಅಂಗೀಕರಿಸಿ ಸೈಪ್ರಸ್ ಫೆಡರೇಷನ್ ಆಧಾರದ ಮೇಲೆ ಒಂದಾಗಬೇಕೆಂದು ಅಂಗೀಕರಿಸಿದೆ. ಅಲ್ಲದೆ ತುರ್ಕಿ ಹಾಗೂ ಗ್ರೀಕ್ ಸೈಪ್ರಸ್ ಗಳ ನಾಯಕರುಗಳ ನಡುವೆ ಐಕ್ಯತೆ ಒಪ್ಪಂದ ಸಹ ಜಾರಿಯಾಗದೆ ಉಳಿದಿದೆ.

ಜಗತ್ತಿನ ಉಳಿದ ಕಡೆ ಸಾಮ್ರಾಜ್ಯಶಾಹಿ ಸೃಷ್ಟಿಸಿದ ಸಮಸ್ಯೆಗಳಂತೆ ಇಲ್ಲೂ ಈ ಸಮಸ್ಯೆ ಬಗೆಹರಿಯದಂತೆ ಉಳಿದಿದೆ.

ಲೋಕಸಂಚಾರ



ಶರತ್‌ಚಂದ್ರ

ಯೆಲ್ಸಿನ್‌ಗೆ ನ್ಯೂಮೇನಿಯಾವೋ! ಪಾರ್ಕಿಸನ್ ರೋಗವೋ?

ಇದು ಈಗ ರಶ್ಯಾದಲ್ಲಲ್ಲ ಜಗತ್ತಿನಲ್ಲೆಡೆ ಎಲ್ಲರೂ ಎಲ್ಲರಿಗೂಕೇಳುತ್ತಿರುವ ಪ್ರಶ್ನೆ. ಸುಮಾರು ಎರಡು ತಿಂಗಳುಗಳಿಂದಲೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳದಿರುವ ಯೆಲ್ಸಿನ್ ರ ರಾಜಕೀಯ ಭವಿಷ್ಯದ ಮುಂದೆ ಒಂದು ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಇದೆ. ಅಧಿಕೃತ ವರದಿಗಳ ಪ್ರಕಾರ ಯೆಲ್ಸಿನ್ ಪಂಚ-ಬೈಪಾಸ್ ಹೃದಯ ಶಸ್ತ್ರ ಚಿಕಿತ್ಸೆಯಿಂದ ಪೂರ್ಣ ಚೇತರಿಸಿಕೊಂಡಿದ್ದಾರೆ. ಒಂದು ಸರಳವಾದ ನ್ಯೂಮೋನಿಯಾ ಏನೂ ಭಯಕ್ಕೆ ಕಾರಣವಿಲ್ಲ,ಆದರೆ ಯೆಲ್ಸಿನ್ ಪುನರಾಯ್ಕೆಯಾದ ಮೇಲೆ ಹೆಚ್ಚು ಕಡಿಮೆ ಯಾವುದೇ ಅಧ್ಯಕ್ಷೀಯ ಕೆಲಸ ಮಾಡಲಾಗದಿರುವುದು ರಶ್ಯಾದಲ್ಲಿ ತೀವ್ರ ಆತಂಕಕ್ಕೆ ಕಾರಣವಾಗಿದೆ. ಅಧ್ಯಕ್ಷರಲ್ಲಿ ರಶ್ಯನ್ ಸಂವಿಧಾನದಲ್ಲಿ ವಿಪರೀತ ಅಧಿಕಾರ ಕೇಂದ್ರೀಕರಿಸುವುದು, ಹಾಗ ಅಧ್ಯಕ್ಷರು ತೀವ್ರ ಅನಾರೋಗ್ಯದಿಂದ ತಿಂಗಳುಗಟ್ಟಲೆ ಬಳಲುತ್ತಿರುವುದು, ಇದರಿಂದ ಇಡೀ ದೇಶದ ಆಡಳಿತ ಸ್ಥಬ್ಧ ಹೊಂದಿರುವುದು ರಶ್ಯದ ಮುಂದಿರುವ ಗಂಭೀರ ಸಮಸ್ಯೆ. ರಶ್ಯದ ಸಂವಿಧಾನದ ಪ್ರಕಾರ ಅಧ್ಯಕ್ಷರು ಅನಾರೋಗ್ಯದಿಂದ ಅಧಿಕಾರ ಚಲಾಯಿಸಲು ಆಗದಿದ್ದರೆ, ಆ ಅಧಿಕಾರವನ್ನು ಪ್ರಧಾನ ಮಂತ್ರಿ ವಹಿಸಿಕೊಳ್ಳಬೇಕೆಂದಿದೆ. ಆದರೆ ಇದುವರೆಗೆ ಈ ಸಂವಿಧಾನದ ನೀತಿಯನ್ನು ಪಾಲಿಸುವ ಮುತ್ಸದ್ದಿತನ ಇದುವರೆಗೆ ಯೆಲ್ಸಿನ್ ಆಗಲಿ ಯೆಲ್ಸಿನ್ ನ ಬೆಂಬಲಿಗರಾಗಲಿ ತೋರಿಸಿಲ್ಲ. ಯೆಲ್ಸಿನ್ ಗೆ ಏನು ರೋಗವೋ ಗೊತ್ತಿಲ್ಲ, ಅದರಿಂದ ರಶ್ಯಕ್ಕಂತೂ ಗರಬಡಿದಂತಾಗಿದೆ.



ಧರಣಿಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ಕುಳಿತಿರುವ ಅಂಗನವಾಡಿ ಸಹಾಯಕಿಯರು. ಇತರ ಮುಷ್ಕರ ನಿರತ ನೌಕರರನ್ನು ಉದ್ದೇಶಿಸಿ ... ಜಿಲ್ಲಾ ಕಾರ್ಯದರ್ಶಿ ..., ಜಿಲ್ಲಾ ಉಪಾಧ್ಯಕ್ಷರಾದ ..., ತಾಲೂಕು ಕಾರ್ಯದರ್ಶಿ ಕೆ.ಸುಬ್ಬರಾಯರು, ಡಿವೈಎಫ್‌ಐ ... ಮಾತನಾಡಿದರು. ... ಬಳ್ಳಾರಿ, ಲಲಿತಮ್ಮ,ಜ್ಯೋತಿ, ಮಂಗಳ,ರುದ್ರಮ್ಮ ಮುಂತಾದವರು ಮುಷ್ಕರದ ನೇತೃತ್ವ ವಹಿಸಿದ್ದರು.

ಅಂಗನವಾಡಿ ನೌಕರರ ಯಶಸ್ವಿ ರಾಜ್ಯ ವ್ಯಾಪಿ ಪ್ರತಿಭಟನೆ

ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿ ಯರ ಫೆಡರೇಷನ್‌ನ ಕರೆಯ ಮೇರೆಗೆ ಜನವರಿ 31 ರಂದು ಅಂಗನವಾಡಿ ಕಾರ್ಯಕರ್ತೆಯರನ್ನು ಮತ್ತು ಸಹಾಯಕಿಯರನ್ನು ಖಾಯಂ ಮಾಡಬೇಕೆಂದು, ಕಾರ್ಯಕರ್ತೆಯರಿಗೆ 1200 ಹಾಗೂ ಸಹಾಯಕಿ ಯರಿಗೆ 800 ರೂ ಸಂಬಳ ಕೊಡಬೇಕು. ಅಂಗನವಾಡಿ ಕೇಂದ್ರಗಳ ಖಾಸಗೀಕರಣ ವನ್ನು ಕೈಬಿಡಬೇಕು. ಬೋನಸ್ ಕೊಡಬೇಕು. ಹಾಗೂ ರಾಜ್ಯದಲ್ಲಿ ಆಹಾರ ಖರೀದಿಯಲ್ಲಿನ ... ಕೋಟಿಯ ಅವ್ಯವಹಾರ ಬಗ್ಗೆ ತನಿಖೆ ಮಾಡಬೇಕು ಮುಂತಾದ 15 ಬೇಡಿಕೆಗಳನ್ನಿಟ್ಟು ಕರ್ನಾಟಕ ರಾಜ್ಯ (ಸಿ.ಐ.ಟಿ.ಯು) ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ರಾಜ್ಯದ ಜಿಲ್ಲಾ ಕೇಂದ್ರ ಗಳು ಹಾಗೂ ತಾಲೂಕ ಕೇಂದ್ರಗಳಲ್ಲಿ ಪ್ರತಿ ಭಟನೆ ಮತ್ತು ಬಹಿರಂಗಸಭೆಗಳು ನಡೆದವು.

ಮಂಡ್ಯ: ಮಂಡ್ಯ ತಾಲೂಕ ಸಮಿತಿಯ ನೇತೃತ್ವದಲ್ಲಿ ಅಂಗನವಾಡಿ ಕೇಂದ್ರಗಳನ್ನು ಮುಚ್ಚಿ ಜಿಲ್ಲಾ ಕಛೇರಿಯ ಮುಂದೆ ನೂರಾರು ಕಾರ್ಯಕರ್ತೆಯರು ಪ್ರತಿಭಟನೆ ಧರಣಿಯನ್ನು ನಡೆಸಿದರು. ಈ ಕಾರ್ಯಕ್ರಮದಲ್ಲಿ ಮಳವಳ್ಳಿ ತಾಲೂಕಿನ ಕಾರ್ಯಕರ್ತೆಯರು ಭಾಗವಹಿಸಿದ್ದರು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ, ಧರಣಿಯನ್ನು ದ್ದೇಶಿಸಿ ಮಾತನಾಡಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕೆಲಸಗಳಲ್ಲದೆ ಸರ್ಕಾರ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡಲು ಇವರಿಗೆ ಅರ್ಹತೆ ಇದೆ ಆದರೆ ಇವರಿಗೆ ಖಾಯಂ ಮಾಡಿ ಎಂದಾಗ ಇವರಿಗೆ ಅರ್ಹತೆ ಇರು ವುದಿಲ್ಲ ಎಂದು ಈ ದ್ವಿಮುಖ ನೀತಿಯನ್ನು ಖಂಡಿಸಿದರು. ಧರಣಿಗೆ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ಕೃಷ್ಣಗೌಡ ಬೆಂಬಲ ಸೂಚಿಸಿ ಶುಭ ಕೋರಿದರು. ಕಾರ್ಯಕ್ರಮದ ನೇತೃತ್ವ ವನ್ನು ಷಹ ಜಹಾನ, ಮನು, ಮಂಗಳಾ, ಹಾಗೂ ಚೌಡಮ್ಮ ವಹಿಸಿದ್ದರು.

ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕು ಕೇಂದ್ರದಲ್ಲಿ ಸಿ.ಡಿ.ಪಿ.ಓ. ಕಾರ್ಯಾಲಯದ ಮುಂದೆ ಸಂಘದ ಅಧ್ಯಕ್ಷರಾದ ಚನ್ನಮ್ಮ ಚಿಕ್ಕಲ್ ಕಾರ್ಯದರ್ಶಿ ಬಿರೆದಾರ್ ಹಾಗೂ ರಾಜ್ಯ ಸಮಿತಿ ಸಂಸ್ಥೆ ಆಶಾಬಿ ಅರಕೇರಾ ನೇತೃತ್ವದಲ್ಲಿ 250 ಕಾರ್ಯಕರ್ತೆಯರು ಮೆರವಣಿಗೆ ಮುಖಾಂತರ ಬಂದು ಧರಣಿ ನಡೆಸಿದರು. ಈ ಕಾರ್ಯಕ್ರಮದ ಬೆಂಬಲವಾಗಿ ಗಿರಿಯಪ್ಪ ಪ್ರಾಂತ ರೈತ ಸಂಘದ ಬಸವನಗೌಡ ದೇಸಾಯಿ ಸಂಘದ ಕಾರ್ಯದರ್ಶಿ ಎಮ್.ಬಿ. ನಾಡಗೌಡ ಭಾಗವಹಿಸಿದ್ದರು.

ಗುಲ್ಬರ್ಗ : ಗುಲ್ಬರ್ಗ ಜಿಲ್ಲೆಯ ಆಳಂದ ಶಹಪುರ, ಯಾದಗಿರಿ, ಅಫ್ ಜಲ್‌ಪುರ ಚಿಂಚೋಳಿ ಹಾಗೂ ಗುಲ್ಬರ್ಗ ತಾಲೂಕು ಕೇಂದ್ರಗಳಲ್ಲಿ ಸಾವಿರಾರು ಕಾರ್ಯಕರ್ತೆಯರು. ಭಾಗವಹಿಸಿ ಪ್ರತಿಭಟನೆ ನಡೆಸಿದರು.

ಬೀದರ್: ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ ಹಾಗೂ ಹುಮ್ನಾಬಾದ್ ತಾಲೂಕು ಕೇಂದ್ರಗಳಲ್ಲಿ 500 ಹಾಗೂ 400 ಕಾರ್ಯಕರ್ತೆಯರು ಬೀದಿ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಿ.ಡಿ.ಪಿ.ಓ ಕಛೇರಿಯ ಮುಂದೆ ಧರಣಿ ನಡೆಸಿ ನಂತರ ಮನವಿ ಪತ್ರ ಸಲ್ಲಿಸಿ ದರು.

ದೊಡ್ಡಬಳ್ಳಾಪುರ:ದೊಡ್ಡಬಳ್ಳಾಪುರದ ಪುರಸಭೆಯಿಂದ ಸುಮಾರು 200 ಅಂಗನವಾಡಿ ಕಾರ್ಯಕರ್ತೆಯುರು ಮೆರವಣಿಗೆ ಹೊರಟು ತಾಲೂಕು ಕಛೇರಿಯ ಮುಂದೆ ಧರಣಿ ನಡೆಸಿದರು. ತಾಲೂಕಿನಾದ್ಯಂತ ಅಂಗನ ವಾಡಿ ಕೇಂದ್ರಗಳನ್ನು ಮುಚ್ಚಿ ಈ ಪ್ರತಿ ಭಟನಾ ಮೆರವಣಿಗೆ ಮತ್ತು ಧರಣಿ ಕಾರ್ಯಕ್ರಮದಲ್ಲಿ ನೌಕರರು ಭಾರಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ದೊಡ್ಡಬಳ್ಳಾಪುರದ ಜನರೇ ಹೇಳುವಂತೆ ಇದೊಂದು ಹೊಸದಾದ ಇತಿಹಾಸ. ಮಹಿಳೆಯರ ಸಮಸ್ಯೆಗಳ ಆಧಾರದಲ್ಲಿ ಮಹಿಳೆಯರದ್ದೇ ಆದ ಮೆರವಣಿಗೆ ಹೋರಾಟಗಳು ಇಲ್ಲಿಯವರೆಗೆ ನಡೆದಿರಲಿಲ್ಲ, ಇದೊಂದು ಶುಭಾರಂಭ. ದೊಡ್ಡಬಳ್ಳಾಪುರದ ಮುಖ್ಯರಸ್ತೆಯಲ್ಲಿ ಹೊರಟ ಮೆರವಣಿಗೆಯನ್ನು ನೂರಾರು ಜನ ಬೆರಗುಗಣ್ಣಿನಿಂದ ನೋಡಿದರು. ಮೆರವಣಿಗೆಯ ನಂತರ ತಹಸೀಲ್ದಾರರಿಗೆ ಮನವಿ ಅರ್ಪಿಸಲಾಯಿತು. ಸಭೆಯನ್ನುದ್ದೇಶಿಸಿ ಮಾತನಾಡಿದ ಅಂಗನವಾಡಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಎನ್. ಪ್ರಭಾ ಮಾತ ನಾಡುತ್ತಾ ಅಂಗನವಾಡಿ ನೌಕರರಿಂದ ಗರ್ಭಿಣಿಯರಿಗೆ, ಬಾಣಂತಿಯರಿಗೆ ಮಕ್ಕಳಿಗೆ ಹಾಗೂ ಊರಿನ ಜನರಿಗೆ ಪೌಷ್ಠಿಕ ಆಹಾರದ ಬಗ್ಗೆ, ಆರೋಗ್ಯದ ಬಗ್ಗೆ ಪಾಠ ಮಾಡಿಸುವ ಸರಕಾರ ಅಂಗನವಾಡಿ ನೌಕರರಿಗೆ ಕೇವಲ 200-400 ಸಂಬಳ ನೀಡುತ್ತಿದೆ. ಪೌಷ್ಠಿಕ ಆಹಾರದ ಬಗ್ಗೆ ಪಾಠ ಹೇಳಿದರೆ ಹೊಟ್ಟೆ ತುಂಬುತ್ತದೆಯೇ? ಎಂದು ಪ್ರಶ್ನಿಸಿದರು.

ಹೋರಾಟಕ್ಕೆ ಬೆಂಬಲ ಸೂಚಿಸಿ ಡಿವೈಎಫ್‌ಐನ ತಾಲೂಕು ಅಧ್ಯಕ್ಷರಾದ ಕಾಂ. ಹೇಮಂತರಾಜು ಮಾತನಾಡಿದರು. ಪ್ರಾಂತ ರೈತ ಸಂಘದ ತಾಲ್ಲೂಕು ಉಪಾಧ್ಯಕ್ಷರೂ ವಕೀಲರೂ ಆದ ಕಾಂ.ರೇಣುಕಾರಾಧ್ಯ ಅವರೂ ಮಾತನಾಡಿದರು. ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಎನ್.ಪಂಕಜ ಮಾತನಾಡಿ ಇಂದು ಸಮಾಜ ಸೇವಾಕರ್ತರು ರಾಜಕೀಯ ಕುತಂತ್ರಗಳಿಗೆ ಬಲಿಯಾಗುತ್ತಿದ್ದಾರೆ, ಸಾಮಾಜಿಕ ಮೌಢ್ಯಗಳ ವಿರುದ್ಧ ಕೆಲಸ ಮಾಡಿದ ಬಾನ್ವರಿದೇವಿ ಸಾಮೂಹಿಕ ಅತ್ಯಾಚಾರಕ್ಕೊಳಗಾದರು. ಸರಕಾರವಾಗಲೀ ನ್ಯಾಯಾಲಯವಾಗಲೀ ಅವಳಿಗೆ ರಕ್ಷಣೆ ಕೊಡಲಿಲ್ಲ, ಗೌರವಧನ ಪಡೆದುಕೊಂಡು ಕೆಲಸ ಮಾಡುತ್ತಿರುವ ನೀವುಗಳೂ ಸಹ ನೂರಾರು ಸಂಕಷ್ಟಗಳನ್ನು ಎದುರಿಸುತ್ತಿದ್ದೀರಿ, ನಾವೆಲ್ಲಾ ಸೇರಿ ಐಕ್ಯ ಹೋರಾಟ ನಡೆಸುವುದು ಅನಿವಾರ್ಯ ಎಂದರು.

ಕಯ್ಯೂರು ಇಂದು



ಇಲ್ಲಿ ಎಲ್ಲರೂ ಕಮ್ಯುನಿಸ್ಟರಾಗಿಯೇ ಹುಟ್ಟುತ್ತಾರೆ- ಇತ್ತೀಚೆಗೆ 'ದಿ ವೀಕ್' ಪತ್ರಿಕೆ ವ್ಯಕ್ತಪಡಿಸಿದ ಪ್ರಶಂಸೆ ಇದು. ಕಯ್ಯೂರು ಯಾರಿಗೆ ತಾನೇ ಗೊತ್ತಿಲ್ಲ?

ಮಡತ್ತಿಲ್ ಅಪ್ಪು, ಪೊಡವರ ಕುಂಞಂಬು, ಚಿರಕುಂಡನ್, ಅಬೂಬಕ್ಕರ್, ಸಿ.ಕೆ.ನಾಯರ್

1943 ಮಾರ್ಚ್ 28

ಕಯ್ಯೂರಿನ ಈ ವೀರರು ಗಲ್ಲಿಗೇರಲು ಇದ್ದದ್ದು ಇನ್ನು ಒಂದೇ ದಿನ. ಆದರೂ ಅವರಲ್ಲಿ ವಿಶ್ವಾಸ ಬತ್ತಿರಲಿಲ್ಲ.

"ನಾನು ನಮ್ಮ ಜನರಿಗಾಗಿ ಏನೆಲ್ಲ ಮಾಡಲು ಸಾಧ್ಯವಾಯಿತೋ ಅದೆಲ್ಲವನ್ನೂ ನಾನು ನಮ್ಮ ಪಕ್ಷದಿಂದಲೇ ಕಲಿತೆ. ನನ್ನ ಕರ್ತವ್ಯವನ್ನು ಮಾಡಿದ್ದೇನೆಂದು ಪಕ್ಷ ತಿಳಿದರೆ ಸಾಕು. ಅಷ್ಟೇ ನನ್ನ ಬಯಕೆ" ಪೊಡವರ ಕುಂಞಂಬು ದೃಢವಾಗಿ ಹೇಳಿದ.

"ಪಕ್ಷ ಬಲಶಾಲಿಯಾಗಿ ಬೆಳೆಯುತ್ತಿರುವ ಶುಭವಾರ್ತೆ ತಂದಿದ್ದೀರಿ. ನಾವು ನೇಣುಗಂಬವನ್ನೇರಿ ಪಕ್ಷಕ್ಕೆ ಇನ್ನಷ್ಟು ಶಕ್ತಿಯನ್ನು ತುಂಬುತ್ತೇವೆ. ನಾವು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮತ್ತು ಅದಕ್ಕೋಸ್ಕರ ಪ್ರಾಣಾರ್ಪಣೆ ಮಾಡಲು ಸಹ ಸಿದ್ಧರಾಗಿಯೇ ಪಕ್ಷವನ್ನು ಸೇರಿದೆವು. ನಮ್ಮ ಕರ್ತವ್ಯ ನೆರವೇರಿಸಿದೆವು" ಎಂದು ಎದೆತುಂಬಿ ಹೇಳಿದ್ದು ಮಡತ್ತಿಲ್ ಅಪ್ಪು.

"ನಾವು ಕೇವಲ ನಾಲ್ಕು ಮಂದಿ ಕೃಷಿಕ ಮಕ್ಕಳು. ನಮ್ಮ ದೇಶದಲ್ಲಿ ಕೋಟಿಗಟ್ಟಲೆ ಕೃಷಿಕರಿದ್ದಾರೆ. ನಮ್ಮನ್ನು ಗಲ್ಲಿಗೇರಿಸಿ ಕೊಲ್ಲಬಹುದು. ಆದರೆ ಕೃಷಿಕರನ್ನೆಲ್ಲ ನಾಶ ಮಾಡಲು ಸಾಧ್ಯವಿಲ್ಲ. ಇದು ನಮಗೆ ಧೈರ್ಯ ತುಂಬುತ್ತದೆ. ನಮ್ಮ ಜನರಿಗೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಅವಕಾಶವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ ಎಂಬ ಚಿಂತೆಯೊಂದೇ ನಮ್ಮನ್ನು ಕಾಡುತ್ತಿದೆ. ನಮ್ಮಲ್ಲಿ ಮತ್ತೆ ಜೀವ ಚಿಗುರುವುದು ಸಾಧ್ಯವಾಗುತ್ತಿದ್ದರೆ ನಾವು ಮತ್ತೆ ಮತ್ತೆ ಜನರ ಸಲುವಾಗಿ ಪ್ರಾಣಾರ್ಪಣೆ ಮಾಡುತ್ತಿದ್ದೆವು" ಎಂದದ್ದು ಚಿರಕುಂಡನ್.

"ಹಿಂದೆ ದೇಶಕ್ಕಾಗಿ, ಜನತೆಗಾಗಿ ಬಲಿದಾನ ನೀಡಿದ ಹುತಾತ್ಮರಿಂದ ಬಹಳ ಸ್ಫೂರ್ತಿ ಪಡೆದಿದ್ದೇವೆ, ಪಾಠ ಕಲಿತಿದ್ದೇವೆ. ಒಂದು ದಿನ ನಾವೂ ಸಹಾ ಅವರ ಸಾಲಿಗೆ ಸೇರುತ್ತೇವೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ. ನಾವು ಯಾವುದೇ ಅಳುಕಿಲ್ಲದೆ ನೇಣುಗಂಬ ಏರುತ್ತೇವೆಂದು ನಮ್ಮ ಸಂಗಾತಿಗಳಿಗೆ ಹೇಳಿ. ನನ್ನ ತಮ್ಮಂದಿರು ಇನ್ನೂ ಚಿಕ್ಕವರು, ಪಕ್ಷದ ಕೆಲಸಗಳಿಗಾಗಿ ಅವರಿಗೆ ಶಿಕ್ಷಣ ನೀಡಿ" ಎಂದದ್ದು ಅಬೂಬಕ್ಕರ್.

ಇಂತಹ ಕಯ್ಯೂರು, ಕೆಂಬಾವುಟವನ್ನು ಎತ್ತಿ ಹಿಡಿದ ಕಯ್ಯೂರು ಈಗ ಹೇಗಿದೆ ಎಂದು 'ದಿ ವೀಕ್' ಪತ್ರಿಕೆ ಇಡೀ ಕಯ್ಯೂರಿನಲ್ಲಿ ಸಂಚಾರ ನಡೆಸಿದಾಗ ಸದಾ ಕಮ್ಯುನಿಸ್ಟರ ವಿರುದ್ಧ ಅಪಪ್ರಚಾರ ಮಾಡುವುದರಲ್ಲಿಯೇ ನಿರತರಾಗಿರುವ 'ಮಲಯಾಳಂ ಮನೋರಮಾ'ದ ಸೋದರಿ ಪತ್ರಿಕೆ 'ವೀಕ್'ಗೆ ವಿಷಯವೇ ಸಿಗಲಿಲ್ಲ.

ಕಯ್ಯೂರಿನಲ್ಲಿ ಅಂದು ಮೊಳೆತ ವಿಶ್ವಾಸ ಇನ್ನೂ ಬಾಡಿಲ್ಲ. ಬದಲಿಗೆ ಕೆಂಬಾವುಟದ ದಾರಿಯಲ್ಲಿ ಎಲ್ಲರೂ ಹೆಜ್ಜೆ ಹಾಕುತ್ತಿರುವುದನ್ನು ಕಂಡು ಆ ಪತ್ರಿಕೆ ಬೆರಗಿನಿಂದ ಬರೆಯಿತು.- 'ಇಲ್ಲಿ ಎಲ್ಲರೂ ಕಮ್ಯುನಿಸ್ಟರಾಗಿಯೇ ಹುಟ್ಟುತ್ತಾರೆ'

1943 ರಿಂದಲೂ ಕಯ್ಯೂರು ಕಮ್ಯುನಿಸ್ಟ್ ಪಕ್ಷದ ಜೊತೆಗೆ ನಂತರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜೊತೆಗೆ ಹೆಜ್ಜೆ ಹಾಕಿದೆ.

ಕಯ್ಯೂರಿನ ಪ್ರತೀ ಪಕ್ಷದ ಕಚೇರಿಯೂ ಶಾಲಾಬಾಲಕರಿಂದ ಹಿರಿಯರವರೆಗೆ ಎಲ್ಲರನ್ನೂ ಆಕರ್ಷಿಸುತ್ತಿದೆ. 'ದೇಶಾಭಿಮಾನಿ', 'ಪೀಪಲ್ಸ್ ಡೆಮಾಕ್ರಸಿ' ಓದಿ ರಾಜಕೀಯ ಚರ್ಚಿಸುವುದು ಇಲ್ಲಿಯ ಪ್ರೀತಿಯ ಹವ್ಯಾಸ. ಶಾಲೆ ಬಿಟ್ಟ ತಕ್ಷಣ ಮಕ್ಕಳು ಇಲ್ಲಿ ಹಾಜರ್! 'ದೇಶಾಭಿಮಾನಿ'ಗಾಗಿ.

ಕಯ್ಯೂರು ರೈತ ಹೋರಾಟದಲ್ಲಿ ತನ್ನ ಮಗನನ್ನು ಕಳೆದುಕೊಂಡ ಸುಶೀಲಾ ಹೇಳುತ್ತಾರೆ "ಪಕ್ಷ ಯಾವಾಗಲಾದರೂ ಸಭೆ ಕರೆಯಲಿ, ಜನ ಇನ್ನಿಲ್ಲದಷ್ಟು ಸಂಖ್ಯೆಯಲ್ಲಿ ಸಭೆಗೆ ಹೋಗುತ್ತಾರೆ'

'ಇಲ್ಲಿ ಅಸಮಾನತೆ ಎಂಬುದಿಲ್ಲ. ನಾವು ಇದಕ್ಕಾಗಿ ಪಕ್ಷಕ್ಕೆ ಕೃತಜ್ಞತೆ ಹೇಳಬೇಕು' ಎನ್ನುತ್ತಾನೆ ಯುವರೈತ ಸುನೀಲ್.

ಕಯ್ಯೂರಿನ ಬಗ್ಗೆ ವಿವರ ಮಾಹಿತಿಗಾಗಿ ಓದಿ

ಕಯ್ಯೂರಿನ ರೈತ ವೀರರು
- ಫಕೀರ್ ಮಹಮದ್ ಕಟ್ಪಾಡಿ
ಬೆಲೆ 22 ರೂ.
ನವಕರ್ನಾಟಕ ಪ್ರಕಾಶನ,ಎಂಬೆಸಿ ಸೆಂಟರ್, ಕ್ರೆಸಂಟ್ ರಸ್ತೆ, ಬೆಂಗಳೂರು-560001

ಅಣಕ

ನ್ಯೂಮೋನಿಯಾ ಮತ್ತು ಪ್ರಜಾ-ಸತ್ತೆ .... 'ಸ್ಕೂಪ್' 'ಸ್ಕೂಪ್'

ರಶ್ಯಾದ ಅಧ್ಯಕ್ಷ ಯೆಲ್ಸಿನ್‌ರಿಗೆ ನ್ಯೂಮೋನಿಯಾ ಆಗಿದೆ ಅಂತ ಸುದ್ದಿ ಬಂದಿತ್ತಲ್ಲ, ರಶ್ಯಾದ ವಿವರವಾದ ವರದಿ ಮಾಡಲು ನಮ್ಮ ನಕ್ಷತ್ರಕನನ್ನು ಮಾಸ್ಕೋಗೆ ಕಳಿಸಿದ್ದೇವೆ. ಯೆಲ್ಸಿನ್ ವಿಶ್ರಾಂತಿ ಗೃಹಕ್ಕೆ ನುಗ್ಗುವುದು ಏನು ಸಾಮಾನ್ಯ ವಿಷಯವಲ್ಲ. ಯೆಲ್ಸಿನ್ನರ ಮಂಚದ ಕೆಳಗಿನಿಂದ ನಮ್ಮ ನಕ್ಷತ್ರಕ ವರದಿ ಮಾಡಿದ್ದಾನೆ. ಜಗತ್ತಿನ ಯಾವುದೇ ಪತ್ರಿಕೆ, ಸುದ್ದಿ ಸಂಸ್ಥೆಗೆ ಸಿಗದ ವಿಶೇಷ ವರದಿ-ಪತ್ರಕರ್ತರ ಭಾಷೆಯಲ್ಲಿ ಇದಕ್ಕೆ 'ಸ್ಕೂಪ್' ಅಂತಾರಂತೆ. ಅದೇನು ಸ್ಕೂಪೋ? ನಿಮಗೆ ಮಜಾ ತಗೊಳ್ಳಾಕೆ ಅಂತೂ 'ಸ್ಕೋಪ್' ಇದೆ!

ನಕ್ಷತ್ರಕ(ಮಂಚದ ಅಡಿಯಿಂದ) - ಜಗತ್ತಿನ ನಾಲ್ಕು ಮಾಜಿ ಗಣ್ಯರು ಯೆಲ್ಸಿನ್ನರ ಆರೋಗ್ಯ ವಿಚಾರಿಸಿಕೊಳ್ಳಾಕೆ ಬರ್ತಾ ಇದ್ದಾರೆ)

ಎಲ್ಲಾ ಗಣ್ಯರು: ಯೆಲ್ಸಿನ್ನರೇ! ನಿಮಗೆ ತೀವ್ರ ಕಾಯಿಲೆ ಅಂತ ಗೊತ್ತಾಯ್ತು. ನಿಮ್ಮನ್ನು ನೋಡಿಕೊಂಡು ಹೋಗೋಣ ಅಂತ ಬಂದ್ವಿ. ನಿಮ್ಮ 66ನೇ ಹುಟ್ಟು ಹಬ್ಬ ಬೇರೆ. ನೀವು ಗುಣಮುಖರಾಗಿ ನೂರು ವರ್ಷ ಬಾಳಿ, ರಶ್ಯಾದಲ್ಲಿ ಮಾತ್ರ ಅಲ್ಲ ಜಗತ್ತಿನಲ್ಲೇಪ್ರಜಾಸತ್ತೆ ಉಳಿಬೇಕೆಂದ್ರೆ ನೀವು ನೂರು ವರ್ಷ ಬಾಳ್ಬೇಕು ಅಂತ ನಮ್ಮ ಹಾರೈಕೆ.

ಯೆಲ್ಸಿನ್:(ಗದ್ಗದರಾಗಿ-ನ್ಯೂಮೋನಿಯಾದಿಂದ ಅಲ್ಲ!) ನೋಡಿ ಸಾರ್ ಎಷ್ಟು ವಿಶಾಲವಾದ ಹೃದಯ ನಿಮ್ದು. ಅಷ್ಟು ದೂರದಿಂದ ಬಂದು ಶುಭ ಹಾರೈಸ್ತಾ ಇದ್ದೀರಾ. ಆದರೆ ನಮ್ಮ ಜನ ನೋಡಿ. ಮುದುಕ ಯಾವಾಗ ಗೊಟಕ್ ಅಂತಾನೆ ಅಂತ ತುದಿಗಾಲ ಮೇಲೆ ಕಾದಿದ್ದಾರೆ.

ಬುಶ್:(ಮಾಜಿ ಅಮೆರಿಕನ್ ಪ್ರಧಾನಿ) ಅಯ್ಯೋ ಬಿಡಿ ಸಾರ್! ಎಲ್ಲಾ ಕಡೆ ಹೀಗೇನೆ. ನನ್ನದೇ ಕೇಸು ತಗೊಳ್ಳಿ, ನಾನು ಎದ್ದು ಬಿದ್ದು ಎಲ್ಲರಿಗೂ ತಲೆ ಸವರಿ ಕೂಟ ಮಾಡಿ, ಸದ್ದಾಂ ಹುಸೇನರನ್ನು ಬಗ್ಗು ಬಡಿಯೋಕೆ ಕೊಲ್ಲಿಯುದ್ಧ ಮಾಡ್ಸಿ ಗೆದ್ದೆ. ಅಮೆರಿಕಾವೇ ಜಗತ್ತಿನಲ್ಲಿ ಏಕಮಾತ್ರ ಸೂಪರ್ ಪವರ್ ಅನ್ನೋ ಥರ ಮಾಡ್ದೆ. ನನ್ನನ್ನು ಇನ್ನೊಂದು ಸರಿ ಅಧ್ಯಕ್ಷ ಮಾಡೋದು ದೂರ ಇರ್ಲಿ, ಕ್ಯಾರೇ ಅಂತ ಮಾತನಾಡಿಸುವವರಿಲ್ಲ.

ವಲೆಸಾ:(ಮಾಜಿ ಪೋಲೆಂಡ್ ಅಧ್ಯಕ್ಷ) ನಿಮ್ಮ ಕೇಸ್‌ನಲ್ಲಿ ಏನೋ ಕಾಲು ಕೆದರಿಕೊಂಡು ಜಗಳ ಕಾಯ್ದು ಅಂತ ಜನ ಅಂದ್ಕೊಂಡಿರಬಹುದು. ನನ್ನ ನೋಡಿ. ನಾನು ಎಲೆಕ್ಟ್ರಿಶಿಯನ್. ಸಮಾಜವಾದಕ್ಕೆ ಶಾರ್ಟ್ ಸರ್ಕಿಟ್ ಮಾಡಿಸಿ ಪ್ರಜಾಸತ್ತೆಗೆ ಕನೆಕ್ಷನ್ ಕೊಟ್ಟೆ. ಮೊದಲನೇ ಚುನಾವಣೆಯಲ್ಲೇ ನನ್ನನ್ನು ಮನೆಗೆ ಕಳಿಸೋದಾ?

ಥ್ಯಾಚರ್(ಮಾಜಿ ಬ್ರಿಟಿಷ್ ಪ್ರಧಾನಿ): ಅಯ್ಯೋ! ನಿಮ್ಮದೇನು ಮಹಾ! ನನ್ನ ಜೀವ ತೇಯ್ದು ಬ್ರಿಟಿಷ್ ಯೂನಿಯನ್ ಗಳಿಗೆ, ಕಾರ್ಮಿಕರಿಗೆ ಮುಟ್ಟಿಕೊಂಡು ನೋಡ್ಕೋಬೇಕು ಹಾಗೆ ಬುದ್ಧಿ ಕಲಿಸಿದೆ. ಕಲ್ಲಿದ್ದಲು ಗಣಿ ಕಾರ್ಮಿಕರಿಗಂತೂ ಸೊಂಟ ಮುರಿದು ಪುನಃ ತಲೆ ಎತ್ತದಂತೆ ಮಾಡ್ದೆ. ನಮ್ಮ ದೇಶದ ಜನ ಯಾಕೆ ನನ್ನ ಪಕ್ಷದ ಜನರೂ ಎಂತಹ ಕೃತಘ್ನರು. ನನ್ನನ್ನು ಚುನಾವಣೆ ಮೊದಲೇ ಅಧಿಕಾರದಿಂದ ಇಳಿಸೇ ಬಿಡೋದೆ?

ಗೋರ್ಬಚೇವ್(ಮಾಜಿ ಸೋವಿಯತ್ ಅಧ್ಯಕ್ಷ): ಅದಕ್ಕೆ ನಿಮಗೆಲ್ಲಾ ಬುದ್ಧಿ ದೂರದೃಷ್ಟಿ ಇಲ್ಲ ಅನ್ನೋದು. ನಾನು ಇದಕ್ಕೆಲ್ಲಾ ಸ್ಕೋಪೇ ಕೊಡ್ಲಿಲ್ಲ. ನನ್ನ ಅಧಿಕಾರಕ್ಕೆ ಧಕ್ಕೆ ಬರ್ತದೆ ಅಂತ ಕಂಡ ಕೂಡ್ಲೆ ನನ್ನ ದೇಶ, ಪಕ್ಷ ಎರಡನ್ನೂ ವಿಸರ್ಜಿಸಿದೆ. ಹೆ...ಹೆ...ಹೆ..

ಯೆಲ್ಸಿನ್: ಏನ್ರೀ ಎಲ್ಲಾ ಜಗತ್ತಿನ ಮಾಜಿ ಗಣ್ಯರು ಬಂದಿದ್ದಾರೆ ಅಂತ ಸ್ಕೋಪ್ ತಗೊಳ್ತಾ ಇದ್ದೀರಾ. ಪಕ್ಷ, ದೇಶವನ್ನ ವಿಸರ್ಜಿಸಿದ್ದು ನೀವಾ? ಅಥವಾ ನಾನು ಒದ್ದು ನಿಮ್ಮಿಂದ ಮಾಡಿಸಿದ್ದಾ? ಸರಿಯಾಗಿ ನೆನಪು ಮಾಡ್ಕೊಳ್ಳಿ. ಸುಮ್ಮೇ ಕ್ರೆಡಿಟ್ ತಗೊಳ್ಬೇಡಿ!

ಬುಶ್: ಯಾಕೆ ಸುಮ್ಮನೇ ಕಿತ್ತಾಡ್ತೀರಾ? ನೀವಿಬ್ರು ಸೇರಿದ್ರಿಂದ ಕೆಲಸ ಸಲೀಸಾಯ್ತು. ಇಲ್ಲದಿದ್ದರೆ ನೀವಲ್ಲದಿದ್ರೆ ನಿಮ್ಮ ತಾತ ಯಾರನ್ನಾದ್ರೂ ಹಿಡಿದು ನಾನು ಆ ಕೆಲ್ಸ ಮಾಡ್ತಾ ಇದ್ದೆ. ಅದು ಬಿಡಿ, ಹುಡ್ಗರ ಜೊತೆ ಪಬ್ಲಿಕ್ಕಾಗಿ ಡಿಸ್ಕೋಡಾನ್ಸ್ ಮಾಡಿ ಇಲೆಕ್ಷನ್ ಗೆದ್ದುಆಸ್ಪತ್ರೆಲೀ ಉದ್ದಕ್ಕೂ ಮಲಗಿ ಬಿಟ್ಟಿದ್ದೀರಲ್ಲಾ ಪ್ರಜೆಗಳ , ಪ್ರಜಾಸತ್ತೆಯ ಗತಿ ಏನು?

ಯೆಲ್ಸಿನ್: ಅಯ್ಯೋ ಅದು ಬಿಡಿ! ಸುಮ್ನೆ ನ್ಯೂಮೋನಿಯಾ ಅಷ್ಟೇ. ಮಾಸ್ಕೋದಲ್ಲಿ ಈಗ ಭಾರಿ ಚಳಿನೋಡಿ. ಆದರೆ ನಾನು ಆಸ್ಪತ್ರೆಯಿಂದಲೇ ದೇಶ ಆಳ್ತಾ ಇದ್ದೀನಿ.

ಥ್ಯಾಚರ್: ನಿಜವಾಗಿಯೂ ನಿಮ್ಮ ಧೈರ್ಯ, ಪ್ರಜಾಸತ್ತೆ ಬಗ್ಗೆ ಆಸಕ್ತಿ ಮೆಚ್ಚಬೇಕು.


ವಲೆಸಾ: ಏನು ಹೇಳ್ತೀರಿ ನೀವು? ಈತ ಅಸಾಧ್ಯ, ಹೃದಯಕ್ಕೆ ಐದು ಬೈಪಾಸ್ ಆಪರೇಷನ್ ಮಾಡ್ತಾ ಇದ್ದಹಾಗೆ ಈತ ಐದು ಸುಗ್ರೀವಾಜ್ಞೆಗೆ ಸಹಿ ಹಾಕಿದರಂತೆ.

ಗೋರ್ಬಚೇವ್: ಆದರೆ ನಿಮಗೆ ಪಾರ್ಕಿನ್‌ಸನ್ ರೋಗ. ಇನ್ನು ನಡೆದಾಡುವುದು ಕಷ್ಟ. ಹೊಸ ಅಧ್ಯಕ್ಷರನ್ನು ಹುಡುಕಬೇಕು ಅಂತ ರಶ್ಯದ ತುಂಬಾ ಜನ ಮಾತಾಡ್ತಾ ಇದ್ದಾರಂತೆ. ಇನ್ನೂ ಕೆಲವರು ಏಡ್ಸೋ, ಕ್ಯಾನ್ಸರೋ ಇರಬೇಕು ಅಂತ ಹೇಳ್ತಾ ಇದ್ದಾರಂತೆ.

ಯೆಲ್ಸಿನ್(ರೇಗಿ): ಯಾವೋನ್ರಿ ಹೇಳಿದ್ದು. ನೀವೇನು ತಿರ್ಗಾ ಅಧ್ಯಕ್ಷರಾಗ್ಬೇಕು ಅಂತ ಏಟು ಹಾಕ್ತಾ ಇದ್ದೀರಾ. ನನಗೆ ಏಡ್ಸ್ ಇರ್ಲಿ, ಕ್ಯಾನ್ಸರ್ ಇರ್ಲಿ, ನಿಮ್ಮ ಥರ ಹೆದ್ರಿ ಓಡಿ ಹೋಗೋನಲ್ಲ. ಇಲ್ಲಾ ನಾನು ಬದುಕ್ಬೇಕು, ಇಲ್ಲಾ ಈ ದೇಶ ಬದುಕ್ಬೇಕು. ಆದರೆ ನಾನೇ ಈ ದೇಶದ ಅಧ್ಯಕ್ಷ. ನಾನು ಸಾಯೋದಾದ್ರೆ ಈ ದೇಶಾನೂ ನನ್ನ ಹಿಂದೆ ಸಾಯೋ ಹಾಗೆ ನೋಡ್ಕೋಳ್ತಿನಿ.

ಎಲ್ಲಾ ಗಣ್ಯರು: ಇದೇ ನೋಡಿ! ನಿಜವಾದ ಪ್ರಜಾ-ಸತ್ತೆ! ಪ್ರಜೆಗಳು ಸಾಯಲಿ, ಅಧ್ಯಕ್ಷರು ನೂರು ವರ್ಷ ಬಾಳಲಿ!! ಪ್ರಜಾ-ಸತ್ತೆ ಚಿರಾಯುವಾಗಲಿ!

ಸೈಬರ್ ಲೋಕದಲ್ಲಿ ಸುರ್ಜಿತ್



ಇತ್ತೀಚೆಗೆ ಹರ್ಕಿಶನ್‌ಸಿಂಗ್ ಸುರ್ಜಿತ್ ಸೈಬರ್ ಲೋಕದಲ್ಲಿ ಸಿಕ್ಕಿದ್ದರು. ಕಾಣದ ವ್ಯಕ್ತಿಗಳೊಡನೆ ಗಂಟೆಗಟ್ಟಲೆ ಹರಟೆ ಹೊಡೆದರು. ಅವರೂ ಅಷ್ಟೆ, ಕಾಣದ ಸುರ್ಜಿತ್ ಅವರಿಗೆ ಪ್ರಶ್ನೆಗಳ ಮಳೆ ಸುರಿಸಿದರು. ಯಾರೂ ಒಬ್ಬರಿಗೊಬ್ಬರು ಪರಿಚಿತರಲ್ಲ. ಒಂದೇ ಊರು, ಒಂದೇ ಕೇರಿ ಕೊನೆಗೆ ಒಂದು ದೇಶದವರೂ ಅಲ್ಲ. ವಿಶ್ವದ ಎಲ್ಲರ ಜೊತೆಗೆ 70 ನಿಮಿಷಗಳ ಕಾಲ ಸತತವಾಗಿ ಸುರ್ಜಿತ್ ತಮ್ಮ ಮನಸ್ಸನ್ನು ಬಿಚ್ಚಿಕೊಂಡರು.

ಸೈಬರ್‌ಲೋಕ ಎಂಬ ವಿಸ್ಮಯವೊಂದು ಈಗ ಜಗತ್ತಿನ ಮನೆಮಾತಾಗಿ ಹೋಗಿದೆ. ಗೋಳದ ಮೇಲೊಂದು ಸುತ್ತು ಬರಲು ಈ ಹಿಂದೆ ವರ್ಷಗಟ್ಟಲೆ ಸಮಯ ಬೇಕಾಗಿದ್ದರೆ ಈಗ ಕೆಲವೇ ನಿಮಿಷಗಳಲ್ಲಿ ಸುತ್ತಿಬರಬಹುದು. 'ಕೋಶ ಓದು, ದೇಶ ಸುತ್ತು' ಎಂಬುದು ಸೈಬರ್ ಲೋಕದಿಂದಾಗಿ ಎರಡು ಬೇರೆ ಬೇರೆ ಕೆಲಸಗಳಲ್ಲ, ದೇಶ, ಕೋಶ ಎಲ್ಲವನ್ನೂ ಸುತ್ತು ಹೊಡೆಯಬಹುದು. ಇಡೀ ವಿಶ್ವವನ್ನು ಅಂಗೈಯಲ್ಲಿ ತಂದು ಕೂರಿಸಿಕೊಳ್ಳುವ. ವಿಶಿಷ್ಟ ಲೋಕವೇ ಸೈಬರ್ ಲೋಕ.

ಕಂಪ್ಯೂಟರ್‌ನೊಂದಿಗೆ ಕಂಪ್ಯೂಟರ್‌ಗಳು ಬೆಸೆದುಕೊಂಡು ದೇಶಕ್ಕೊಂದು ಗಡಿ ಇದೆ ಎಂಬುದನ್ನೇ ಮರೆಸಿ ಇಡೀ ವಿಶ್ವವನ್ನು ಒಂದು ಹಳ್ಳಿಯಾಗಿಸಿದ ಮಾಧ್ಯಮ. 50 ಲಕ್ಷ ಕಂಪ್ಯೂಟರ್‌ಗಳು ಒಂದಕ್ಕೊಂದು ಜೋಡಣೆಗೊಂಡು ಹರಟೆ, ವ್ಯಾಪಾರ, ಮಾಹಿತಿ ವಿನಿಮಯ ಎಲ್ಲವನ್ನೂ ನಡೆಸುತ್ತಿರುವ ಜಾಗ ಇದು. ಸುಮಾರು ಎರಡು ಕೋಟಿ ಜನರು ಈಗ ಈ ಕಂಪ್ಯೂಟರ್ ಅದ್ಭುತ ಸೈಬರ್ ಲೋಕವನ್ನು ಬಳಸುತ್ತಿದ್ದಾರೆ(ಸೈಬರ್ ಲೋಕದ ಬಗ್ಗೆ ಹೆಚ್ಚಿನ ವಿವರಗಳಿಗೆ ಓದಿ : ಐಕ್ಯರಂಗ ಆಗಸ್ಟ್ 26-ಸೆಪ್ಟೆಂಬರ್1, 1996).

'ರಿಡಿಫ್ಯೂಷನ್' ಅಥವಾ 'ರಿಡಿಫ್' ಎಂದೇ ಖ್ಯಾತವಾಗಿರುವ ಸಂಸ್ಥೆ ಈ ಕಂಪ್ಯೂಟರ್ ಜಾಲದಲ್ಲಿ ತಿಂಗಳಿಗೊಮ್ಮೆ ಭಾರತದ ಪ್ರಮುಖ ನಾಯಕರನ್ನು ಭೇಟಿಮಾಡಿಸುತ್ತದೆ. ಇಂತಹ ಸಮಯದಿಂದ ಇಂತಹ ಸಮಯದವರೆಗೆ ಇಂತಹ ನಾಯಕರು ನಿಮಗೆ ಸಿಗುತ್ತಾರೆ ಎಂದು ಹಲವು ದಿನಗಳ ಮುಂಚೆಯೇ ಕಂಪ್ಯೂಟರ್ ಲೋಕಕ್ಕೆ ತಿಳಿಸುತ್ತಾರೆ. ಈ ಬಾರಿ ಸೈಬರ್ ಲೋಕದ ಆಯ್ಕೆ ಹರ್ಕಿಶನ್ ಸಿಂಗ್ ಸುರ್ಜಿತ್.

ಜನವರಿ 14ರಂದು ಹರ್ಕಿಶನ್ ಸಿಂಗ್ ಸುರ್ಜಿತ್ ಅವರು ಆಗ ತಾನೇ ಪಾಲಿಟ್‌ಬ್ಯೂರೋ ಸಭೆ ಮುಗಿಸಿ ಮನೆಗೆ ಬಂದಾಗ ಇವರು ಬಂದರು. ಕೈಯಲ್ಲೊಂದು ಕಂಪ್ಯೂಟರ್. ಕಂಪ್ಯೂಟರ್ ಮುಂದೆ ಕುಳಿತ ಸುರ್ಜಿತ್‌ರಿಗೆ ಮಹಾನ್ ಆಶ್ಚರ್ಯ. ಏಕೆಂದರೆ ಅಮೇರಿಕಾದಿಂದ ಹಿಡಿದು ಭಾರತದ ಮೂಲೆಯ ಹಳ್ಳಿಯವರೆಗೆ ಪ್ರಶ್ನೆಗಳೊಂದಿಗೆ ಕಾದು ಕುಳಿತಿದ್ದರು.

ಕೆಲವರು ಬೇಕಿಲ್ಲದ ಪ್ರಶ್ನೆ ಕೇಳಿದರೆ, ಕೆಲವರು ಸುರ್ಜಿತ್ ಹಲವು ಕಾಲದ ದೋಸ್ತಿಯೇನೋ ಎಂಬಂತೆ ಹರಟೆ ಹೊಡೆದರು. ಇನ್ನು ಕೆಲವರು ಗಂಭೀರವಾಗಿ ದೇಶದ ಪರಿಸ್ಥಿತಿ ಬಗ್ಗೆ ಚರ್ಚಿಸಿದರು. ದೇವೇಗೌಡರ ಭವಿಷ್ಯದ ಬಗ್ಗೆ ಮಾತನಾಡಿದರು. ಪಕ್ಷದ ಪಾಲಿಟ್‌ಬ್ಯೂರೋದಲ್ಲಿ ಬರೀ ವಯಸ್ಸಾದವರೇ ಇದ್ದಾರಾ? ಜ್ಯೋತಿ ಬಸು ಮೊನ್ನೆ ಹಾಗೆ ಮಾತನಾಡಿದ್ದು ಸರಿಯಾ? ನೀವು ದೇವರನ್ನು ನಂಬುತ್ತೀರಾ ಎಂಬ ಪ್ರಶ್ನೆಗಳು.

ಸುರ್ಜಿತ್ ನೇರವಾಗಿ ಉತ್ತರಿಸಿದರು. ನಾನು ನಾಸ್ತಿಕ ದೇವರಲ್ಲಿ ನಂಬಿಕೆ ಇಲ್ಲ. ಆದರೆ ದೇವರನ್ನು ನಂಬುವವರಿಗೆ ನನ್ನ ವಿರೋಧವಿಲ್ಲ. ಆದರೆ ಧರ್ಮದ ನಂಬಿಕೆಗಳನ್ನು ರಾಜಕಾರಣದೊಂದಿಗೆ ಬೆರೆಸಬಾರದು. ನಂಬಿಕೆ ಎಂಬುದು ಮನುಷ್ಯ ಮತ್ತು ದೇವರ ನಡುವಿನ ಸಂವಹನದ ಸಾಧನ. ರಾಜಕಾರಣದಲ್ಲಿ ಅದಕ್ಕೇನೂ ಕೆಲಸ ಇಲ್ಲ. ಪ್ರತಿಗಾಮಿ ಶಕ್ತಿಗಳಿಗೆ ಈ ದೇವರು ಧರ್ಮವನ್ನು ರಾಜಕಾರಣದಲ್ಲಿ ಬೆರೆಸಿ ಲಾಭ ಹೊಡೆಯುವುದೇ ಕೆಲಸ ಎಂದರು.


ಪಕ್ಷದ ಪೊಲಿಟ್‌ಬ್ಯೂರೋ ಎಂಬುದು ಹಳೆ ಬೇರು ಹೊಸ ಚಿಗುರುಗಳ ಮಿಶ್ರಣ ಎಂದ ಸುರ್ಜಿತ್ ಅವರು .ಪೊಲಿಟ್‌ಬ್ಯೂರೋ 15 ಸದಸ್ಯರನ್ನು ಹೊಂದಿದೆ. ಅದರಲ್ಲಿ ಕೇರಳದ ಎಸ್.ರಾಮಚಂದ್ರಪಿಳ್ಳೆ, ತಮಿಳುನಾಡಿನ ಉಮಾನಾಥ್, ಆಂಧ್ರಪ್ರದೇಶದ ಸೀತಾರಾಂ ಯೆಚೂರಿ, ದೆಹಲಿಯ ಪ್ರಕಾಶ್ ಕಾರಟ್‌ರಂತಹ ತರುಣರು ಇದ್ದಾರೆ. ನಮ್ಮ ಹಲವಾರು ಸಮಿತಿಗಳಲ್ಲಿ ತರುಣರು ಇದ್ದಾರೆ. ಸಿಪಿಎಂ ಎಂಬುದು ಕ್ರಾಂತಿಕಾರಿ ಪಕ್ಷ. ದುಡಿಯುವ ವರ್ಗದ ಹಿತಾಸಕ್ತಿಯನ್ನು ರಕ್ಷಿಸಲು ಯಾರಿಗೆ ಎಲ್ಲಿಯವರೆಗೆ ಕೊಡುಗೆ ನೀಡಲು ಸಾಧ್ಯವಾಗುತ್ತದೋ ಅಲ್ಲಿಯವರೆಗೆ ನಮ್ಮೊಂದಿಗಿರುತ್ತಾರೆ ಎಂದು ಸುರ್ಜಿತ್ ವಿವರಿಸಿದರು.

ದೇವೇಗೌಡರ ಸರಕಾರ ತನ್ನ ಅವಧಿಪೂರ್ಣ ಅಧಿಕಾರದಲ್ಲಿ ಉಳಿಯಬಹುದು. ಆದರೆ ಇದು ಆ ಸರಕಾರದ ಕಾರ್ಯ ವೈಖರಿ ಮತ್ತು ರಾಜಕೀಯ ಪರಿಸ್ಥಿತಿಯನ್ನು ಅವಲಂಬಿಸಿದೆ. ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಗಟ್ಟಲೆಂದೇ ಸಂಯುಕ್ತ ರಂಗ ಸರಕಾರವನ್ನು ರಚಿಸಲಾಯಿತು. ಈ ಸರಕಾರಕ್ಕೆ ಯಾವ ಆತಂಕವಿಲ್ಲ. ಆದರೆ ಈ ಸರಕಾರ ಜನತೆಯ ಆಶೋತ್ತರಗಳಿಗೆ ಸ್ಪಂದಿಸದಿದ್ದರೆ ಏನು ಬೇಕಾದರೂ ಆಗಬಹುದು ಎಂದರು.

ಸುಮಾರು 250ಕ್ಕೂ ಹೆಚ್ಚು ಮಂದಿ ಸೈಬರ್ ಲೋಕದಲ್ಲಿ ಸುರ್ಜಿತ್‌ರನ್ನು ಸಂಪರ್ಕಿಸಿದರು. ಇದರಲ್ಲಿ ಅಮೇರಿಕಾದಿಂದ ಬಂದ ಪ್ರಶ್ನೆಗಳೇ ಹೆಚ್ಚು. ಇದುವರೆಗೆ 'ರಿಡಿಫ್' ಸಂಸ್ಥೆ ನಡೆಸಿದ ಇಂತಹ ಚರ್ಚೆಯಲ್ಲಿ ಸುರ್ಜಿತ್ ಅವರಿಗೇ ವಿದೇಶದಿಂದ ಬಂದ ಪ್ರಶ್ನೆಗಳೇ ಹೆಚ್ಚು ಎಂಬುದು ದಾಖಲೆ ಎನಿಸಿದೆ.

ರಾತ್ರಿ 9.10ಕ್ಕೆ ಈ ಸೈಬರ್ ಮಾತುಕತೆಗೆ ಅಂತೂ ಕೊನೆ ಹಾಡಲಾಯಿತು. ಸೈಬರ್ ಲೋಕದ ಹೊಸ ಅನುಭವದಿಂದ ತುಂಬಾ ಸಂತೋಷಗೊಂಡಿದ್ದ ಸುರ್ಜಿತ್ 'ಈ ಲೋಕಕ್ಕೆ ನಾನು ಮತ್ತೆ ಬರುತ್ತೇನೆ' ಎಂದರು.

ಕಾಂ. ಮಳ್ಳೂರು ಕರಿಯಣ್ಣ ನಿಧನ



ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಹಿರಿಯ ಸಿಪಿಐ(ಎಂ) ಮುಖಂಡರೂ ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷರೂ ಆಗಿ ಹಲವು ದಶಕಗಳ ಕಾಲ ಬಡಜನರ, ರೈತರ ಸಂಘಟನೆಯಲ್ಲಿ ತೊಡಗಿದ್ದ ಮಳ್ಳೂರು ಕರಿಯಣ್ಣನವರು ಫೆಬ್ರವರಿ 3ರಂದು ನಿಧನರಾದರು. ಅವರಿಗೆ 61 ವರ್ಷ ವಯಸ್ಸಾಗಿತ್ತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ಪಕ್ಷದ ಮುಖಂಡರೂ, ಮಾಜಿ ಶಾಸಕರೂ ಆಗಿದ್ದ ಮಳ್ಳೂರು ಪಾಪಣ್ಣನವರ ಜೊತೆಯಲ್ಲಿಯೇ ಯುವಕರಾಗಿದ್ದಾಗಲೇ ಪಕ್ಷಕ್ಕೆ ಬಂದು ಕೊನೆ ಯವರೆಗೂ ದುಡಿದ ಮಳ್ಳೂರು ಕರಿಯಣ್ಣನವರು ಅನಾರೋಗ್ಯದಿಂದಾಗಿ ನಿಧನ ಹೊಂದಿದರು.

ಕಾಂ.ಕರಿಯಣ್ಣನವರ ಅಂತಿಮ ಮೆರವಣಿಗೆ ಯಲ್ಲಿ ಮಳ್ಳೂರಿನ ನೂರಾರು ಜನರು ಭಾಗವಹಿಸಿದ್ದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ರಾಮಚಂದ್ರರಾವ್ ರಾಜ್ಯ ಸಮಿತಿಯ ಪರವಾಗಿ ಗೌರವ ಸಲ್ಲಿಸಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ರಾಜ್ಯ ಸಮಿತಿ ಸದಸ್ಯರು ಹಾಗೂ ಕೋಲಾರ ಜಿಲ್ಲಾ ಮುಖಂಡರೂ ಆದ ಕೆ.ಎಂ.ವೆಂಕಟೇಶ್ ಮತ್ತು ಬಯ್ಯಾರೆಡ್ಡಿಯವರು, ಜನತಾದಳದ ಮುಖಂಡ ಮಾಜಿ ಶಾಸಕ ಮುನಿಶಾಮಪ್ಪ ಮತ್ತಿತರ ಮುಖಂಡರು ಕಾಂ. ಕರಿಯಣ್ಣನವರಿಗೆ ಅಂತಿಮ ಗೌರವ ಸಲ್ಲಿಸಿದರು.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ವಿ. ರಾಮಚಂದ್ರರಾವ್
ಸಂಪಾದಕರು: ವಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು